ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 12 ಮಂಗಳವಾರ 2024

45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 205 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದೇವೇಗೌಡರು, ಕುಮಾರಸ್ವಾಮಿ ಒಬ್ಬ ಒಕ್ಕಲಿಗನ ಬೆಳೆಯಲು ಬಿಟ್ಟಿಲ್ಲ... ಜೆಡಿಎಸ್‌ನಲ್ಲೇ ಇದ್ದರೆ ನಿಮ್ಮನ್ನು ಮುಗಿಸಿ ಬಿಡುತ್ತಾರೆ...

ಬೇಗ ಹೊರಗೆ ಬಾ ಅಂತಾ ಜಿ.ಟಿ.ದೇವೇಗೌಡರಿಗೆ ಎಚ್ಚರಿಸಿದ್ದೇನೆ...


ಮುಖ್ಯಮಂತ್ರಿ ಸಿದ್ದರಾಮಯ್ಯ

● ಚನ್ನಪಟ್ಟಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ● ಬುದ್ಧಿವಂತ, ರಾಜಕೀಯ ಪ್ರಜ್ಞೆ ಇರುವ ಒಕ್ಕಲಿಗರನ್ನು ದೇವೇಗೌಡರು ಮುಗಿಸುತ್ತಾರೆ! ● ನಾನು ಎರಡನೇ ಬಾರಿ ಮುಖ್ಯಮಂತ್ರಿ ಆಗಿದ್ದನ್ನು ಅವರಿಗೆ ಸಹಿಸಲಾಗುತ್ತಿಲ್ಲ ● ನಾನು, ಜಾಲಪ್ಪ ಇಲ್ಲದಿದ್ದರೆ ದೇವೇಗೌಡರು ಮುಖ್ಯಮಂತ್ರಿ ಆಗಲು ಸಾಧ್ಯವೇ ಇರಲಿಲ್ಲ

ಬೆಂಗಳೂರು, ನ.11(ಕೆಎಂಶಿ)– ಜೆಡಿಎಸ್‌ನಲ್ಲೇ ಇದ್ದರೆ ಹೆಚ್.ಡಿ.ದೇವೇಗೌಡರು ಮತ್ತು ಕುಮಾರಸ್ವಾಮಿ ನಿಮ್ಮನ್ನು ಮುಗಿಸಿಬಿಡುತ್ತಾರೆ. ಆದಷ್ಟು ಬೇಗ ಹೊರಗೆ ಬಂದರೆ ಒಳ್ಳೆಯದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಾಮುಂಡೇಶ್ವರಿ ಕ್ಷೇತ್ರದ ಶಾಸಕರೂ ಆದ ತಮ್ಮ ಹಳೆಯ ಮಿತ್ರ ಜಿ.ಟಿ.ದೇವೇಗೌಡರಿಗೆ ಎಚ್ಚರಿಕೆ ನೀಡಿದ್ದಾರೆ.

ಚನ್ನಪಟ್ಟಣ ಉಪಚುನಾವಣೆ ಪ್ರಚಾರದಲ್ಲಿ ಮಾತನಾಡುತ್ತಾ, ಸ್ವತಃ ಸಿದ್ದರಾಮಯ್ಯನವರೇ ಈ ವಿಚಾರ ತಿಳಿಸಿದ್ದು, ಮನೆ ಮಗ ಅಂತಿದ್ದ ಬಿ.ಎಲ್.ಶಂಕರ್, ವೈ.ಕೆ.ರಾಮಯ್ಯ ಅಂತಹವರನ್ನೇ ಮುಗಿಸಿದ ದೇವೇಗೌಡರು, ನಿಮ್ಮನ್ನು ಬಿಡುತ್ತಾರೆಯೇ? ಜೆಡಿಎಸ್‌ನಲ್ಲೇ ಇದ್ದರೆ ಮುಗಿಸಿಬಿಡುತ್ತಾರೆ. ಬೇಗ ಹೊರಗೆ ಬಂದರೆ ನಿಮಗೇ ಒಳ್ಳೆಯದು ಎಂದು ಜಿ.ಟಿ. ದೇವೇಗೌಡರಿಗೂ ಎಚ್ಚರಿಸಿದ್ದೇನೆ ಎಂದು ತಿಳಿಸಿದ್ದಾರೆ. ● 9ನೇ ಪುಟಕ್ಕೆ

ಸುಪ್ರೀಂಕೋರ್ಟ್‌ನಲ್ಲೂ ಪ್ರಜ್ವಲ್ ಜಾಮೀನು ಅರ್ಜಿ ವಜಾ



ನವದೆಹಲಿ, ನ.11– ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅತ್ಯಾಚಾರ ಕೇಸಿನಲ್ಲಿ ಜೈಲು ಸೇರಿದ್ದು, ಸ್ಥಳೀಯ ಮತ್ತು ಹೈಕೋರ್ಟ್‌ನಲ್ಲಿ ಈಗಾಗಲೇ ಜಾಮೀನು ಅರ್ಜಿ ವಜಾಗೊಂಡಿದೆ. ಹಾಗಾಗಿ ಕೆಳಹಂತದ ನ್ಯಾಯಾಲಯಗಳ ಆದೇಶ ಪ್ರಶ್ನಿಸಿ ಪ್ರಜ್ವಲ್ ರೇವಣ್ಣ ಪರ ವಕೀಲರು ಸುಪ್ರೀಂಕೋರ್ಟ್‌ಗೆ ತೆರಳಿದ್ದು, ಇಂದು ಜಾಮೀನು ಅರ್ಜಿ ಕೈಗೆತ್ತಿಕೊಂಡ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬೇಲಾ ತ್ರಿವೇದಿ ಅವರ ಪೀಠ 'ಆರೋಪಿ ಸೋ ಪವರ್‌ಫುಲ್'. ಆದ್ದರಿಂದ ಅರ್ಜಿ ವಜಾಗೊಳಿಸಲಾಗಿದೆ ಎಂದು ಆದೇಶ ಹೊರಡಿಸಿದೆ.

ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಹಾಸನದಲ್ಲಿ ಅವರ ಮನೆ ಕೆಲಸದ ಮಹಿಳೆ, ಜೆಡಿಎಸ್ ಕಾರ್ಯಕರ್ತೆಯರ ಮೇಲೆ ಅತ್ಯಾಚಾರ ಮಾಡಿದ್ದಾರೆಂದು ಕೇಸ್ ದಾಖಲಾಗಿತ್ತು. ಈಗಾಗಲೇ ಅತ್ಯಾಚಾರ ಕೇಸಿಗೆ ಸಂಬಂಧಪಟ್ಟಂತೆ ಚಾರ್ಜ್‌ಶೀಟ್ ಕೂಡ ಸಲ್ಲಿಕೆ ಮಾಡಲಾಗಿದೆ. ಈ ಪ್ರಕರಣದಲ್ಲಿ ಬಂಧನವಾಗಿ ಜೈಲಿನಲ್ಲಿರುವ ಪ್ರಜ್ವಲ್ ರೇವಣ್ಣ, ಜಾಮೀನಿನ ಮೇಲೆ ಹೊರಬರಲು ಶತಪ್ರಯತ್ನ ಮಾಡುತ್ತಿದ್ದಾರೆ. ಆದರೆ, ಸ್ಥಳೀಯ ನ್ಯಾಯಾಲಯ ಮತ್ತು ಹೈಕೋರ್ಟ್ ಜಾಮೀನು ● 9ನೇ ಪುಟಕ್ಕೆ

ಕೆಬಿಜೆಯವರ ಭೂಮಂತ್ರ...



■ ■ ■

ಈಗಲಾದರೂ ಸತ್ಯ ಹೇಳಬೇಕು!

'ಸತ್ಯವನ್ನೇ ಹೇಳುತ್ತೇನೆ'; ನೋಡಲೇಬೇಕಾದ ಕನ್ನಡ ನಾಟಕ

■ ಪುಟ–4

ರಾಜ್ಯ ಕಾಂಗ್ರೆಸ್ ಸರ್ಕಾರ ಕಿತ್ತೊಗೆಯಲು ನಾನು, ಯಡಿಯೂರಪ್ಪ ಒಂದಾಗಿದ್ದೇವೆ!

● ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆರ್ಭಟ
● ಮೂರು ತಿಂಗಳೊಳಗೆ ಈ ಸರ್ಕಾರ ಪತನವಾಗುತ್ತೆ



ಚನ್ನಪಟ್ಟಣ, ನ. 11– ಒಂದು ಕಾಲದಲ್ಲಿ ಯಡಿಯೂರಪ್ಪ ಮತ್ತು ನಾನು ಜಗಳ ಆಡಿರಬಹುದು. ಆದರೆ, ಈಗ ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯಲು ನಾವಿಬ್ಬರೂ ಒಂದಾಗಿದ್ದೇವೆ ಎಂದು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡ ಹೇಳಿದರು.

ಉಪಚುನಾವಣೆಯ ಬಹಿರಂಗ ಪ್ರಚಾರದ ಕೊನೆಯ ದಿನವಾದ ಇಂದು ಚನ್ನಪಟ್ಟಣದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಧೀಮಂತ ಹೋರಾಟಗಾರ. ಅವರ ಮತ್ತು ನನ್ನ ನಡುವೆ ಪೈಪೋಟಿ ಇತ್ತು. ನಾನು ಪಾದಯಾತ್ರೆ ಮಾಡಿದರೆ, ದೇವೇಗೌಡರಿಗಿಂತ ನಾನೇನು ಕಡಿಮೆ ಎಂದು ಅವರು ಪಾದಯಾತ್ರೆ ಮಾಡುತ್ತಿದ್ದರು. ಯಡಿಯೂರಪ್ಪನವರಷ್ಟು ಪಾದಯಾತ್ರೆ ಮಾಡಿದ ಮಹಾನುಭಾವರು ಬಿಜೆಪಿಯಲ್ಲಿ ಬೇರೆ ಯಾರೂ ಇಲ್ಲ ಎಂದರು. ● 9ನೇ ಪುಟಕ್ಕೆ

ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಕ್ಯೂಆರ್ ಕೋಡ್ ಟಿಕೆಟ್ ವ್ಯವಸ್ಥೆ ಆರಂಭ

● ಮೈಸೂರು–ಬೆಂಗಳೂರು ಏರ್‌ಪೋರ್ಟ್ ನಡುವೆ ಸಂಚರಿಸುವ ಫ್ಲೈ ಬಸ್‌ಗಳಲ್ಲಿ ಪ್ರಾಯೋಗಿಕ ಜಾರಿ ● ರೈಲ್ವೇ ಪ್ಲಾಟ್‌ಫಾರಂ, ಸಾಮಾನ್ಯ ಟಿಕೆಟ್ ಪಡೆಯಲು ಕ್ಯೂಆರ್ ಕೋಡ್ ಬಳಸುವ ಬಗ್ಗೆ ನೈರುತ್ಯ ರೈಲ್ವೆಯಿಂದ ಜಾಗೃತಿ ಅಭಿಯಾನ

ಮೈಸೂರು, ನ.11(ಆರ್‌ಕೆ)– ಪ್ರಯಾಣಿಕರ ಅನುಕೂಲಕ್ಕಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ (ಕೆಎಸ್‌ಆರ್‌ಟಿಸಿ) ಮತ್ತು ರೈಲ್ವೇ ಇಲಾಖೆಯು ಕ್ಯೂಆರ್ ಕೋಡ್ ಬಳಸಿ ಟಿಕೆಟ್ ಪಡೆಯುವ ವ್ಯವಸ್ಥೆಯನ್ನು ಜಾರಿಗೆ ತಂದಿವೆ.

ಯುಪಿಐ ಪಾವತಿ ಮೂಲಕ ಪ್ರಯಾಣದ ಟಿಕೆಟ್ ಖರೀದಿಸುವುದರಿಂದ ನಗದು ರಹಿತ ವಹಿವಾಟು, ಚಿಲ್ಲರೆ ಸಮಸ್ಯೆ, ಬ್ಯಾಂಕಿಗೆ ನಗದು ಸಂದಾಯ ವ್ಯವಸ್ಥೆ ಇಲ್ಲದೇ, ಸಮಯ ವ್ಯರ್ಥವಾಗದೇ ರೈಲ್ವೆ ಸಾರಿಗೆ ಸಂಸ್ಥೆ ಪ್ರಯಾಣಿಕರ ಟಿಕೆಟ್ ಖರೀದಿಸಲು ಸಹಕಾರಿಯಾಗಲಿದೆ.

ಪ್ರಯಾಣಿಕರಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಹಣ ಪಾವತಿಸಿ ಟಿಕೆಟ್ ಪಡೆಯುವ ವ್ಯವಸ್ಥೆ ಬಗ್ಗೆ ಜಾಗೃತಿ ಮೂಡಿಸಲು ನೈರುತ್ಯ ರೈಲ್ವೆಯು ತಮ್ಮ ವ್ಯಾಪ್ತಿಯ ಎಲ್ಲಾ ನಿಲ್ದಾಣಗಳಲ್ಲಿ ಶೀಘ್ರ ಅಭಿಯಾನ ಆರಂಭಿಸಲಿದೆ ಎಂದು ಮೈಸೂರು ವಿಭಾಗದ ಕಮರ್ಷಿಯಲ್ ಮ್ಯಾನೇಜರ್ ಗಿರೀಶ್ ಧ'ರ್ಮರಾಜ್ ಕಳಗೊಂಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಕಾಯ್ದಿರಿಸುವ ● 9ನೇ ಪುಟಕ್ಕೆ



ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಕ್ಯೂಆರ್ ಕೋಡ್ (ಎಡಗಡೆ). ಮೈಸೂರು ರೈಲು ನಿಲ್ದಾಣದಲ್ಲಿ ಅಳವಡಿಸಿರುವ ಕ್ಯೂಆರ್ ಕೋಡ್

ಮೈಸೂರು ಮಿತ್ರ ಮಂಗಳವಾರ 12 ನವೆಂಬರ್ 2024

ಇಂದಿನಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ಪ್ರವಾಸ



ಮೈಸೂರು, ನ.11(ಬಿಎಲ್‌ಯು)– ಎರಡು ದಿನಗಳ ಪ್ರವಾಸಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ನವೆಂಬರ್ 12) ಮೈಸೂರಿಗೆ ಆಗಮಿಸಲಿದ್ದಾರೆ.

ಬೆಳಗ್ಗೆ 10.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ಹೆಲಿಕಾಪ್ಟರ್‌ನಲ್ಲಿ ಹೊರಡುವ ಸಿದ್ದರಾಮಯ್ಯ, ಬೆಳಿಗ್ಗೆ 11.30 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕು ಕ್ರೀಡಾಂಗಣಕ್ಕೆ ಆಗಮಿಸಲಿದ್ದಾರೆ.

ತರುವಾಯ ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ನಾಯಕರ ಸಂಘ ಹೆಚ್.ಡಿ.ಕೋಟೆಯ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಸಿದ್ದರಾಮಯ್ಯ, ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವರು.

ಕಾರ್ಯಕ್ರಮದ ನಂತರ ಮಧ್ಯಾಹ್ನ 12.30 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕು ಕೆರೆ–ಸೀಗೂರು ಹಾಡಿಗಳಿಗೆ ಭೇಟಿ ನೀಡಿ, ಬುಡಕಟ್ಟು ಜನಾಂಗಗಳ ಸಮಸ್ಯೆಗಳನ್ನು ಆಲಿಸುವರು. ಸಂಜೆ 4 ಗಂಟೆಗೆ ಹೆಚ್.ಡಿ. ಕೋಟೆಯಿಂದ ರಸ್ತೆ ಮೂಲಕ ಮೈಸೂರಿಗೆ ಬಂದು ವಾಸ್ತವ್ಯ ಹೂಡುವರು.

ನ.13ರಂದು ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಮಹಾರಾಜ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆಯುವ ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವಿವಿಧ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸುವರು. ನಂತರ 11.30 ಗಂಟೆಗೆ ಮೈಸೂರಿಂದ ರಸ್ತೆ ಮೂಲಕ, ಮಧ್ಯಾಹ್ನ 12 ಗಂಟೆಗೆ ತಿ.ನರಸೀಪುರದ ಹೊರಳಹಳ್ಳಿ ರೇಷ್ಮೆ ಫಾರಂನಲ್ಲಿ ತಿ.ನರಸೀಪುರ ವಿಧಾನಸಭಾ ಕ್ಷೇತ್ರದ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆ ನೆರವೇರಿಸುವರು. ಸಂಜೆ 5 ಗಂಟೆಗೆ ತಿ.ನರಸೀಪುರದಿಂದ ರಸ್ತೆ ಮಾರ್ಗವಾಗಿ ಬೆಂಗಳೂರಿಗೆ ತೆರಳುವರು.

ಮೈಸೂರಿನ ಲೋಕಾಯುಕ್ತ ಕಚೇರಿಯಲ್ಲಿ ನವೆಂಬರ್ 6ರಂದು ಮುಡಾ ನಿವೇಶನ ಹಂಚಿಕೆ ಹಗರಣ ಸಂಬಂಧ ವಿಚಾರಣೆಯಲ್ಲಿ ಭಾಗವಹಿಸಿದ ನಂತರ ಸಿದ್ದರಾಮಯ್ಯ ನಾಳೆ ಮೈಸೂರಿಗೆ ಆಗಮಿಸುತ್ತಿದ್ದಾರೆ.

ವಕ್ಫ್ ಆಸ್ತಿ ಜಾತ್ಯತೀತವಾಗಿ ಬಳಕೆಯಾಗುತ್ತಿದೆ

ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಶಬ್ಬೀರ್ ಮೊಹಮ್ಮದ್ ಮುಸ್ತಫಾ ಸ್ಪಷ್ಟನೆ

ಮೈಸೂರು,ನ.11(ಬಿಎಲ್‌ಯು)–ವಕ್ಫ್ ದತ್ತಿಯಲ್ಲಿ ಧಾರ್ಮಿಕ ಕ್ರಿಯೆ ಇದ್ದರೂ ಜಾತ್ಯತೀತವಾಗಿ ಎಲ್ಲಾ ವರ್ಗದವರ ಉದ್ದೇಶಕ್ಕೆ ಬಳಕೆಯಾಗುತ್ತಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಶಬ್ಬೀರ್ ಮೊಹಮ್ಮದ್ ಮುಸ್ತಫಾ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಇಂದು ವಕ್ಫ್ ಮಂಡಳಿ ಕುರಿತು ಆಯೋಜಿಸಿದ್ದ ಪರಿಣತರ ಚರ್ಚಾ ಸಭೆಯಲ್ಲಿ ಮಾತನಾಡಿದ ಅವರು, ಮುಸ್ಲಿಂ ವ್ಯಕ್ತಿಯೊಬ್ಬ ಕೆರೆ ಸೇರಿದಂತೆ ಸಾರ್ವಜನಿಕ ಉಪಯೋಗಕ್ಕೆ ವಕ್ಫ್ ಮಂಡಳಿಗೆ ಭೂಮಿ ನೀಡಿರುತ್ತಾನೆ. ಇದು ಮುಸ್ಲಿಂ ಸಮುದಾಯಕ್ಕೆ ಮಾತ್ರ ಸೀಮಿತವಾಗದೆ ಎಲ್ಲಾ ಜಾತಿ, ಧರ್ಮದವರಿಗೂ ಬಳಕೆಯಾಗುತ್ತದೆ ಅಲ್ಲವೆ ಎಂದು ಹೇಳಿದರು.

ವಕ್ಫ್ 1995ರ ತಿದ್ದುಪಡಿ ವಿಚಾರ ಈಗ ವಿವಾದವಾಗಿ ಮಾರ್ಪಟ್ಟಿದೆ. ಆದರೆ ವಕ್ಫ್ ಆಸ್ತಿ ಎಲ್ಲಾ ವರ್ಗದವರ ಉಪಯೋಗಕ್ಕೆ ಇದೆ. ವಕ್ಫ್‌ಗೆ ಆಸ್ತಿಯನ್ನು ಸ್ವಯಂಪ್ರೇರಣೆಯಿಂದ ದಾನ ನೀಡಿದ್ದಾರೆಯೇ ಹೊರತು, ಯಾರ ಮೇಲೂ ಒತ್ತಡ ಹೇರಿ ಪಡೆಯುವುದಿಲ್ಲ. ಒಂದು ಬಾರಿ ವಕ್ಫ್‌ಗೆ ಆಸ್ತಿಯನ್ನು ದಾನ ಕೊಟ್ಟ ಮೇಲೆ ಮತ್ತೆ ವಾಪಸು ಕೊಡಲು ಸಾಧ್ಯವಿಲ್ಲ. ಅಷ್ಟೇ ಅಲ್ಲದೆ ಸಾಮಾಜಿಕ ಕಾರ್ಯಕ್ಕೆ ಈ ಆಸ್ತಿಯನ್ನು ಉಪಯೋಗ ಮಾಡಬೇಕೆ ಹೊರತು, ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಕ್ಕೆ ಬಳಕೆ ಮಾಡುವಂತಿಲ್ಲ ಎಂದು ಶಬ್ಬೀರ್ ಮೊಹಮ್ಮದ್ ಮುಸ್ತಫಾ ಹೇಳಿದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಕ್ಫ್ ಮಂಡಳಿ ಕುರಿತು ಆಯೋಜಿಸಿದ್ದ ಪರಿಣತರ ಚರ್ಚಾ ಸಭೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಶಬ್ಬೀರ್ ಮೊಹಮ್ಮದ್ ಮುಸ್ತಫಾ ಮಾತನಾಡಿದರು.

ಆದರೆ ಈಗ ವಕ್ಫ್ ವಿಚಾರದ ಬಗ್ಗೆ ಬಿಜೆಪಿ ನಾಯಕರು ಕೀಳುಮಟ್ಟದ ಮಾತುಗಳನ್ನಾಡುತ್ತಿದ್ದಾರೆ. ಆದರೆ ಇಷ್ಟೆಲ್ಲಾ ಲಘುವಾದ ಹೇಳಿಕೆ ನೀಡುತ್ತಿದ್ದರೂ ಮುಸ್ಲಿಂ ಸಮುದಾಯ ಯಾವುದೇ ಪ್ರತಿಕ್ರಿಯೆ ನೀಡುತ್ತಿಲ್ಲ ಎಂದು ಹೇಳಿದರು.

ವಕ್ಫ್ ಆಸ್ತಿಗಳಿಗೆ 1,400 ವರ್ಷಗಳ ಇತಿಹಾಸವಿದೆ. 876 ಮತ್ತು 919 ನೇ ಇಸವಿಯ ಬಹಳಷ್ಟು ಕರಾರು ದಾಖಲಾತಿಗಳು ಸಂಗ್ರಹಾಲಯದಲ್ಲಿವೆ. ಅಯೋಧ್ಯೆಯ ಶ್ರೀರಾಮ ಮಂದಿನ ನಿರ್ಮಾಣ ವಿಚಾರವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ ಸಂದರ್ಭದಲ್ಲಿ ಬಹಳಷ್ಟು ಗಲಭೆಗಳಾಯಿತು. ಕೆಲವರು ಪ್ರಾಣ ಕಳೆದುಕೊಂಡರು. ಆದರೆ ಈ ತನಕ ಯಾವುದೇ ಒಬ್ಬ ಮುಸ್ಲಿಂ ವ್ಯಕ್ತಿ ಶ್ರೀರಾಮನ ದೈವತ್ವವನ್ನು ಪ್ರಶ್ನಿಸಿಲ್ಲ. ಅನ್ಯ ಧರ್ಮದ ಬಗ್ಗೆ ಲಘುವಾಗಿ ಮಾತನಾಡಲು ಮುಸ್ಲಿಂ ಧರ್ಮದಲ್ಲಿ ಅವಕಾಶವಿಲ್ಲ ಎಂದರು.

ವಕ್ಫ್ ಮಂಡಳಿಯಲ್ಲಿ ಮುಸ್ಲಿಂಯೇತರರಿಗೂ ಅವಕಾಶವಿದೆ. ಮಹಿಳಾ ಮೀಸಲಾತಿ ಕೂಡ ಇದೆ. ಧರ್ಮದ ಬಗ್ಗೆ ಇಷ್ಟೆಲ್ಲಾ ಮಾತನಾಡುವ ಆರ್‌ಎಸ್‌ಎಸ್‌ನವರು ತಮ್ಮ ಸಂಘದಲ್ಲಿ ಈ ತನಕ ಮಹಿಳಾ ಮೀಸಲಾತಿ ನೀಡಿದ್ದಾರೆಯೇ ಎಂದು ಪ್ರಶ್ನಿಸಿದರು.

ವಕ್ಫ್ ಮಂಡಳಿಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂದು ಆರೋಪ ಮಾಡುತ್ತಾರೆ. ಈ ದೇಶದಲ್ಲಿ ಭ್ರಷ್ಟಾಚಾರವಿಲ್ಲದ ಯಾವ ಸ್ಥಳವಿದೆ ಹೇಳಿ ನೋಡೋಣ ಎಂದು ಪ್ರಶ್ನಿಸಿದ ಶಬ್ಬೀರ್ ಮೊಹಮ್ಮದ್ ಮುಸ್ತಫಾ, ಬಿಜೆಪಿಯವರು ಚುನಾವಣಾ ಬಾಂಡ್ ಹೆಸರಿನಲ್ಲಿ ಲಕ್ಷಾಂತರ ಕೋಟಿ ಲೂಟಿ ಮಾಡಿದ್ದಾರೆ. ಇದು ಭ್ರಷ್ಟಾಚಾರವಲ್ಲವೆ ಎಂದು ಪ್ರಶ್ನಿಸಿದರು.

ವಿಜಯಪುರಕ್ಕೆ ವಕ್ಫ್ ಜಂಟಿ ಸಂಸದೀಯ ಸಮಿತಿ ಭೇಟಿ ನೀಡಿತ್ತು. ಸಮಿತಿ ಭೇಟಿ ಬಗ್ಗೆ ತೇಜಸ್ವಿ ಸೂರ್ಯಗೆ ಮಾಹಿತಿ ನೀಡಲಾಗಿತ್ತೆ ಹೊರತು, ಬೇರೆ ಯಾರಿಗೂ ಮಾಹಿತಿ ನೀಡಲಿಲ್ಲ. ಈಗ ಜಂಟಿ ಸಂಸದೀಯ ಸಮಿತಿ ರಚನೆ ಮಾಡಲಾಗಿದ್ದು, ಕೇಂದ್ರ ಸರ್ಕಾರ ದಬ್ಬಾಳಿಕೆ ಮಾಡಿ ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಮುಂದಾಗಿದೆ ಎಂದು ಶಬ್ಬೀರ್ ಮೊಹಮ್ಮದ್ ಮುಸ್ತಫಾ ಆರೋಪಿಸಿದರು.

ಕಾಂಗ್ರೆಸ್ ಮುಖಂಡ ಅಬ್ದುಲ್ ಖಾದರ್ ಶಾಹಿದ್ ಮಾತನಾಡಿ, ಬಿಜೆಪಿಯವರು ವಕ್ಫ್ ತಿದ್ದುಪಡಿಯನ್ನು ವಿವಾದವಾಗಿ ರೂಪಿಸಿ ಹಿಂದೂ–ಮುಸ್ಲಿಂರ ಸೌಹಾರ್ದತೆಗೆ ಧಕ್ಕೆ ತರುತ್ತಿದ್ದಾರೆ ಎಂದು ಆಪಾದಿಸಿದರು. ಚಿಂತಕ ಶಿವಸುಂದರ್, ರೈತ ಮುಖಂಡ ಮಂಜು ಕಿರಣ್, ಅಜೀಮುದ್ದೀನ್ ವೇದಿಕೆಯಲ್ಲಿದ್ದರು.

ನ.17ಕ್ಕೆ ರಾಷ್ಟ್ರ ಮಟ್ಟದ ನಾಡಕುಸ್ತಿ ಪಂದ್ಯಾವಳಿ



ಮೈಸೂರು,ನ.11(ಎಂಟಿವೈ)–ಮೈಸೂರಿನ ದಸರಾ ವಸ್ತುಪ್ರದರ್ಶನ ಆವರಣದಲ್ಲಿರುವ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನ.17ರಂದು ಮಧ್ಯಾಹ್ನ 3 ಗಂಟೆಗೆ ರಾಷ್ಟ್ರ ಮಟ್ಟದ 35 ಜೊತೆ ನಾಡಕುಸ್ತಿ ಪಂದ್ಯಾವಳಿಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಅಶೋಕಪುರಂ ಪೈಲ್ವಾನ್ ಪುರುಷೋತ್ತಮ್ ಅಭಿಮಾನಿಗಳ ಬಳಗದ ಅಧ್ಯಕ್ಷ ಪೈಲ್ವಾನ್ ಸುನಿಲ್‌ಕುಮಾರ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಕುಸ್ತಿ ಪಂದ್ಯಾವಳಿಯ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೈಸೂರಲ್ಲಿ ಮಹಾರಾಜರ ಕಾಲದಿಂದಲೂ ಕುಸ್ತಿ ಕಲೆಗೆ ಹೆಚ್ಚು ಮನ್ನಣೆ ಸಿಗುತ್ತಿತ್ತು. ಆದರೆ ಕೆಲ ವರ್ಷಗಳಿಂದ ನಾಡಕುಸ್ತಿಗೆ ಮನ್ನಣೆ ಸಿಗದೆ ನಶಿಸಲಾರಂಭಿಸಿದೆ. ಈ ಹಿನ್ನೆಲೆಯಲ್ಲಿ ಕುಸ್ತಿ ಕಲೆಯನ್ನು ಉಳಿಸುವುದರೊಂದಿಗೆ ಕುಸ್ತಿಯನ್ನು ಇದುವರೆಗೂ ಕಾಪಾಡಿಕೊಂಡು ಬಂದ ಹಿರಿಯರನ್ನು ಸ್ಮರಿಸಲು ಕುಸ್ತಿ ಪಂದ್ಯಾವಳಿ ಆಯೋಜಿಸಲಾಗಿದೆ ಎಂದರು.

ಈ ಪಂದ್ಯಾವಳಿಯಲ್ಲಿ ಮಹಾರಾಷ್ಟ್ರದ ಕೊಲ್ಲಾಪುರದ ಪೈ.ಸುನಿಲ್ ಜಾಧವ್ ಮತ್ತು ಇಂಗಳಗಿ ಪೈ.ಪ್ರಕಾಶ್, ರಮ್ಮನಹಳ್ಳಿ ಪೈ.ರವಿ ಮತ್ತು ದಾವಣಗೆರೆಯ ರಾಘವೇಂದ್ರ, ಪೈ.ರೋಷನ್ ಮತ್ತು ದಾವಣಗೆರೆ ಪೈ.ಕಿರಣ್, ಮುಧೋಳದ ಪೈ ರೋಹನ್ ಗವಾಡೆ ಮತ್ತು ಪೈ ಬಸವರಾಜ ಪಾಟೀಲ್ ಸೆಣಸಾಡಲಿದ್ದಾರೆ. ಒಟ್ಟು 35 ಜೋಡಿಗಳು ಕುಸ್ತಿಯಲ್ಲಿ ಪಾಲ್ಗೊಳ್ಳಲಿವೆ ಎಂದು ವಿವರಿಸಿದರು.

ನಾಡಕುಸ್ತಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಪಂದ್ಯಾವಳಿಗೂ ಮುನ್ನ ನ.17ರಂದು ಮಧ್ಯಾಹ್ನ 1 ಗಂಟೆಗೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಜಾನಪದ ಕಲಾತಂಡಗಳೊಂದಿಗೆ ಪೈಲ್ವಾನರ ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದವರೆಗೂ ಮೆರವಣಿಗೆಯಲ್ಲಿ ಕರೆದೊಯ್ಯಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪೈಲ್ವಾನ್‌ಗಳಾದ ಪೈ.ಹರಿದಾಸ್, ಹೆಚ್.ನಾಗರಾಜ್, ಛಲವಾದಿ ನಗರಾಧ್ಯಕ್ಷ ಶಿವು ಇನ್ನಿತರರು ಇದ್ದರು.

ನ.14, 15 ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ರಾಜ್ಯ ಮಟ್ಟದ ಸಮ್ಮೇಳನ

ಮೈಸೂರು,ನ.11(ಎಂಟಿವೈ)– ಮೈಸೂರಿನ ಬನ್ನಿಮಂಟಪದ ಶ್ರೀ ಶಿವರಾತ್ರೀಶ್ವರ ನಗರದಲ್ಲಿರುವ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ರಾಜೇಂದ್ರ ಸಭಾಂಗಣದಲ್ಲಿ ನ. 14 ಮತ್ತು 15 ರಂದು 34ನೇ ರಾಜ್ಯ ಸಮ್ಮೇಳನ ಹಾಗೂ ನ.13ರಂದು ಸಮ್ಮೇಳನ ಪೂರ್ವಭಾವಿ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಉಸ್ತುವಾರಿ ಕುಲಪತಿ ಡಾ.ಹೆಚ್.ಬಸವನಗೌಡಪ್ಪ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದ ಸಮುದಾಯ ವೈದ್ಯಶಾಸ್ತ್ರ ವಿಭಾಗ, ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಹಾಗೂ ರಾಜ್ಯ ಸಮುದಾಯ ಆರೋಗ್ಯ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 'ಸಶಕ್ತ ಜೀವನ: ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಸಮಗ್ರ ವಿಧಾನ' ಹಾಗೂ ವಿಶ್ವ ಸಂಸ್ಥೆಯ 'ಸುಸ್ಥಿರ ಅಭಿವೃದ್ಧಿ ಗುರಿ, ಆರೋಗ್ಯಕರ ಜೀವನ ಖಚಿತಪಡಿಸಿಕೊಳ್ಳುವುದು ಹಾಗೂ ಎಲ್ಲ ವಯಸ್ಸಿನ ಜನರ ಯೋಗಕ್ಷೇಮ ಉತ್ತೇಜಿಸುವ ಗುರಿ' ಕುರಿತ ಸಮ್ಮೇಳನ ನಡೆಸಲಾಗುತ್ತಿದೆ ಎಂದರು.



ದೇಶದ ಅಭಿವೃದ್ಧಿಯಲ್ಲಿ ಜನರ ಆರೋಗ್ಯವೂ ಮಹತ್ವದ ಪಾತ್ರ ವಹಿಸುತ್ತದೆ. ದೇಶದ ಆರೋಗ್ಯ ವ್ಯವಸ್ಥೆ, ರೋಗ ತಡೆಗಟ್ಟುವಿಕೆಯಲ್ಲಿ ಕೈಗೊಳ್ಳಬೇಕಾದ ಕ್ರಮ, ರೋಗದಿಂದ ಬಳಲುವ ಜನರ ಆರೋಗ್ಯ ಕಾಪಾಡುವಿಕೆ, ಪುನರ್ವಸತಿ ಆರೋಗ್ಯ ಸೇವೆ ಸೇರಿದಂತೆ ಇನ್ನಿತರ ಮಹತ್ತರ ವಿಷಯಗಳನ್ನು ಸಮ್ಮೇಳನದಲ್ಲಿ ವಿಸ್ತೃತವಾಗಿ ಚರ್ಚಿಸಲಾಗುತ್ತದೆ ಎಂದರು.

ಅಲ್ಲದೆ, ಶೈಕ್ಷಣಿಕ ಸಂಶೋಧನೆ, ಆರೋಗ್ಯ ನೀತಿ ಮತ್ತು ಸಾರ್ವಜನಿಕ ಆರೋಗ್ಯ ಆಡಳಿತ ವಲಯಗಳ ಪ್ರಮುಖ ಪಾಲುದಾರರು ಹಾಗೂ ತಜ್ಞರನ್ನು ಒಟ್ಟುಗೂಡಿಸಿ, ಸಾಂದರ್ಭಿಕ ವಿಶ್ಲೇಷಣೆ, ಆದ್ಯತೆ, ಸಂಶೋಧನೆಯ ಕ್ಷೇತ್ರ ಸೇರಿದಂತೆ ಇನ್ನಿತರ ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಕಾರ್ಯತಂತ್ರ ರೂಪಿಸಲು ಈ ಸಮ್ಮೇಳನ ನಾಂದಿ ಹಾಡಲಿದೆ ಎಂದು ತಿಳಿಸಿದರು.

ಸಮ್ಮೇಳನದಲ್ಲಿ ದೇಶದ ವಿವಿಧೆಡೆಗಳಿಂದ 350ಕ್ಕೂ ಹೆಚ್ಚು ಪ್ರತಿನಿಧಿಗಳು ಮತ್ತು ದೇಶದ ಪ್ರತಿಷ್ಠಿತ ಆರೋಗ್ಯ ಸಂಸ್ಥೆ, ವೈದ್ಯಕೀಯ ವಿದ್ಯಾಲಯಗಳ 32 ಮಂದಿ ಹೆಸರಾಂತ ತಜ್ಞರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ನ.14ರಂದು ಬೆಳಗ್ಗೆ 11ಕ್ಕೆ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಮ್ಮೇಳನ ಉದ್ಘಾಟನೆಗೊಳ್ಳಲಿದ್ದು, ರಾಷ್ಟ್ರೀಯ ವೈದ್ಯಕೀಯ ವಿಜ್ಞಾನಗಳ ಅಕಾಡೆಮಿಯ ಕಾರ್ಯದರ್ಶಿ ಡಾ. ಉಮೇಶ್ ಕಪಿಲ್, ಜೆಎಸ್‌ಎಸ್ ಎಎಚ್‌ಇಆರ್ ಕುಲಪತಿ ಡಾ.ಬಿ.ಮಂಜುನಾಥ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಸ್ತುವಾರಿ ಕುಲಪತಿ ಡಾ.ಹೆಚ್. ಬಸವನಗೌಡಪ್ಪ ವಹಿಸಲಿದ್ದಾರೆ ಎಂದು ತಿಳಿಸಿದರು.

ಸಮ್ಮೇಳನದ ಅಂಗವಾಗಿ ನ.13ರಂದು ಬೆಳಗ್ಗೆ 10ರಿಂದ ಪೂರ್ವಭಾವಿ ಕಾರ್ಯಾಗಾರ ಆಯೋಜಿಸಿದ್ದು, ಇದರಲ್ಲಿ ಜೆಎಸ್‌ಎಸ್ ವೈದ್ಯಕೀಯ ವಿಶ್ವವಿದ್ಯಾನಿಲಯ ಸೇರಿದಂತೆ ಇತರೆ ಪ್ರಮುಖ ವೈದ್ಯಕೀಯ ಕಾಲೇಜುಗಳ ಅಧ್ಯಾಪಕರು ಪಾಲ್ಗೊಳ್ಳಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಡಾ.ಎಂ.ಸಿ.ಸ್ಮಿತಾ, ಸಂಘಟನಾ ಅಧ್ಯಕ್ಷ ಡಾ.ಡಿ.ಸುನಿಲ್ ಕುಮಾರ್, ಡಾ.ಪ್ರವೀಣ್, ಸತೀಶ್ ಚಂದ್ರ ಇದ್ದರು.

ಮೈಸೂರು ಮೂಲಕ ವಯನಾಡ್‌ಗೆ ತೆರಳಿದ ರಾಹುಲ್ ಗಾಂಧಿ



ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಯುವ ಕಾಂಗ್ರೆಸ್ ಮುಖಂಡರೊಂದಿಗೆ ರಾಹುಲ್ ಗಾಂಧಿ.

ಮೈಸೂರು, ನ. 11(ಆರ್‌ಕೆ)– ಉತ್ತರ ಪ್ರದೇಶದ ರಾಯ್‌ಬರೇಲಿ ಕಾಂಗ್ರೆಸ್ ಸಂಸದ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಇಂದು ಮೈಸೂರಿಗೆ ಆಗಮಿಸಿದ್ದರು.

ದೆಹಲಿಯಿಂದ ವಿಶೇಷ ವಿಮಾನದಲ್ಲಿ ಬೆಳಗ್ಗೆ 10.30 ಗಂಟೆಗೆ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸಿದ ರಾಹುಲ್ ಗಾಂಧಿ ಅವರನ್ನು, ಎನ್‌ಎಸ್‌ಯುಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಾಗೇಶ್ ಕಾರಿಯಪ್ಪ, ಯುವ ಕಾಂಗ್ರೆಸ್ ಮುಖಂಡರಾದ ಎಸ್.ಇ. ಸುಧೀಂದ್ರ, ರೋಹಿತ್, ಅಭಿ, ಅರ್ಜುನ್ ಹಾಗೂ ಇತರರು ಬರಮಾಡಿಕೊಂಡರು. ನಂತರ ವಿಮಾನ ನಿಲ್ದಾಣದಲ್ಲಿ ಯುವ ಕಾಂಗ್ರೆಸ್ ಮುಖಂಡರೊಂದಿಗೆ ಚಹಾ ಸೇವಿಸಿ ಬೆಳಗ್ಗೆ 10.50 ಗಂಟೆಗೆ ಹೆಲಿಕಾಪ್ಟರ್ ಮೂಲಕ ನೆರೆ ರಾಜ್ಯದ ವಯನಾಡ್‌ಗೆ ತೆರಳಿದರು. ಅವರು ವಯನಾಡ್‌ನಲ್ಲಿ ನಡೆಯುತ್ತಿರುವ ಉಪ ಚುನಾವಣೆಯ ಬಹಿರಂಗ ಪ್ರಚಾರದಲ್ಲಿ ಅಂತಿಮ ದಿನವಾದ ಇಂದು (ನ.11) ಸಹೋದರಿ ಪ್ರಿಯಾಂಕರೊಂದಿಗೆ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಿದ್ದರು. ನ.13ರಂದು ವಯನಾಡ್ ಉಪ ಚುನಾವಣೆ ನಡೆಯಲಿದ್ದು, ನವೆಂಬರ್ 23 (ಶನಿವಾರ) ಮತ ಎಣಿಕೆಯಾಗಿ ಫಲಿತಾಂಶ ಹೊರಬೀಳಲಿದೆ.

ಇಂದು ಚೆಲುವಾಂಬ ಆಸ್ಪತ್ರೆಯಲ್ಲಿ ಮಮತೆಯ ತೊಟ್ಟಿಲು ಅನಾವರಣ

ದತ್ತು ಸ್ವೀಕಾರ ಜನ ಜಾಗೃತಿ




ಮೈಸೂರು,ನ.11(ಎಂಟಿವೈ)– ಅನಾಥ ಮಕ್ಕಳ ದತ್ತು ಸ್ವೀಕಾರ ಯೋಜನೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮೈಸೂರಿನ ಚೆಲುವಾಂಬ ಆಸ್ಪತ್ರೆ ಆವರಣದಲ್ಲಿ ನ.12ರಂದು(ನಾಳೆ) ಬೆಳಗ್ಗೆ 11ಕ್ಕೆ 'ಮಮತೆಯ ತೊಟ್ಟಿಲಿನ ಅನಾವರಣ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಛಾಯಾದೇವಿ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಸಿ. ಅಂತೋಣಿ ಪಾಲ್‌ರಾಜ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತರರಾಷ್ಟ್ರೀಯ ದತ್ತು ಮಾಸಾಚರಣೆ ಹಿನ್ನೆಲೆಯಲ್ಲಿ ಛಾಯಾದೇವಿ ಟ್ರಸ್ಟ್, ಛಾಯಾದೇವಿ ದತ್ತು ಕೇಂದ್ರ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಛಾಯಾದೇವಿ ಶಿಕ್ಷಣ ಮಹಾ ವಿದ್ಯಾಲಯಗಳ ಸಂಯುಕ್ತಾಶ್ರಯದಲ್ಲಿ ಮಮತೆಯ ತೊಟ್ಟಿಲಿನ ಅನಾವರಣ ಹಾಗೂ ದತ್ತು ಸ್ವೀಕಾರ ಜನ ಜಾಗೃತಿ ಜಾಥಾ ಆಯೋಜಿಸಲಾಗಿದೆ. ಮಮತೆಯ ತೊಟ್ಟಿಲು ಕಾರ್ಯಕ್ರಮವನ್ನು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಲಿದ್ದು, ಶಾಸಕ ಕೆ.ಹರೀಶ್ ಗೌಡ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ. ದೇವೇಗೌಡ, ತನ್ವೀರ್‌ಸೇಠ್, ಶ್ರೀವತ್ಸ, ಮಾಜಿ ಮೇಯರ್ ಸಂದೇಶ್ ಸ್ವಾಮಿ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದರು.

ಇತ್ತೀಚಿನ ದಿನಗಳಲ್ಲಿ ಹೆತ್ತವರು ತಮಗೆ ಬೇಡವಾದ ಮಕ್ಕಳನ್ನು ಕಸದ ತೊಟ್ಟಿ, ಬೇಲಿ, ರಸ್ತೆಬದಿಗಳಲ್ಲಿ ತ್ಯಜಿಸಿ ಹೋಗುವ ಪ್ರಸಂಗ ಹೆಚ್ಚುತ್ತಿದೆ. ಈ ನಿಟ್ಟಿನಲ್ಲಿ ಜಿಲ್ಲೆಯ ಪ್ರಮುಖ ಕಡೆಗಳಲ್ಲಿನ ಮಕ್ಕಳ ಪಾಲನಾ ಸಂಸ್ಥೆ, ಜಿಲ್ಲಾ ಹೆರಿಗೆ ಮತ್ತು ಮಕ್ಕಳ ಆಸ್ಪತ್ರೆಗಳಲ್ಲಿ 'ಮಮತೆಯ ತೊಟ್ಟಿಲು'ಗಳನ್ನು ಅಳವಡಿಸಲಾಗಿದೆ. ಇದೀಗ ಚೆಲುವಾಂಬ ಆಸ್ಪತ್ರೆಯಲ್ಲಿ ಮಮತೆಯ ತೊಟ್ಟಿಲು ಇರಿಸಲಾಗುತ್ತಿದೆ. ಇಲ್ಲಿ ಇರಿಸಿದ ಮಕ್ಕಳನ್ನು ಈಗಾಗಲೇ ದತ್ತು ಸ್ವೀಕಾರಕ್ಕೆ ನೋಂದಣಿ ಮಾಡಿಕೊಂಡಿರುವವರಿಗೆ ಕಾನೂನುಬದ್ಧವಾಗಿ ನೀಡಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಛಾಯಾದೇವಿ ಟ್ರಸ್ಟ್ ಅಧ್ಯಕ್ಷ ಭಾನುಪ್ರಕಾಶ್, ಸಂಯೋಜಕ ಮಹೇಂದ್ರ ಇನ್ನಿತರರು ಇದ್ದರು.

ಎಂ.ಎನ್.ಪೂಜಾಗೆ ಪಿಹೆಚ್.ಡಿ ಪದವಿ



ಮೈಸೂರು: ಡಾ. ಬಿ.ಹೆಚ್. ಸುರೇಶ್ ಅವರ ಮಾರ್ಗದರ್ಶನದಲ್ಲಿ ಎಂ.ಎನ್. ಪೂಜಾ ಅವರು ವಾಣಿಜ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನಿವೃತ್ತ ಎಡಿಜಿಪಿ ಕೆ.ಎಸ್.ಸುರೇಶ್ ಬಾಬು ನಿಧನ




ಬೆಂಗಳೂರು: ನಿವೃತ್ತ ಎಡಿಜಿಪಿ ಕೆ.ಎಸ್.ಸುರೇಶ್ ಬಾಬು ಭಾನುವಾರ ಬೆಂಗಳೂರಿನಲ್ಲಿ ನಿಧನರಾಗಿದ್ದಾರೆ. ಅವರು 1974ರಿಂದ 2006 ರವರೆಗೆ ಭಾರತೀಯ ಪೊಲೀಸ್ ಸೇವೆಯ ಕರ್ನಾಟಕ ಕೇಡರ್‌ನಲ್ಲಿ ಸೇವೆ ಸಲ್ಲಿಸಿದ್ದರು.

ಐಜಿಪಿ (ದಕ್ಷಿಣ ವಲಯ, ಮೈಸೂರು), ಐಜಿಪಿ (ಪಶ್ಚಿಮ ವಲಯ, ಮಂಗಳೂರು) ಐಜಿಪಿ (ಗುಪ್ತಚರ), ಬೆಂಗಳೂರು ನಗರದಲ್ಲಿ ಜಂಟಿ ಪೊಲೀಸ್ ಕಮಿಷನರ್ (ಅಪರಾಧ) ಮತ್ತು ಮೈಸೂರಿನಲ್ಲಿರುವ ಪೊಲೀಸ್ ಅಕಾಡೆಮಿಯ ನಿರ್ದೇಶಕ ಸ್ಥಾನ ಸೇರಿದಂತೆ ಹಲವಾರು ಪ್ರಮುಖ ಹುದ್ದೆಗಳನ್ನು ಸುರೇಶ್ ಬಾಬು ಅಲಂಕರಿಸಿದ್ದರು. 1999ರಲ್ಲಿ ಗೌರವಾನ್ವಿತ ಸೇವೆಗಾಗಿ ಪೊಲೀಸ್ ಪದಕ ಮತ್ತು 2005ರಲ್ಲಿ ವಿಶೇಷ ಸೇವೆಗಳಿಗಾಗಿ ರಾಷ್ಟ್ರಪತಿಗಳ ಪೊಲೀಸ್ ಪದಕವನ್ನು ಪಡೆದಿದ್ದರು.

ಕರ್ನಾಟಕ ನ್ಯಾಯಾಂಗ ಅಕಾಡೆಮಿ, ಮೈಸೂರಿನ ಕರ್ನಾಟಕ ಪೊಲೀಸ್ ಅಕಾಡೆಮಿ, ಮಂಗಳೂರಿನ ಎಸ್‌ಡಿಎಂ ಕಾನೂನು ಕಾಲೇಜು ಮತ್ತು ಬೆಂಗಳೂರಿನ ಕ್ರೈಸ್ಟ್ ಯೂನಿವರ್ಸಿಟಿ, ಅಲಯನ್ಸ್ ಕಾನೂನು ವಿಶ್ವವಿದ್ಯಾಲಯದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದರು. ಸುರೇಶ್ ಬಾಬು ಅವರು ಪತ್ನಿ ಶಾಮಲಾ, ಪುತ್ರಿಯರಾದ ಶಾಲಿನಿ ಮತ್ತು ಸವಿತಾ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

12.11.2024 ಮಂಗಳವಾರ, ಮಳೆ ನಕ್ಷತ್ರ: ವಿಶಾಖ, 06.11.2024ರಿಂದ 18.11.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 3 ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತಕ್ಕೆ ಯೋಗ ಮತ್ತು ಆಕ್ಯೂಪಂಕ್ಚರ್ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್ :** ಕನ್ನಡ ರಾಜ್ಯೋತ್ಸವ ಪ್ರಯುಕ್ತ ವಿಶೇಷ ರಿಯಾಯಿತಿ ಮಾರಾಟ, ಸ್ಥಳ: ಮಾರಾಟ ಮಳಿಗೆ, ರಾಮಸ್ವಾಮಿ ವೃತ್ತ, ಬೆಳಗ್ಗೆ 9.30 ರಿಂದ.

■ **ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘ:** ಉಚಿತ ಆರೋಗ್ಯ ತಪಾಸಣಾ ಶಿಬಿರ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರ, ಕಬೀರ್ ರಸ್ತೆ, ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪ, ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಭಾರತೀಯ ಅಂಚೆ ಇಲಾಖೆ :** 38ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ, ಸ್ಥಳ: ಚಾಮುಂಡಿ ವಿಹಾರ ಒಳಾಂಗಣ ಕ್ರೀಡಾಂಗಣ, ಬೆಳಗ್ಗೆ 10 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೂದಲು ಉದುರುವಿಕೆಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸಂಸ್ಥೆ :** ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್, ಗೈಡ್ಸ್, ರೋವರ್ ಮತ್ತು ರೇಂಜರ್ ಮಕ್ಕಳಿಗೆ ಮೈಸೂರು ವಿಭಾಗ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆ, ಸ್ಥಳ: ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜು, ಗೋಕುಲಂ 3ನೇ ಹಂತ, ಬೆಳಗ್ಗೆ 10 ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಮೈಸೂರು ನಗರ ಘಟಕ, ಕದಳಿ ಮಹಿಳಾ ವೇದಿಕೆ :** ಬೆಳಗ್ಗೆ 10.30ಕ್ಕೆ ಶಿವಶರಣೆಯರು–ಸಮಕಾಲೀನ ಸಂದರ್ಭ ಕುರಿತು ರಾಜ್ಯ ಮಟ್ಟದ ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ : ಕರಾಮುವಿವಿ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಮುಖ್ಯ ಭಾಷಣಕಾರರು : ಪ್ರಾಧ್ಯಾಪಕ ಪ್ರೊ. ಬಿ.ವಿ. ವಸಂತಕುಮಾರ್, ಉಪಸ್ಥಿತರು : ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಡೀನ್ ಪ್ರೊ. ಎನ್. ಲಕ್ಷ್ಮೀ, ಡೀನ್ ಪ್ರೊ. ಎಂ. ರಾಮನಾಥಂನಾಯ್ಡು, ಕುಲಸಚಿವ ಡಾ. ಎಚ್. ವಿಶ್ವನಾಥ್, ಹಣಕಾಸು ಅಧಿಕಾರಿ ಡಾ. ಎಸ್. ನಿರಂಜನ್‌ರಾಜ್; ಸಂಜೆ 4ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ನುಡಿ : ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಅಧ್ಯಕ್ಷತೆ : ಕರಾಮುವಿವಿ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಸ್ಥಳ:ಕಾವೇರಿ ಸಭಾಂಗಣ, ಕರಾಮುವಿವಿ.

■ **ಮಹಾರಾಜ ಕಾಲೇಜು :** ಕನ್ನಡ ರಾಜ್ಯೋತ್ಸವ, ಮುಖ್ಯ ಅತಿಥಿಗಳು : ಹಿರಿಯ ವಿದ್ಯಾರ್ಥಿ ಡಾ. ಡಿ. ರವಿ, ಎಂ.ಆರ್. ಲವ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಪ್ರೊ. ಹೆಚ್.ಸಿ. ದೇವರಾಜೇಗೌಡ, ಉಪಸ್ಥಿತರು: ಪ್ರೊ. ವಿ. ಷಣ್ಮುಗಂ, ಪ್ರೊ. ರಾಚಯ್ಯ, ಪ್ರೊ.ಪುಟ್ಟಸೋಮಾಚಾರ್, ಪ್ರೊ.ಡಿ. ವಿಜಯಲಕ್ಷ್ಮಿ, ಸ್ಥಳ: ಜೂನಿಯರ್ ಬಿ.ಎ.ಹಾಲ್, ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ ಶ್ರೀ ಮಹದೇಶ್ವರರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಮಠದ ಆವರಣ, ಸಂಜೆ

■ **ನೂಪುರ ಕಲಾವಿದರ ಸಾಂಸ್ಕೃತಿಕ ಟ್ರಸ್ಟ್, ಕನ್ನಡ–ಸಂಸ್ಕೃತಿ ಇಲಾಖೆ:** ನೃತ್ಯ ನಾಟಕೋತ್ಸವ–2024, ಸಂಜೆ 6ರಿಂದ ನೃತ್ಯತಿ ಕಲಾಶಾಲೆ ಅವರಿಂದ ವಿಶ್ವಾಮಿತ್ರ ಗಾಯತ್ರಿ ನಾಟಕ ಪ್ರದರ್ಶನ, ರಚನೆ: ಡಾ.ಜ್ಯೋತಿ ಶಂಕರ್, ಸಂಗೀತ: ವಿದುಷಿ ಕಾಂಚನ ಶ್ರೀರಂಜಿನಿ, ಧ್ವನಿಮುದ್ರಿಕೆ: ಕಲಾ ಸಂದೇಶ ಪ್ರತಿಷ್ಠಾನ, ನೃತ್ಯ ಸಂಯೋಜನೆ : ವಿದುಷಿ ಅನುಷಾ ವರುಣ್, ಸಂಜೆ 7ರಿಂದ ಕದ್ರಿ ನೃತ್ಯ ವಿದ್ಯಾನಿಲಯ ಚಾರಿಟೆಬಲ್ ಟ್ರಸ್ಟ್, ಮಂಗಳೂರು ಅವರಿಂದ ಶ್ರೀಕೃಷ್ಣಲೀಲೆ, ಸಾಹಿತ್ಯ ಮತ್ತು ಸಂಗೀತ: ವಿದುಷಿ ಉಷಾ ಪ್ರವೀಣ್, ಧ್ವನಿಗ್ರಹಣ: ಕ್ಯಾಡ್ ಮೀಡಿಯಾ, ಮಂಗಳೂರು, ನೃತ್ಯ ಸಂಯೋಜನೆ ಮತ್ತು ನಿರ್ದೇಶನ : ವಿದ್ವಾನ್ ಯು.ಕೆ. ಪ್ರವೀಣ್, ಸ್ಥಳ: ಗಾನಭಾರತೀ ರಮಾ ಗೋವಿಂದ್ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ರಂಗಾಯಣ :** ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸವ, ಹುಣಸೂರು ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ ಹೆಣ್ಮಕ್ಳು ಕಥೆ ಹೇಳ್ತಾರೆ ನಾಟಕ ಪ್ರದರ್ಶನ, ರಚನೆ, ನಿರ್ದೇಶನ : ಎಂ. ಅರ್ಜುನ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 6.30ಕ್ಕೆ

ಹೆಚ್.ಡಿ.ಕೋಟೆ ತಾಲೂಕಿನಲ್ಲಿಂದು

■ **ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್:** ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಕಾರ್ಯಕ್ರಮ, ಶಂಕುಸ್ಥಾಪನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್,ದಿನೇಶ್ ಗುಂಡೂರಾವ್, ಸತೀಶ್ ಜಾರಕಿಹೊಳಿ, ಪ್ರಿಯಾಂಕ್ ಖರ್ಗೆ, ಜಮೀರ್ ಅಹಮದ್, ಈಶ್ವರ್ ಖಂಡ್ರೆ, ಎನ್.ಚೆಲುವರಾಯಸ್ವಾಮಿ, ತಂಗಡಗಿ ಶಿವರಾಜ್ ಸಂಗಪ್ಪ, ಶ್ರೀಮತಿ ಲಕ್ಷ್ಮಿ ಆರ್. ಹೆಬ್ಬಾಳ್ಕರ್, ಮಧು ಬಂಗಾರಪ್ಪ, ಎಂ.ಸಿ.ಸುಧಾಕರ್, ಎನ್.ಎಸ್.ಭೋಸರಾಜು, ಅಧ್ಯಕ್ಷತೆ: ಶಾಸಕ ಸಿ. ಅನಿಲ್ ಕುಮಾರ್, ಸ್ಥಳ: ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನ, ಹೆಚ್.ಡಿ.ಕೋಟೆ ಟೌನ್, ಬೆಳಗ್ಗೆ 11ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ–ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಸಕ್ಕರೆ ನಾಡಿನ ಅಕ್ಕರೆಯ ಲೇಖಕರು, ಲೇಖನ ಹಾಗೂ ಪ್ರಸ್ತುತಿ : ಶಭಾನ ಮತ್ತು ಕೀರ್ತಿ. ಎಸ್. ಬೈಂದೂರು, ಪರಿಕಲ್ಪನೆ : ಅಬ್ದುಲ್ ರಶೀದ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಮುಂದಿನ ವಾರದಿಂದ ಬಿತ್ತರಗೊಳ್ಳಲಿರುವ ಕಾದಂಬರಿ ಓದಿನ ಕುರಿತು ಪ್ರಸ್ತಾವನೆ. ಪ್ರಸ್ತುತಿ: ಡಾ. ಮೈಸೂರು ಉಮೇಶ್, 8.30 ಬಾನುಲಿ ಇಂಗ್ಲೀಷ್ ಪಾಠ– ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್., 8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.05 ಸಾರ್ವಜನಿಕ ಪ್ರಸಾರ ದಿನ ಕುರಿತ ಕಾರ್ಯಕ್ರಮ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ 'ನಾನು ನನ್ನ ಕಂಪನಿ' ಮುಟ್ಟಿನ ಸಮಯದಲ್ಲಿ ಬಳಸುವ ಪುನರ್ಬಳಕೆಯ ಪ್ಯಾಡ್, ಮುಟ್ಟಿನ ಬಟ್ಟಲು ಹಾಗೂ ಪೀರಿಯಡ್ ಪ್ಯಾಂಟೀಸ್ ಅನ್ನು ತಯಾರಿಸುವ ಉದ್ಯಮಿ ದಿವ್ಯಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ : ಸಹನ, 12.35 ದೇವರನಾಮ–ವಂದನಾ. ವಿ., 12.45 'ಹೆಸರಾಯಿತು ಕರ್ನಾಟಕ ಉಸಿರಾಗಲಿ ಕನ್ನಡ', ಮಾತನಾಡುತ್ತಾರೆ : ಬಾಳೆಲೆ. ಜೆ. ಸೋಮಣ್ಣ, 1.00 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್., 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನಿಶಾ ರಾಜಗೋಪಾಲನ್ – ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಗದಾಯುದ್ಧ, ಪ್ರಸ್ತುತಿ: ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ: ಕಿಸಾನ್‌ವಾಣಿ– ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ, ರೇಷ್ಮೆ ಐಸಿರಿ– ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ರೇಷ್ಮೆ ಕೃಷಿ ಉಪ ಉತ್ಪನ್ನಗಳು. ಈ ಕುರಿತು ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಕೆ.ಎನ್. ಮಧುಸೂದನ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಪಂಡಿತ್. ಡಿ.ಕೆ. ದಾತಾರ್ – ವೈಯೋಲಿನ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಉಷಾ ರಾಮಮೂರ್ತಿ – ಗೋಟುವಾದ್ಯ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ, 10.30 ಸವಿನೆನಪು

ಯಾರದೋ ಜಮೀನಿಗೆ ಮತ್ಯಾರಿಗೋ 11 ಪರಿಹಾರ ನಿವೇಶನ

ಮುಡಾ ಮಾಜಿ ಆಯುಕ್ತ ದಿನೇಶ್‌ಕುಮಾರ್ ಮತ್ತೊಂದು ಪವಾಡ

● ಹಿಂದೆ ಮುಂದೆ ನೋಡದೇ ಕಂಡಕಂಡವರಿಗೆ ಮುಡಾ ಆಸ್ತಿ ಪರಭಾರೆ ● ಇಷ್ಟೆಲ್ಲಾ ಆದರೂ ದಿನೇಶ್‌ಕುಮಾರ್ ಇನ್ನೂ ಸೇಫ್; ಏನಿದರ ಮರ್ಮ!

ಎಸ್.ಟಿ.ರವಿಕುಮಾರ್

ಮೈಸೂರು, ನ. 11– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಅಕ್ರಮವಾಗಿ ನಿವೇಶನಗಳ ಹಂಚಿಕೆ ಮಾಡಿರುವ ಒಂದೊಂದೇ ಪ್ರಕರಣ ಬಯಲಾಗುತ್ತಿದ್ದು, 'ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ' ಎಂಬಂತೆ ಮುಡಾದ ಹಿಂದಿನ ಆಯುಕ್ತ ಜಿ.ಟಿ.ದಿನೇಶ್ ಕುಮಾರ್ ಅವರು ಯಾರದೋ ಜಮೀನಿಗೆ ಮತ್ಯಾರಿಗೋ ಕೋಟ್ಯಾಂತರ ರೂ. ಮೌಲ್ಯದ 11 ನಿವೇಶನಗಳನ್ನು ಧಾರೆ ಎರೆದಿರುವ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿದೆ.

ಮೈಸೂರಿನ ಕ್ಯಾತಮಾರನಹಳ್ಳಿ ಸರ್ವೆ ನಂಬರ್‌ಗೆ ಸಂಬಂಧಿಸಿದ ಜಮೀನೊಂದು ತನಗೆ ಸೇರಿದ್ದೆಂದು ವ್ಯಕ್ತಿಯೋರ್ವ ಹೂಡಿದ ಅರ್ಜಿ ಸಿವಿಲ್ ನ್ಯಾಯಾಲಯದಲ್ಲಿ ವಜಾಗೊಂಡಿದೆ. ಆದರೆ, ಆತ ಉಪವಿಭಾಗಾಧಿಕಾರಿ ಮೊರೆ ಹೋದ. ಅದರಂತೆ ಉಪವಿಭಾಗಾಧಿಕಾರಿ ಸೂಚನೆಯಂತೆ ಪ್ರಕರಣ ಕೈಗೆತ್ತಿಕೊಂಡ ತಹಸೀಲ್ದಾರ್ ವಿಚಾರಣೆಯನ್ನೇ ನಡೆಸದೆ ಆ ವ್ಯಕ್ತಿ ಹೆಸರಿನಲ್ಲೇ ದಾಖಲೆ ಮಾಡಿಕೊಟ್ಟರೆ, ಅದನ್ನು ಪ್ರಶ್ನಿಸಿದ ತಕರಾರು ಅರ್ಜಿ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಬಾಕಿ ಇದೆ. ಆದರೂ, ಯಾವುದೋ ರಾಜ್ಯದ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ತೀರ್ಪನ್ನು ಉಲ್ಲೇಖಿಸಿ ನಿವೇಶನಗಳನ್ನು ಮಂಜೂರು ಮಾಡುವ ದಿನೇಶ್‌ಕುಮಾರ್, ಇದ್ಯಾವುದನ್ನೂ ಲೆಕ್ಕಿಸದೇ ಭೂ ಮಾಲೀಕನೇ ಅಲ್ಲದ ವ್ಯಕ್ತಿಗೆ ಮುಡಾಗೆ ಸೇರಿದ ಕೋಟ್ಯಾಂತರ ರೂ. ಮೌಲ್ಯದ 11 ನಿವೇಶನಗಳನ್ನು ಮಂಜೂರು ಮಾಡಿದ್ದಾರೆ.

ವಿವರ: ಶಿವಚಿಕ್ಕಯ್ಯ ಎಂಬುವರಿಗೆ ಸೇರಿದ ಮೈಸೂರಿನ ಕ್ಯಾತಮಾರನಹಳ್ಳಿ ಸರ್ವೆ ನಂಬರ್ 155ರಲ್ಲಿನ 4.36 ಎಕರೆ ಜಮೀನಿನ ಪೈಕಿ 2.18 ಎಕರೆ ಜಮೀನನ್ನು ಮುಡಾ 1992ರ ಜೂನ್ 9ರಂದು ವಸತಿ ಉದ್ದೇಶಕ್ಕೆ ಭೂಸ್ವಾಧೀನಪಡಿಸಿಕೊಂಡು ಅವರಿಗೆ 3 ನಿವೇಶನ ಹಾಗೂ ಪರಿಹಾರದ ಹಣವನ್ನು ಕೂಡ ಕೊಟ್ಟಿದೆ. ಉಳಿಕೆ 2.18 ಎಕರೆ ಜಮೀನು ಶಿವಚಿಕ್ಕಯ್ಯನವರ ಸ್ವಾಧೀನದಲ್ಲಿಯೇ ಇದೆ.

ಈ ಮಧ್ಯೆ ಕೋದಂಡಯ್ಯ ಮತ್ತು ಅವರ ಮಕ್ಕಳಾದ ಕೆ.ಚಂದ್ರು, ಕೆ. ಮೋಹನ್‌ಕುಮಾರ್ ಅವರು ಈ ಜಮೀನು ತಮಗೇ ಸೇರಿದ್ದು ಎಂದು ಮೈಸೂರಿನ ಸಿವಿಲ್ ನ್ಯಾಯಾಲಯದಲ್ಲಿ ಹೂಡಿದ್ದ ದಾವೆಯನ್ನು 2009ರ ಅಕ್ಟೋಬರ್ 27ರಂದು ನ್ಯಾಯಾಲಯ ವಜಾಗೊಳಿಸಿತ್ತು. ಅಂದರೆ ಸದರಿ ಜಮೀನು ಕೋದಂಡಯ್ಯ ಕುಟುಂಬಕ್ಕೆ ಸೇರಿದ್ದಲ್ಲ.



ಜಿ.ಟಿ.ದಿನೇಶ್‌ಕುಮಾರ್



ಮುಡಾ ಕಚೇರಿ

ಆದರೆ, ಕೋದಂಡಯ್ಯ ಅವರು ಇದೇ ಜಮೀನಿಗೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು, ಉಪವಿಭಾಗಾಧಿಕಾರಿಗಳು ಕಂದಾಯ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನಿಯಮಾನುಸಾರ ಆದೇಶ ಹೊರಡಿಸುವಂತೆ 2012ರ ಆಗಸ್ಟ್ 27ರಂದು ಮೈಸೂರು ತಹಸೀಲ್ದಾರ್‌ರಿಗೆ ನಿರ್ದೇಶನ ನೀಡಿದ್ದರು. ಈ ನಡುವೆ 2016ರ ಆಗಸ್ಟ್ 8ರಂದು ಶಿವಚಿಕ್ಕಯ್ಯ ನಿಧನ ಹೊಂದಿದರು. ಮತ್ತೊಂದೆಡೆ ಕೋದಂಡಯ್ಯನವರು ಕೂಡ ಮೃತರಾಗಿದ್ದರು. ವಿಚಿತ್ರವೆಂದರೆ ಶಿವಚಿಕ್ಕಯ್ಯ ಮೃತರಾದ 7 ವರ್ಷಗಳ ಬಳಿಕ ತಹಸೀಲ್ದಾರರು 2023ರ ಜೂನ್ 6 ಹಾಗೂ ಜುಲೈ 11ರಂದು ತಾವು ನಡೆಸಿದ ವಿಚಾರಣೆಯಲ್ಲಿ ಶಿವಚಿಕ್ಕಯ್ಯ (ಇವರು ಮೃತಪಟ್ಟು 7 ವರ್ಷ ಕಳೆದಿತ್ತು) ಹಾಜರಿದ್ದರು ಎಂದು ನಮೂದಿಸಿ, ಆರ್‌ಟಿಸಿಯಲ್ಲಿ ಕ್ಯಾತಮಾರನಹಳ್ಳಿ ಸರ್ವೆ ನಂಬರ್ 156ರ 2 ಎಕರೆ 18 ಗುಂಟೆ ಸ್ವತ್ತು ಮುಡಾ ಭೂಸ್ವಾಧೀನ ಎಂದು ನಮೂದಿಸಿದ್ದಲ್ಲದೇ, ಉಳಿಕೆ 2 ಎಕರೆ 18 ಗುಂಟೆ ಸ್ವತ್ತು ಗಿರಿಯಾ ಬೋವಿ ಬಿನ್ ಚಿನ್ನಾ ಬೋವಿ ಎಂದು ನಮೂದಿಸಿ 2023ರ ಅಕ್ಟೋಬರ್ 17ರಂದು ಆದೇಶ ಹೊರಡಿಸಿದ್ದಾರೆ. ತಹಸೀಲ್ದಾರ್‌ರ ಈ ಆದೇಶವನ್ನು ಪ್ರಶ್ನಿಸಿ ಶಿವಚಿಕ್ಕಯ್ಯ ಪುತ್ರ ಕೇಶವ ಮೂರ್ತಿಯವರು ಉಪವಿಭಾಗಾಧಿಕಾರಿಗಳ ಕಚೇರಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಅದು ಇನ್ನೂ ವಿಚಾರಣೆ ಹಂತದಲ್ಲಿದೆ.

ಈ ಭೂಮಿಗೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದ್ದರೂ ಕೂಡ ಅದ್ಯಾವುದನ್ನೂ ಲೆಕ್ಕಿಸದ ಮುಡಾ ಹಿಂದಿನ ಆಯುಕ್ತ ದಿನೇಶ್‌ಕುಮಾರ್ ಅವರು, ಇದೇ ಸರ್ವೆ ನಂಬರ್‌ನ 1 ಎಕರೆ 37 ಗುಂಟೆ ಜಮೀನನ್ನು ಮುಡಾ ಭೂಸ್ವಾಧೀನಪಡಿಸಿಕೊಳ್ಳದೇ ಉಪಯೋಗಿಸಿಕೊಂಡಿದೆ ಎಂದು ಉಲ್ಲೇಖಿಸಿ ದಿವಂಗತ ಕೋದಂಡಯ್ಯನವರ ಪುತ್ರ ಕೆ. ಚಂದ್ರ ಅವರಿಗೆ ಚಂದ್ರ ಅವರಿಗೆ ವಿಜಯನಗರ 4ನೇ ಹಂತ 2ನೇ ಘಟ್ಟದಲ್ಲಿ ಕೋಟ್ಯಾಂತರ ರೂ. ಮೌಲ್ಯದ 11 ನಿವೇಶನಗಳನ್ನು ಮಂಜೂರು ಮಾಡಿದ್ದಾರೆ (ಒಟ್ಟು 22,640 ಚದರಡಿ).

ಈ ವಿಷಯ ತಿಳಿಯುತ್ತಿದ್ದಂತೆಯೇ ದಿವಂಗತ ಶಿವಚಿಕ್ಕಯ್ಯರ ಪುತ್ರ ಕೇಶವಮೂರ್ತಿಯವರು ಮುಡಾದಿಂದ ಭೂ ಮಾಲೀಕರಲ್ಲದ ಕೆ. ಚಂದ್ರು ಅವರಿಗೆ 11 ನಿವೇಶನಗಳನ್ನು ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದಾರೆ. ಇವರ ರಿಟ್ ಅರ್ಜಿಯನ್ನು ವಿಚಾರಣೆಗೆ ಅಂಗೀಕರಿಸಿರುವ ಹೈಕೋರ್ಟ್ ಕೆ. ಚಂದ್ರು ಅವರು ಮುಂದಿನ ವಾಯಿದೆವರೆಗೂ ಈ ಸ್ವತ್ತಿನಲ್ಲಿ ಪ್ರವೇಶ ಮಾಡಬಾರದೆಂದು ತಿಳಿಸಿ 2024ರ ಆಗಸ್ಟ್ 28ರಂದು ಪ್ರಕರಣವನ್ನು ಮುಂದೂಡಿದೆ. ಈ ಹಿನ್ನೆಲೆಯಲ್ಲಿ ಮುಡಾ ಆಯುಕ್ತರಿಗೆ ಸೆಪ್ಟೆಂಬರ್ 5ರಂದು ಮನವಿ ಸಲ್ಲಿಸಿರುವ ಕೇಶವ ಮೂರ್ತಿ, ಕ್ಯಾತಮಾರನಹಳ್ಳಿ ಸರ್ವೆ ನಂಬರ್ 155ರಲ್ಲಿನ 4 ಎಕರೆ 36 ಗುಂಟೆ ಜಮೀನು ಪೈಕಿ 2 ಎಕರೆ 18 ಗುಂಟೆಗೆ ಸಂಬಂಧಿಸಿದಂತೆ ಯಾವುದೇ ರೀತಿಯ ವ್ಯವಹಾರ ವನ್ನಾಗಲೀ ಕಚೇರಿ ಕಡತಗಳಲ್ಲಿ ಬದಲಾವಣೆಯನ್ನಾಗಲೀ, ಇತರೆ ಆದೇಶಗಳನ್ನಾಗಲೀ ಮಾಡಬಾರದು ಎಂದು ಮನವಿ ಸಲ್ಲಿಸಿದ್ದಾರೆ.

ಚನ್ನಪಟ್ಟಣ, ಶಿಗ್ಗಾಂವಿ, ಸಂಡೂರು ಉಪಸಮರದ ಬಹಿರಂಗ ಪ್ರಚಾರಕ್ಕೆ ತೆರೆ

● ಅಂತಿಮ ಘಳಿಗೆವರೆಗೆ ಎನ್‌ಡಿಎ–ಕಾಂಗ್ರೆಸ್ ಅಬ್ಬರದ ಪ್ರಚಾರ ● ಹೊರಗಿನವರು ಕ್ಷೇತ್ರ ತೊರೆಯಲು ಚುನಾವಣಾ ಆಯೋಗ ಸೂಚನೆ ● ನ. 13ರಂದು ಮತದಾನ; ನ.23ಕ್ಕೆ ಫಲಿತಾಂಶ ● ಮತದಾನಕ್ಕೆ ಅನುಕೂಲವಾಗಿ ಮೂರೂ ಕಡೆ ಸರ್ಕಾರಿ ರಜೆ ಘೋಷಣೆ

ಬೆಂಗಳೂರು, ನ.11(ಕೆಎಂಶಿ)– ಕುಟುಂಬ ರಾಜಕಾರಣವೇ ಪ್ರತಿಷ್ಠೆಯಾಗಿರುವ ರಾಜ್ಯದ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯ ಬಹಿರಂಗ ಪ್ರಚಾರಕ್ಕೆ ತೆರೆ ಬಿದ್ದಿದೆ.

ಚನ್ನಪಟ್ಟಣ, ಶಿಗ್ಗಾಂವಿ ಹಾಗೂ ಸಂಡೂರು ವಿಧಾನಸಭಾ ಕ್ಷೇತ್ರಗಳಿಗೆ ನಡೆಯುತ್ತಿರುವ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ತೆರೆ ಬೀಳುತ್ತಿದ್ದಂತೆ ಮತದಾರರಲ್ಲದವರು ಕ್ಷೇತ್ರ ತೆರವುಗೊಳಿಸುವಂತೆ ಸಂಬಂಧಪಟ್ಟ ಜಿಲ್ಲಾ ಚುನಾವಣಾಧಿಕಾರಿಗಳು ಆದೇಶ ಮಾಡಿದ್ದಾರೆ.

ಈ ಕ್ಷೇತ್ರಗಳಿಗೆ ನವೆಂಬರ್ 13ರಂದು ಮತದಾನ ನಡೆಯಲಿದ್ದು, ಅಭ್ಯರ್ಥಿಗಳು ಮನೆ–ಮನೆಗೆ ತೆರಳಿ ಮತ ಯಾಚಿಸಬಹುದಾಗಿದೆ. ಉಪಚುನಾವಣೆಯನ್ನು ಸರ್ಕಾರ ಎಷ್ಟು ಪ್ರತಿಷ್ಠೆಯಾಗಿ ತೆಗೆದುಕೊಂಡಿದೆಯೋ, ಅಷ್ಟೇ ಪ್ರತಿಷ್ಠೆಯಾಗಿ ಪ್ರತಿಪಕ್ಷ ಎನ್‌ಡಿಎ ಮೈತ್ರಿಕೂಟ ತೆಗೆದುಕೊಂಡಿದ್ದು, ಉಪಚುನಾವಣೆಯ ಎಲ್ಲಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿ ರಾಜ್ಯ ಕಾಂಗ್ರೆಸ್ ಸರ್ಕಾರಕ್ಕೆ ಪೆಟ್ಟು ನೀಡಲು ಅವಿರತ ಹೋರಾಟ ನಡೆಸಿದೆ.

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಕುಟುಂಬದ ಕುಡಿ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪುತ್ರ ನಿಖಿಲ್ ಕುಮಾರಸ್ವಾಮಿ ಚನ್ನಪಟ್ಟಣದಿಂದ ತಮ್ಮ ಅದೃಷ್ಟ ಪರೀಕ್ಷೆಗೆ ಕಣಕ್ಕಿಳಿದಿದ್ದಾರೆ. ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಮಾಜಿ ಸಚಿವ ಸಿ.ಪಿ. ಯೋಗೇಶ್ವರ್, ಎನ್‌ಡಿಎ ಅಭ್ಯರ್ಥಿ ನಿಖಿಲ್‌ಗೆ ಪ್ರತಿಸ್ಪರ್ಧಿ, ಕ್ಷೇತ್ರದಲ್ಲಿ ಯೋಗೇಶ್ವರ್‌ಗಿಂತ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ, ಪಕ್ಷದ ಅಭ್ಯರ್ಥಿ ಗೆಲುವು ಹೆಚ್ಚು ಪ್ರತಿಷ್ಠೆಯಾಗಿದ್ದು, ಗೌಡರ ಕುಟುಂಬದ ವಿರುದ್ಧ ಟೊಂಕ ಕಟ್ಟಿ ಹೋರಾಟ ನಡೆಸಿದ್ದಾರೆ. ಇನ್ನು ಶಿಗ್ಗಾಂವಿಯಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಪುತ್ರ ಭರತ ಬೊಮ್ಮಾಯಿ ಬಿಜೆಪಿ ಅಭ್ಯರ್ಥಿಯಾಗಿ ಕಣದಲ್ಲಿದ್ದಾರೆ.





ಸಂಡೂರು ಕ್ಷೇತ್ರದಲ್ಲಿ ಮಾಜಿ ಸಚಿವ ಹಾಗೂ ಹಾಲಿ ಸಂಸದ ಇ.ತುಕಾರಾಂ ಪತ್ನಿ ಅನ್ನಪೂರ್ಣ ಕಾಂಗ್ರೆಸ್‌ನ ಅಭ್ಯರ್ಥಿಯಾಗಿದ್ದಾರೆ. ಇಲ್ಲಿ ಸಚಿವ ಸಂತೋಷ್ ಲಾಡ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಂಡೂರು ಉಳಿಸಿಕೊಳ್ಳುವುದು ಪ್ರತಿಷ್ಠೆಯಾಗಿದೆ. ಇದೇ ಕಾರಣಕ್ಕಾಗಿ ಮುಖ್ಯಮಂತ್ರಿ ಅವರು ಕ್ಷೇತ್ರದಲ್ಲಿ ಐದು ದಿನ ಬಿಡಾರ ಹೂಡಿ ಪ್ರಚಾರ ಕೈಗೊಂಡಿದ್ದಾರೆ. ಅಷ್ಟೇ ಪ್ರತಿಷ್ಠೆಯಾಗಿ ತೆಗೆದುಕೊಂಡಿರುವ ಬಿಜೆಪಿ, ಕಾಂಗ್ರೆಸ್‌ನಿಂದ ಕ್ಷೇತ್ರ ಕಸಿದುಕೊಳ್ಳಲು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ದಿಗ್ಗಜ ನಾಯಕರುಗಳನ್ನು ಪ್ರಚಾರಕ್ಕಿಳಿಸಿದೆ. ಮೂರು ಕ್ಷೇತ್ರಗಳಲ್ಲಿ ಎಚ್.ಡಿ.ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ ಹಾಗೂ ಇ. ತುಕಾರಾಂ ಲೋಕಸಭೆಗೆ ಆಯ್ಕೆಗೊಂಡಿದ್ದರಿಂದ ಈ ಸ್ಥಾನಗಳು ತೆರವಾಗಿದ್ದು ಉಪಚುನಾವಣೆ ಎದುರಾಗಿದೆ.

ಪ್ರಚಾರಕ್ಕೆ ಕೊನೆಯ ದಿನದಂದು ಮೂರೂ ಕ್ಷೇತ್ರಗಳಲ್ಲೂ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಬೃಹತ್ ಬಹಿರಂಗ ಸಮಾವೇಶ ನಡೆಸಿ ಮತದಾರರ ಓಲೈಕೆಗೆ ಪ್ರಯತ್ನಿಸಿದವು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟ ಸಚಿವರು ಹಾಗೂ ಕಾಂಗ್ರೆಸ್‌ನ ಘಟಾನುಘಟಿಗಳೂ ಸೇರಿದಂತೆ ಇಡೀ ಸರ್ಕಾರ ಚನ್ನಪಟ್ಟಣದಲ್ಲೇ ಬಿಡಾರ ಹೂಡಿ ಮತದಾರರ ಒಲವಿಗೆ ಪ್ರಯತ್ನ ನಡೆಸಿದರು.

ಸರ್ಕಾರದ ವಿರುದ್ಧ ಬಹಿರಂಗ ಕದನಕ್ಕೆ ಇಳಿದಿರುವ ಬಿಜೆಪಿ ಹಾಗೂ ಜೆಡಿಎಸ್ ನಾಯಕರು ಈ ಕ್ಷೇತ್ರದಲ್ಲೇ ಬೃಹತ್ ಬಹಿರಂಗ ಸಭೆ ಮತ್ತು ಪಾದಯಾತ್ರೆ ನಡೆಸಿದರು. ಪ್ರಚಾರ ಕಾರ್ಯದಲ್ಲಿ ಎಚ್.ಡಿ.ದೇವೇಗೌಡ, ಎಚ್.ಡಿ. ಕುಮಾರಸ್ವಾಮಿ, ಆರ್.ಅಶೋಕ್, ಡಾ.ಅಶ್ವತ್ಥನಾರಾಯಣ ಸೇರಿದಂತೆ ಹಲವು ಮುಖಂಡರು ಪಾಲ್ಗೊಂಡಿದ್ದರು. ಉಪಚುನಾವಣೆಯ ದಿನದಂದು ಮತದಾನಕ್ಕೆ ಅನುಕೂಲವಾಗುವಂತೆ ಮೂರೂ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸರ್ಕಾರಿ ಹಾಗೂ ಸಾರ್ವಜನಿಕ ಸಂಸ್ಥೆಗಳಿಗೆ ರಜೆ ಘೋಷಿಸಲಾಗಿದೆ.

ರಾಜ್ಯ ಮಟ್ಟದಲ್ಲಿನ ಏರ್‌ಪಿಸ್ತೂಲ್ ಶೂಟಿಂಗ್‌ನಲ್ಲಿ ಚೈತ್ರಗೆ ಎರಡನೇ ಸ್ಥಾನ

ಸುತ್ತೂರು, ನ.11–ರಾಜ್ಯಮಟ್ಟದ ಶೂಟಿಂಗ್ ಸ್ಪರ್ಧೆಯಲ್ಲಿ ವರುಣಾ ಕ್ಷೇತ್ರಕ್ಕೆ ಸೇರುವ ನಾಡನಹಳ್ಳಿ ಗ್ರಾಮದ ಪ್ರತಿಭಾನ್ವಿತೆ ಎಂ.ಎಲ್. ಚೈತ್ರರವರು ಮಿಂಚಿ 2ನೇ ಸ್ಥಾನ ಪಡೆದಿದ್ದಾರೆ.



ವರುಣಾ ಕ್ಷೇತ್ರಕ್ಕೆ ಸೇರುವ ನಾಡನಹಳ್ಳಿ ಗ್ರಾಮದ ಎಂ.ಕೆ.ಲಿಂಗರಾಜು, ಎಸ್.ಜಿ. ಕುಸುಮ ಅವ ಪುತ್ರಿ ಎಂ.ಎಲ್. ಚೈತ್ರ ಏರ್ ಪಿಸ್ತೂಲ್‌ನಲ್ಲಿ ಮಿಂಚುತ್ತಿರುವ ಪ್ರತಿಭೆಯಾಗಿದ್ದು, ಬೆಂಗಳೂರಿನಲ್ಲಿ ನಡೆದ ರಾಜ್ಯ ರೈಫಲ್ ಅಸೋಸಿಯೇಷನ್ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ 10 ಮೀಟರ್ ಏರ್‌ಪಿಸ್ತೂಲ್ ವಿಭಾಗದಲ್ಲಿ ಎಂ.ಎಲ್.ಚೈತ್ರ ದ್ವಿತೀಯ ಸ್ಥಾನ ಗಳಿಸಿದ್ದಾರೆ.

ರಾಜಕಮಲ್ ಚಿತ್ರಮಂದಿರದ ಮಾಲೀಕ ಜೀವನ್ ಕುಮಾರ್ ನಿಧನ



ಮೈಸೂರು, ನ. 11– ಮೈಸೂರಿನ ಶಿವರಾಂ ಪೇಟೆಯಲ್ಲಿರುವ ರಾಜಕಮಲ್ ಚಿತ್ರಮಂದಿರದ ಮಾಲೀಕರಾದ ಗೌಡರ ಕಾಳಪ್ಪ ಧರ್ಮಪ್ಪ (ಜಿಕೆಡಿ) ಅವರ ಮೊಮ್ಮಗ ಮತ್ತು ಇಟ್ಟಿಗೆಗೂಡು (ಇಂದಿರಾ ನಗರ) ನಿವಾಸಿ ಜಿ.ಎನ್.ಜೀವನ್ ಕುಮಾರ್(72) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ ಮಾಲಿನಿ ಜೀವನ್, ಪುತ್ರಿಯರಾದ ಜೀವಿತಾ ಮತ್ತು ಪ್ರಣೀತಾ, ಅಳಿಯ ಮತ್ತು ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಾಳೆ (ನ.12) ಬೆಳಗ್ಗೆ 11ಕ್ಕೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಈ ಚಿತ್ರಮಂದಿರವನ್ನು ಸ್ವಾತಂತ್ರ್ಯ ಪೂರ್ವದಲ್ಲಿ ಅಂದರೆ ಜೂನ್ 19, 1946ರಲ್ಲಿ ಜಿಕೆಡಿ ಬರ್ಮಯ್ಯ ನಿರ್ಮಿಸಿದ್ದರು.

ನಾಳೆ ಕಾಲೇಜು, ತಾಂತ್ರಿಕ ಶಿಕ್ಷಣ ಇಲಾಖೆಗಳ ಕಾಮಗಾರಿಗಳ ಶಂಕುಸ್ಥಾಪನೆ

ಮೈಸೂರು,ನ.11–ಉನ್ನತ ಶಿಕ್ಷಣ ಇಲಾಖೆ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ವಸತಿ ಇಲಾಖೆ ಹಾಗೂ ಲೋಕೋಪಯೋಗಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ "ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಗಳ ಕಾಮಗಾರಿಗಳ ಶಂಕು ಸ್ಥಾಪನೆ ಸಮಾರಂಭವನ್ನು ನ.13 ರಂದು ಬೆಳಗ್ಗೆ 10.30 ಗಂಟೆಗೆ ಮಹಾರಾಜ ಪಿ.ಯು ಕಾಲೇಜು ಮೈದಾನದಲ್ಲಿ ಏರ್ಪಡಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಮಗಾರಿಗಳ ಶಂಕುಸ್ಥಾಪನೆ ಮಾಡಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್, ಕೇಂದ್ರ ಸಚಿವ ಹೆಚ್. ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಡಾ.ಎಂ.ಸಿ. ಸುಧಾಕರ್, ಲೋಕೋಪಯೋಗಿ, ಸತೀಶ್ ಜಾರಕಿಹೊಳಿ ಮತ್ತು ವಸತಿ ಹಾಗೂ ಬಿ.ಝಡ್.ಜಮೀರ್ ಅಹ್ಮದ್ ಖಾನ್ ಉಪಸ್ಥಿತರಿರುವರು.

ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಸಂಸದರಾದ ಯಧುವೀರ್ ಸುನಿಲ್ ಬೋಸ್ ಅವರು ಆಗಮಿಸಲಿದ್ದಾರೆ.

ಶಾಸಕರಾದ ಕೆ.ಎಂ.ಶಿವಲಿಂಗೇಗೌಡ, ಅನಿಲ್ ಚಿಕ್ಕಮಾದು, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷರಾದ ಎ.ಬಿ ರಮೇಶ್ ಬಂಡಿ ಸಿದ್ದೇಗೌಡ ಹಾಗೂ ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಹಾಗೂ ಬೆಂಗಳೂರಿನ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ ಗೌರವ ಉಪಸ್ಥಿತರಿರಲಿದ್ದಾರೆ. ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ ಹರೀಶ್‌ಗೌಡ ಹಾಗೂ ವಿಧಾನ ಪರಿಷತ್ ಸದಸ್ಯರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಯತೀಂದ್ರ.ಎಸ್ ಮತ್ತು ವಿವೇಕಾನಂದ. ಎಸ್ ಸಮಾರಂಭದ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಅರಮನೆ ಮಂಡಲಿಯ ಉಪ–ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರಿಗೆ ಅಭಿನಂದನೆ



ಮೈಸೂರು ಅರಮನೆ ಮಂಡಳಿಯ ಉಪ–ನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಅವರು ಮೈಸೂರು ಅರಮನೆಯ ಅಭಿವೃದ್ಧಿ ಕೆಲಸಗಳಲ್ಲಿ, ನಿರ್ವಹಣೆಯಲ್ಲಿ ತೋರಿದ ದಕ್ಷತೆ, ಪ್ರಾಮಾಣಿಕ ಸೇವೆಯನ್ನು ಪರಿಗಣಿಸಿ ನಂಜನಗೂಡಿನ ಪಾರ್ವತಿ ಶ್ರೀಕಂಠೇಶ್ವರ ಸ್ವಾಮಿ ಶ್ರೀಕ್ಷೇತ್ರದಲ್ಲಿರುವ ಶ್ರೀ ಶ್ರೀಕಂಠೇಶ್ವರ ಸೇವಾ ಸಂಘದವರು ಮೈಸೂರಿನ ಕಲ್ಯಾಣ ಭವನದಲ್ಲಿ ಸನ್ಮಾನಿಸಿ, ಆಶೀರ್ವದಿಸಿದರು.

ನಕ್ಕರೆ ಅದೇ ಸ್ವರ್ಗ

ನಿರ್ಮಾಪಕ : ನಿರ್ದೇಶಕರೇ, ಚಿತ್ರಕ್ಕೆ ಒಳ್ಳೆ ಹೆಸರಿಡಿ. ಎಂಥಾ ಹೆಸರಿರಬೇಕೆಂದರೆ, ಚಿತ್ರದ ಹೆಸರು ಕೇಳಿ ವಿದ್ಯಾರ್ಥಿಗಳು ಗಡಗಡ ನಡುಗಬೇಕು.
ನಿರ್ದೇಶಕ : ಯಾಕೆ ಹಾಗೆ?
ನಿರ್ಮಾಪಕ : ಜನ ಚೇಂಜ್ ಕೇಳ್ತಾರ್ರೀ..
ನಿರ್ದೇಶಕ : ಹಾಗಾದ್ರೆ "ಇಂದು ಪರೀಕ್ಷೆ, ನಾಳೆ ರಿಸಲ್ಟ್" ಅಂತ ಹೆಸರಿಟ್ಟರೆ?

ಮೈಸೂರು ಮಿತ್ರ

ಮಂಗಳವಾರ, 12 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಜೀವನದಲ್ಲಿ ಸದಾ ಸಂತೋಷವಾಗಿರಬೇಕು. ಅಂದರೆ ಭಾವನೆಗಳ ಕೈಗೆ ಬದುಕನ್ನು, ನೆನಪುಗಳ ಕೈಗೆ ಮನಸ್ಸನ್ನು, ಆಸೆಗಳ ಕೈಗೆ ಬುದ್ಧಿಯನ್ನು, ಜನರ ಮಾತುಗಳಿಗೆ ಕಿವಿಯನ್ನು ಯಾವತ್ತಿಗೂ ಕೊಡದೇ ಇದ್ದರೆ ಸಾಕು. –ಭಾವಯಾನ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬರಲ್ಲ...

ನಿಮ್ಮ ಪತ್ರಗಳು

■ ಉದ್ಯೋಗಿಗಳ ಸಂಖ್ಯೆ ಹೆಚ್ಚಬೇಕು

ಮಾನ್ಯರೆ,

ಬ್ಯಾಂಕುಗಳು ಜನಸಾಮಾನ್ಯರ ದೈನಂದಿನ ಬದುಕಿನ ಅವಿಭಾಜ್ಯ ಅಂಗ. ಹಲವಾರು ಶಾಖೆಗಳಲ್ಲಿ ಸಿಬ್ಬಂದಿಗಳ ಕೊರತೆ ಎದ್ದು ಕಾಣುತ್ತದೆ. ಸಿಬ್ಬಂದಿಗಳ ಕೊರತೆ ಕಾಡುವಾಗ ಈಗಿರುವ ಉದ್ಯೋಗಿಗಳ ಮೇಲೆ ಹೆಚ್ಚಿನ ಒತ್ತಡ ಬಿದ್ದು ಅವರು ನೀಡುವ ಸೇವೆಯಲ್ಲೂ ವ್ಯತ್ಯಯ ಉಂಟಾಗುವ ಸಂಭಾವ್ಯತೆ ಇರುತ್ತದೆ. ಹೆಚ್ಚಿನ ಸಿಬ್ಬಂದಿಗಳನ್ನು ನೇಮಿಸಿದರೆ ಗ್ರಾಹಕರಿಗೆ ಉತ್ತಮ ಸೇವೆಯೂ ಲಭಿಸುತ್ತದೆ. ನಿರುದ್ಯೋಗ ಸಮಸ್ಯೆಯೂ ತಕ್ಕ ಮಟ್ಟಿಗೆ ಕಡಿಮೆಯಾಗಿ, ಹೆಚ್ಚಿನ ಠೇವಣಿಗಳೂ ಬರಬಹುದು. **–ಚೇತನ್ ಎನ್.ಆರ್., ಪದವಿ ವಿದ್ಯಾರ್ಥಿ, ನಗರ್ಲೆ, ನಂಜನಗೂಡು.**

■ ನಗೆಯು ಬರುತಿದೆ !

ಮಾನ್ಯರೆ,

ಮೈಸೂರಿಗೆ ಆರೋಪಿಯಾಗಿ ಲೋಕಾಯುಕ್ತ ತನಿಖೆಗೆ ಬಂದ ರಾಜ್ಯದ ಮುಖ್ಯಮಂತ್ರಿಗಳು ತಮ್ಮ ಸರಕಾರಿ ವಾಹನವನ್ನು ಬಳಸದೆ ಖಾಸಗಿ ಕಾರಿನಲ್ಲಿ ಬಂದರೆಂಬುದು ಮಾಧ್ಯಮಗಳಲ್ಲಿ ಸುದ್ದಿಯಾಯಿತು.

ಹಾಗೆ ಬಂದ ಅವರು ಸರಕಾರಿ ಅತಿಥಿ ಗೃಹದಲ್ಲಿ ಕೆಲಕಾಲ ಉಳಿದರು. ಆಗ ನಮ್ಮ ಪೊಲೀಸರು ಅವರಿಗೆ ರಾಜ ಮರ್ಯಾದೆ ಮಾಡಿ ಗೌರವ ರಕ್ಷೆ ನೀಡಿದ್ದೂ ಹಾಸ್ಯಾಸ್ಪದವೆನಿಸಿತು ನನಗೆ. ಆರೋಪಿಯೊಬ್ಬ, ಯಾವ ಅತೀ ಗಣ್ಯ ವ್ಯಕ್ತಿಯಾಗಿದ್ದರೂ ಆತನನ್ನು ಇತರ ಜನಸಾಮಾನ್ಯರಂತೆ ಪೊಲೀಸರು ಪರಿಗಣಿಸಬೇಕಾಗಿತ್ತು. ಅದು ಬಿಟ್ಟು ಪೊಲೀಸರು ಆರೋಪಿ ಮುಖ್ಯಮಂತ್ರಿಗೆ ರಾಜ ಮರ್ಯಾದೆ ಮಾಡಿ ಜನರು ಎದ್ದು ಬಿದ್ದು ನಗುವಂತೆ ನಡೆದುಕೊಂಡಿದ್ದು ಸರಿಯಲ್ಲ.

–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

■ ಎನ್‌ಇಟಿ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗೆ ಆದ್ಯತೆ

ಮಾನ್ಯರೆ,

ಕೇಂದ್ರ ಸರ್ಕಾರ ನಡೆಸುವ ರಾಷ್ಟ್ರೀಯ ಅರ್ಹತಾ ಪರೀಕ್ಷೆಗಳಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆ ಪ್ರಚಲಿತದಲ್ಲಿ ಇರುವುದರಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಕಬ್ಬಿಣದ ಕಡಲೆಯಂತೆ ಇರುವ ಇಂಗ್ಲೀಷ್ ಹಾಗೂ ಹಿಂದಿ ಭಾಷೆಗಳನ್ನು ಅರ್ಥೈಸಿಕೊಂಡು ಉತ್ತೀರ್ಣರಾಗುವುದು ನಿಜಕ್ಕೂ ಹರಸಾಹಸ ಪಡಬೇಕಾದ ಸನ್ನಿವೇಶ ಎದುರಾಗುತ್ತಿದೆ! ಇತ್ತೀಚಿನ ದಿನಗಳಲ್ಲಿ ಕನ್ನಡಿಗರಾದ ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ ಅವರು ಕೇಂದ್ರ ಮಟ್ಟದ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗೆ ಅವಕಾಶ ಮಾಡಿಕೊಟ್ಟಿದ್ದು ನಿಜಕ್ಕೂ ಶ್ಲಾಘನೀಯವಾದದ್ದು! ಅದರಂತೆ ಎನ್‌ಇಟಿ ಹಾಗೂ ಸಿಇಟಿ ಅರ್ಹತಾ ಪರೀಕ್ಷೆಯಲ್ಲಿ ಪ್ರಾದೇಶಿಕ ಭಾಷೆಗಳನ್ನು ಪರಿಗಣಿಗೆ ತೆಗೆದುಕೊಂಡು ಮುಂದಿನ ದಿನಗಳಲ್ಲಿ ಪರೀಕ್ಷೆ ನಡೆಸಿದರೆ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ನಿಜಕ್ಕೂ ಅನುಕೂಲವಾಗಲಿದೆ. ಕೇಂದ್ರ ಮಟ್ಟದಲ್ಲಿ ನಡೆಸುವ ಪರೀಕ್ಷೆಗಳಲ್ಲಿ ಪ್ರಾದೇಶಿಕ ಭಾಷೆಗಳಿಗೆ ಆದ್ಯತೆ ನೀಡುವ ಕೂಗು ದಶಮಾನಗಳಿಂದಲೂ ಸಹ ಮೊಳಗುತ್ತಿದೆ. ಆದರೆ ಇದ್ಯಾವುದಕ್ಕೂ ಕ್ಯಾರೆ ಎನ್ನದೆ ಕೇಂದ್ರ ಮಟ್ಟದಲ್ಲಿ ಹಿಂದಿ ಹಾಗೂ ಇಂಗ್ಲಿಷ್ ಭಾಷೆಯಲ್ಲಿಯೇ ವಿದ್ಯಾರ್ಥಿಗಳಿಗೆ ಸವಾಲೊಡ್ಡುತ್ತಿದೆ. ಇನ್ನಾದರೂ ಅರಿತು ಲೋಕಸಭೆಗೆ ಆಯ್ಕೆಯಾಗಿರುವ ಕನ್ನಡಿಗರು 2008 ರಲ್ಲಿ ಶಾಸ್ತ್ರೀಯ ಸ್ಥಾನಮಾನ ದೊರಕಿರುವ ಕನ್ನಡ ಭಾಷೆಯನ್ನು ಪರಿಗಣನೆಗೆ ತೆಗೆದುಕೊಂಡು ಆಯಾ ರಾಜ್ಯದ ಪ್ರಾದೇಶಿಕ ಭಾಷೆಗಳಿಗೆ ಕೇಂದ್ರ ಮಟ್ಟದಲ್ಲಿ ನಡೆಸುವ ಪರೀಕ್ಷೆಗಳಿಗೆ ಮಾನ್ಯತೆ ನೀಡಬೇಕೆಂದು ಸಂಸದರು ಧ್ವನಿ ಎತ್ತಬೇಕಾಗಿದೆ. **–ಶಿವು ಬಂಡಳ್ಳಿ, ಕೊಳ್ಳೇಗಾಲ ತಾಲೂಕು**

■ ಆಟೋ ಚಾಲಕರಿಗೆ ನೈತಿಕತೆ ಇದೆಯೇ?

ಮಾನ್ಯರೆ,

ಆಟೋ ಚಾಲಕರು ವೈಟ್ ಬೋರ್ಡ್ ಎಲೆಕ್ಟ್ರಿಕ್ ವಾಹನಗಳಿಂದ ನಮಗೆ ತೊಂದರೆಯಾಗುತ್ತಿದೆ ಎಂದು ಮೈಸೂರು ಆರ್‌ಟಿಒ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದಾರೆ. ಆದರೆ ಅವರ ಈ ಸ್ಥಿತಿಗೆ ಅವರೇ ಕಾರಣ ಎಂಬುದು ಅರಿವಿಲ್ಲವೇ ಎಂಬ ಅನುಮಾನ ಕಾಡುತ್ತಿದೆ. ಮೈಸೂರಿನಲ್ಲಿ ಯಾವುದೇ ಆಟೋ ಚಾಲಕರೂ ಮೀಟರ್ ಹಾಕುವುದಿಲ್ಲ. ಸ್ವಲ್ಪ ದೂರ ತೆರಳಿದರೂ 50 ರೂ. ಕೇಳುತ್ತಾರೆ. ರೈಲು ನಿಲ್ದಾಣ, ಬಸ್ ನಿಲ್ದಾಣಗಳಲ್ಲಂತೂ ಆಟೋ ಚಾಲಕರು ಹೇಳಿದ್ದೇ ರೇಟು. ರಾತ್ರಿ 10 ಗಂಟೆ ಮೀರಿದರಂತೂ ಮನಸೋ ಇಚ್ಛೆ ಬಾಡಿಗೆ ಕೇಳುತ್ತಾರೆ. ಮನೆ ಸೇರುವ ಧಾವಂತದಲ್ಲಿರುವವರು ಅನಿವಾರ್ಯವಾಗಿ ಕೇಳಿದಷ್ಟು ಹಣ ಕೊಡುವುದು ಅನಿವಾರ್ಯವಾಗಿದೆ. ಇನ್ನು ಆ್ಯಪ್‌ಗಳ ಮೂಲಕ ಬೈಕ್ ಟ್ಯಾಕ್ಸಿ ಬುಕ್ ಮಾಡಿದರೆ ಆಟೋ ಬಾಡಿಗೆಗಿಂತ ಅರ್ಧ ದರದಲ್ಲಿ ತೆರಳಬಹುದು. ಖಾಲಿ ಹೋಗುತ್ತಿದ್ದರೂ ಕರೆದಲ್ಲಿಗೆ ಬರದಿರುವುದು. ಮಿತಿ ಮೀರಿ ಬಾಡಿಗೆ ಕೇಳುವುದು. ಪ್ರಯಾಣಿಕರೊಂದಿಗೆ ಅನುಚಿತವಾಗಿ ವರ್ತಿಸದೇ ಸೌಜನ್ಯದಿಂದ ನಡೆದುಕೊಂಡರೆ ಪ್ರಯಾಣಿಕರು ತಾವಾಗಿಯೇ ಬರುತ್ತಾರೆ. ಈ ವಿಷಯವನ್ನು ಪ್ರತಿಯೊಬ್ಬ ಆಟೋ ಚಾಲಕರೂ ಅರಿಯಬೇಕು. **– ಶ್ರೀದೇವಿ ಎಸ್. ಮೈಸೂರು.**

■ ಹಗರಣಗಳ ಸುಳಿಯಲ್ಲಿ ಸರ್ಕಾರ: ಅಭಿವೃದ್ಧಿ ಕಾರ್ಯಗಳು ಕುಂಠಿತ


ಮಾನ್ಯರೆ,

ಪಂಚ ಗ್ಯಾರಂಟಿಗಳ ಮೂಲಕ ಅಧಿಕಾರಕ್ಕೆ ಬಂದ ರಾಜ್ಯದ ಕಾಂಗ್ರೆಸ್ ಸರ್ಕಾರದ ಒಂದೂವರೆ ವರ್ಷದ ಆಡಳಿತ ಜನತೆಯಲ್ಲಿ ಭ್ರಮನಿರಸನ ಉಂಟು ಮಾಡಿದ್ದು, ದಿನಕ್ಕೊಂದು ಹಗರಣ–ವಿವಾದಗಳೇ ಹೆಚ್ಚು ಸದ್ದು ಮಾಡುತ್ತಿವೆ. ಮುಡಾ ಹಗರಣ, ವಾಲ್ಮೀಕಿ ನಿಗಮದ ಹಗರಣ, ಅಬಕಾರಿ ಇಲಾಖೆಯ ಮಂಥ್ಲಿ ಮನಿ ಹಗರಣ ಸೇರಿದಂತೆ ವಕ್ಫ್ ವಿವಾದಗಳು ಕಾಂಗ್ರೆಸ್ ಕೊರಳಿಗೆ ಸುತ್ತಿಕೊಳ್ಳುತ್ತಿವೆ.

ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಮುಡಾ ಹಗರಣದ ಸುಳಿಗೆ ಸಿಲುಕಿ ತನಿಖೆ ಎದುರಿಸುತ್ತಿದ್ದಾರೆ. ವಾಲ್ಮೀಕಿ ನಿಗಮದ ಹಗರಣದಲ್ಲಿ ಸಚಿವರ ತಲೆದಂಡವಾಗಿದೆ. ಅಲ್ಲದೇ ಅಬಕಾರಿ ಇಲಾಖೆಯಲ್ಲಿ ವರ್ಗಾವಣೆ ಮತ್ತಿತರ ಕಾರಣಕ್ಕೆ ಸಚಿವರ ವಿರುದ್ಧ ಕಿಕ್‌ಬ್ಯಾಕ್ ಆರೋಪ ಕೇಳಿಬರುತ್ತಿದೆ. ಹಲವಾರು ಪ್ರಭಾವಿ ಸಚಿವರಿಗೆ ಎಕರೆಗಟ್ಟಲೇ ಭೂಮಿ ಹಂಚಿಕೆ ಮಾಡಲಾಗಿದೆ ಎಂಬ ಗಂಭೀರ ಆರೋಪಗಳು ಕೇಳಿಬರುತ್ತಿವೆ.

ಇತ್ತ ಪಂಚ ಗ್ಯಾರಂಟಿಗಳ ಬಗ್ಗೆ ಹಲವಾರು ಅಪಸ್ವರಗಳು ಕೇಳಿಬರುತ್ತಿದ್ದು ರಾಷ್ಟ್ರಮಟ್ಟದಲ್ಲಿ ಟೀಕೆಗಳು ವ್ಯಕ್ತವಾಗುತ್ತಿವೆ. ಹಲವು ರಾಜ್ಯಗಳ ಚುನಾವಣೆಯಲ್ಲಿ ಈ ವಿಷಯವೇ ಹೆಚ್ಚು ಸದ್ದು ಮಾಡುತ್ತಿವೆ. ಒಟ್ಟಾರೆ ಕಾಂಗ್ರೆಸ್ ಸರ್ಕಾರ ಹಗರಣಗಳ ಸುಳಿಯಲ್ಲೇ ಗಿರಕಿ ಹೊಡೆಯುತ್ತಿದ್ದು ಅಭಿವೃದ್ಧಿ ಕಾರ್ಯಗಳಿಗೆ ಗರ ಬಡಿದು ರಾಜಕೀಯ ಮೇಲಾಟವೇ ಹೆಚ್ಚು ಸದ್ದು ಮಾಡುತ್ತಿರುವುದು ದುರಂತವೇ ಸರಿ.

– ಹೆಚ್.ಆರ್.ಪ್ರಸಾದ್, ವಿವೇಕಾನಂದನಗರ, ಮೈಸೂರು,





ಕೆಬಿಜಿಯವರ

ಛೂಮಂತ್ರ... ಛೂಮಂತ್ರ... ಛೂಮಂತ್ರ...

ಈಗಲಾದರೂ ಸತ್ಯ ಹೇಳಬೇಕು!

'ಸತ್ಯವನ್ನೇ ಹೇಳುತ್ತೇನೆ'; ನೋಡಲೇಬೇಕಾದ ಕನ್ನಡ ನಾಟಕ





'ಸತ್ಯವನ್ನೇ ಹೇಳುತ್ತೇನೆ' ಕನ್ನಡ ನಾಟಕದ ಒಂದು ಅದ್ಭುತ ದೃಶ್ಯ. ಬಲಚಿತ್ರದಲ್ಲಿ ಈ ನಾಟಕದಲ್ಲಿ ರೈತ–ನ್ಯಾಯಾಧೀಶರಾಗಿ ಪ್ರಮುಖ ಪಾತ್ರ ನಿರ್ವಹಿಸಿರುವ, ಸದರಿ ನಾಟಕದ ರಚನೆಕಾರ–ನಿರ್ದೇಶಕ, ನಟ ಅಡ್ಡಂಡ ಕಾರಿಯಪ್ಪ ಅವರನ್ನು ಕಾಣಬಹುದು.

ಸಾಮಾಜಿಕ ಜಾಲತಾಣಗಳ ಪವಾಡ ಒಂದರ್ಥದಲ್ಲಿ ಎಲ್ಲರ ವಾಕ್ ಸ್ವಾತಂತ್ರ್ಯಕ್ಕೆ ವರದಾನ, ಹಾಗೆಯೇ ಶಾಪವೂ ಹೌದು. ಇದರಲ್ಲೇನು ಅಚ್ಚರಿಯಿಲ್ಲ. ಹಾಗಾಗಿಯೇ 16 ವರ್ಷಕ್ಕಿಂತ ಕಡಿಮೆ ವಯಸ್ಸಿನ ಯುವಕರು ಸಾಮಾಜಿಕ ಮಾಧ್ಯಮವನ್ನು ಬಳಸುವುದನ್ನು ನಿಷೇಧಿಸಲು ಆಸ್ಟ್ರೇಲಿಯಾ ಸರ್ಕಾರ ನಿರ್ಧರಿಸಿದೆ.

ನಕಲಿ ಸುದ್ದಿಗಳ ಸಾರ್ವತ್ರಿಕ ಹರಡುವಿಕೆಯ ಹೊರತಾಗಿ, ಇದು ಸೈಬರ್ ಕ್ರೈಮ್ ಎಂದು ಕರೆಯಲ್ಪಡುವ ಪಿಡುಗಾಗಿಯೂ ಮಾರ್ಪಟ್ಟಿದೆ. ಇದು ಸಮಾಜದಲ್ಲಿ ಭಾರಿ ಪ್ರಮಾಣದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಯನ್ನು ಸೃಷ್ಟಿಸುತ್ತಿದೆ.

ಇದರ ಹೊರತಾಗಿಯೂ ಇದು ವರದಾನವೂ ಆಗಿದೆ. ರಾಜಕೀಯ, ಇತಿಹಾಸ ಮತ್ತು ಮಾನವ ಚಟುವಟಿಕೆಯ ಪ್ರತಿಯೊಂದು ಕ್ಷೇತ್ರದಲ್ಲೂ ಇದುವರೆಗೆ ಹತ್ತಿಕ್ಕಲ್ಪಟ್ಟ ಸತ್ಯಗಳನ್ನು ಬಹಿರಂಗಪಡಿಸಲು ಬಯಸುವವರಿಗೆ ಇದು ಒಂದು ಗವಾಕ್ಷಿಯಾಗಿದೆ. **ರಾಜಕೀಯದಲ್ಲಿ ರಾಜಕಾರಣಿಗಳು ಸುಳ್ಳನ್ನು ಹೇಳುವ, ಅದನ್ನು ನಂಬಿಸುವ ಪ್ರಯತ್ನದ ಕಲೆಯನ್ನು ಕರಗತ ಮಾಡಿಕೊಂಡಿರುತ್ತಾರೆ. ಆ ಮೂಲಕ ಸತ್ಯವನ್ನು ನಿಗ್ರಹಿಸಿ ಮತ್ತು ಸುಳ್ಳನ್ನು ಬಲವಾಗಿ ಪ್ರತಿಪಾದಿಸುತ್ತಾರೆ.** ಇತ್ತೀಚೆಗಂತೂ ಇದು ಅವರ ಹುಟ್ಟುಗುಣವೇ ಎಂಬ ಅನುಮಾನ ಮೂಡಿಸುತ್ತಿದೆ!

ಇದು, ನಮ್ಮ ಸ್ವಾತಂತ್ರ್ಯದ 76ನೇ ವರ್ಷ ಮತ್ತು ಅಹಿಂಸಾತ್ಮಕ, ಶಾಂತಿಯುತ ಮಾರ್ಗಗಳ ಮೂಲಕ ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟವರು ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರು ಎಂದು ನಂಬಿದ್ದೇವೆ. ಅದರಲ್ಲೂ ಮಹಾತ್ಮ ಗಾಂಧಿ, ಎಲ್ಲರಿಗಿಂತ ಎತ್ತರದ ನಾಯಕರು. ಜೊತೆಗೆ ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭ ಭಾಯಿ ಪಟೇಲ್ ಮತ್ತು ಇತರ ಕೆಲವು ಕಾಂಗ್ರೆಸ್ ಪಕ್ಷದ ನಾಯಕರೂ ಇದ್ದಾರೆ. **ದುಃಖಕರ ಸಂಗತಿ ಎಂದರೆ, ಕಾಂಗ್ರೆಸ್ ಪಕ್ಷಕ್ಕೆ ಸೇರದ ಡಾ.ಬಿ.ಆರ್. ಅಂಬೇಡ್ಕರ್, ವೀರ್ ಸಾವರ್ಕರ್ ಮತ್ತು ಸುಭಾಷ್ ಚಂದ್ರ ಬೋಸ್‌ರಂತಹ ಇತರ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರು ನಿರ್ವಹಿಸಿದ ಪಾತ್ರವನ್ನು ಇತಿಹಾಸದ ಪುಟಗಳಲ್ಲಿ ಅಥವಾ ಸಾರ್ವಜನಿಕ ಭಾಷಣದಲ್ಲಿ ಸಂಪೂರ್ಣವಾಗಿ ಕಡೆಗಣಿಸಲಾಗಿದೆ.**

ಈ ಸುಳ್ಳು ನಿರೂಪಣೆಯನ್ನು, ತಾರತಮ್ಯದ ಭಾಷಣವನ್ನು ಸರಿಯಾದ ದೃಷ್ಟಿಕೋನದಲ್ಲಿ ಬಿಂಬಿಸಿ, ನಮ್ಮ ಸ್ವಾತಂತ್ರ್ಯ ಹೋರಾಟದ ಇತರ ನಾಯಕರ ಮೇಲೆ ಬೆಳಕು ಚೆಲ್ಲುವ ಹಾಗೂ ಇಂದಿನ ಪೀಳಿಗೆಗೆ ಸತ್ಯವನ್ನು ಮನವರಿಕೆ ಮಾಡಿಕೊಡುವ ಪ್ರಯತ್ನವನ್ನು **ಕನ್ನಡ ನಾಟಕ ರಂಗಭೂಮಿ ನಿರ್ದೇಶಕ ಅಡ್ಡಂಡ ಸಿ.ಕಾರಿಯಪ್ಪ** ಮಾಡಿದ್ದಾರೆ. ಅವರು ಮೈಸೂರಿನ ರಂಗಾಯಣದ ನಿರ್ದೇಶಕರಾಗಿದ್ದವರು. ಹೆಗ್ಗೋಡು ಮೂಲದ ನೀನಾಸಂ (ಶ್ರೀ ನೀಲಕಂಠೇಶ್ವರ ನಾಟ್ಯಸೇವಾ ಸಂಘ) ರಂಗಭೂಮಿ ರೆಪರ್ಟರಿಯಲ್ಲಿ ಅಧ್ಯಯನ ಮಾಡಿದವರು. ಆ ಪ್ರಯತ್ನದ ಫಲವೇ ಕನ್ನಡ ನಾಟಕ **'ಸತ್ಯವನ್ನೇ ಹೇಳುತ್ತೇನೆ'** –ಸತ್ಯವನ್ನೇ ಹೇಳುತ್ತದೆ.

'ಸತ್ಯ ಯಾವಾಗಲೂ ಕಹಿ' ಎಂಬುದು ಸಾಮಾನ್ಯವಾಗಿ ಬಳಸುವ ಜನಜನಿತ ಪದ. ಇದು ರಾಜಕಾರಣಿಗಳಿಗಿಂತ ವೈದ್ಯರಿಗೆ ಹೆಚ್ಚು ಅರಿವಿದೆ. ಅದಕ್ಕಾಗಿಯೇ ಅವರು ರೋಗಿಗಳಿಗೆ 'ಸಕ್ಕರೆ ಹೊದಿಕೆ'ಯುಳ್ಳ ಮಾತ್ರೆಗಳ ನೀಡಿ ಚಿಕಿತ್ಸೆ ನೀಡುತ್ತಾರೆ! ಆದರೆ, ಈ ನಾಟಕವು **ಭಾರತದ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಉತ್ಖನನವಾಗಿದೆ.** ಇದುವರೆಗೆ ಹುದುಗಿ ಹೋಗಿರುವ ಸತ್ಯವನ್ನು ಬಹಿರಂಗಪಡಿಸುತ್ತದೆ ಮತ್ತು ಅಧಿಕಾರದಲ್ಲಿರುವಂತಹ ಕಾಂಗ್ರೆಸ್ ರಾಜಕಾರಣಿಗಳು ಹೇಳದೇ ಇರುವಂತಹ ವಿಚಾರವನ್ನೂ ಒಳಗೊಂಡಿದೆ ಎಂದು ಅಡ್ಡಂಡ ಕಾರಿಯಪ್ಪ ವಿವರಿಸುತ್ತಾರೆ.

ಮಹಾತ್ಮ ಗಾಂಧೀಜಿಯವರು ಸತ್ಯದ ಪ್ರಯೋಗ ಮಾಡಿ ತಮ್ಮ ಆತ್ಮಕಥೆಯನ್ನು 'ಮೈ ಎಕ್ಸ್‌ಪಿರಿಮೆಂಟ್ಸ್ ವಿತ್ ಟ್ರೂತ್' ಎಂದು ಕರೆದರೆ, ಅಡ್ಡಂಡ ಕಾರಿಯಪ್ಪ ಅವರು ನಮ್ಮ ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡ ಕಾಂಗ್ರೆಸ್ ನಾಯಕರಲ್ಲಿ ಹುದುಗಿ ಹೋಗಿರುವ ಸತ್ಯವನ್ನು ಅಗೆದು–ಬಗೆದು ಅವರ ನಾಟಕ 'ಸತ್ಯವನ್ನೇ ಹೇಳುತ್ತೇನೆ' – ಮೂಲಕ ವಾಸ್ತವತೆಯನ್ನು ಸಾರಿದ್ದಾರೆ ಎಂದು ಕಂಡುಬರುತ್ತದೆ.

ಅ.28ರಿಂದ 31ರವರೆಗೆ ನಾಲ್ಕು ದಿನಗಳ ಕಾಲ ಮೈಸೂರು ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಪ್ರದರ್ಶಿತವಾದ ಈ ನಾಟಕವನ್ನು ನಾನು ನೋಡಿದ್ದೇನೆ. ಇದು ಮೂರು ಗಂಟೆಗಳ ಅವಧಿಯ ನಾಟಕವಾಗಿದೆ. ಆದರೆ ಸಮಯ ಹೋಗಿದ್ದೇ ತಿಳಿಯದ ಹಾಗೆ ನೋಡುಗರನ್ನು ಕೂತಲ್ಲೇ ಹಿಡಿದಿಡುತ್ತದೆ. ಇದೊಂದು ಉತ್ತಮ ಪರಿಕಲ್ಪನೆಯ ವಸ್ತು ವಿಷಯ ಹಾಗೂ ಒಳ್ಳೆಯ ನಿರ್ದೇಶನವಿದೆ. ಇದರಲ್ಲಿ ಬರುವಂತಹ ಎಲ್ಲಾ ಕಲಾವಿದರು ತಮ್ಮ ತಮ್ಮ ಪಾತ್ರವನ್ನು ಒಪ್ಪುವಂತೆ ಅಚ್ಚುಕಟ್ಟಾಗಿ, ಅನಾಯಾಸವಾಗಿ, ಅಮೋಘವಾಗಿ ಅಭಿನಯಿಸಿದ್ದಾರೆ.

ಹುಣಸೂರು ಹುಡುಗ, 32 ವರ್ಷ ವಯಸ್ಸಿನ ಎಸ್.ಶಿವಮೂರ್ತಿ, ಮಹಾತ್ಮ ಗಾಂಧೀಜಿ ಪಾತ್ರಧಾರಿ. ಆತನ ಅಭಿನಯ ಕಂಡು ನಾನು ಮೂಕವಿಸ್ಮಿತನಾದೆ. ಬಹುಶಃ ಸನ್ನಿವೇಶಕ್ಕೆ ಅಗತ್ಯವಿರುವಂತೆ ಈ ಯುವ ನಟ 79ನೇ ವರ್ಷದ ಮಹಾತ್ಮ ಗಾಂಧಿ ಪಾತ್ರವನ್ನು ತನ್ನ ಪೂರ್ಣ ಸಾಮರ್ಥ್ಯ ಬಳಸಿಕೊಂಡು ಅಭಿನಯಿಸಿದ್ದಾನೆ.

ನಾಟಕ ನಿರೂಪಣೆಯಲ್ಲಿ ನಾಟಕಕಾರನ ಪ್ರತಿಭೆ ಎದ್ದು ಕಾಣುತ್ತದೆ. ಗಾಂಧೀಜಿ, ನೆಹರು, ಪಟೇಲ್, ಸಾವರ್ಕರ್, ಅಂಬೇಡ್ಕರ್ ಮತ್ತು ಬೋಸ್ –ಎಲ್ಲಾ ಮಹಾತ್ಮರು ಈಗ ಇಲ್ಲ. ಅವರು ಬದುಕಿದ್ದಾಗ ಬಹುಶಃ ಸುಳ್ಳು ಹೇಳಿದ್ದರ ಬಗ್ಗೆ **'ಆತ್ಮಸಾಕ್ಷಿಯ ನ್ಯಾಯಾಲಯ'**ದಲ್ಲಿ ಸತ್ಯವನ್ನು ಹೇಳಲು ಸ್ವರ್ಗವಾಸದಿಂದ ಅವರನ್ನು ಭೂಮಿಗೆ ಕರೆಯಲಾಗುತ್ತದೆ. ಆ ಒಂದು ಸನ್ನಿವೇಶದ ನಿರೂಪಣೆ ಪ್ರೇಕ್ಷಕರಲ್ಲಿ ತೀವ್ರ ಆಸಕ್ತಿ ಮೂಡಿಸುತ್ತದೆ. **ಈ ಕತೆಯು ಆತ್ಮಾವಲೋಕನದಷ್ಟೇ ತಪ್ಪೊಪ್ಪಿಗೆ, ಪಶ್ಚಾತ್ತಾಪ ಸಂದೇಶ ಸಾರುತ್ತದೆ.** ಭಾರತದ ಜನತೆಗೆ ಕಾಂಗ್ರೆಸ್ ನಾಯಕರಾದ ಗಾಂಧೀಜಿ, ನೆಹರು ಮತ್ತು ಪಟೇಲ್ ಅವರು ಮಾಡಿದ ಐತಿಹಾಸಿಕ ತಪ್ಪುಗಳನ್ನು ಸರಿಪಡಿಸುವ ಪ್ರಯತ್ನವೂ ಆಗಿದೆ. ಮತ್ತು ಉಳಿದ ಮೂವರು – ಸಾವರ್ಕರ್, ಅಂಬೇಡ್ಕರ್ ಮತ್ತು ಬೋಸ್ – ಹಿಂದಿನ ಮೂವರು ಹೇಳಿದ ಅಸತ್ಯವನ್ನು ಬಹಿರಂಗಪಡಿಸಲಿದ್ದಾರೆ.

ಅಧಿಕಾರ ಪಡೆಯಲು ಮತ್ತು ಅದನ್ನು ಉಳಿಸಿಕೊಳ್ಳಲು ಸುಳ್ಳುಗಳನ್ನು ಹೇಳುವ ಮತ್ತು ಜನರನ್ನು ದಾರಿ ತಪ್ಪಿಸುವ ಸಂಸ್ಕೃತಿ ನಮ್ಮ ರಾಜಕಾರಣಿಗಳಲ್ಲಿ ಇಂದಿಗೂ ಮುಂದುವರೆದಿದೆ. ಉದಾಹರಣೆಗೆ, ಮುಂಬೈನಲ್ಲಿ 1993ರ ಸರಣಿ ಬಾಂಬ್ ಸ್ಫೋಟದ ಸಂದರ್ಭದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಶರದ್ ಪವಾರ್, ಇತ್ತೀಚಿನ ವರದಿ ಪ್ರಕಾರ ಊಹೆಗೂ ನಿಲುಕದ ಪ್ರಮಾದ ಮಾಡಿದರು. ಈ 12 ಸ್ಫೋಟಗಳಲ್ಲಿ 300ಕ್ಕೂ ಹೆಚ್ಚು ಜನ ಬಲಿಯಾದರು. ಆದರೆ ಪವಾರ್ ಅವರು ಮಸೀದಿ ಬಂದರ್‌ನಲ್ಲಿ ಮತ್ತೊಂದು, 13ನೇ ಸ್ಫೋಟವಾಗಿದೆ ಎಂದು ಘೋಷಿಸಿದರು. ಮಾತ್ರವಲ್ಲ ಈ ಸ್ಫೋಟದಲ್ಲಿ ಮುಸ್ಲಿಮರೂ ಬಲಿಯಾಗಿದ್ದಾರೆ. ಕೇವಲ ಹಿಂದೂಗಳು ಮಾತ್ರವೇ ಅಲ್ಲ ಎಂದು ಸುಳ್ಳು ಹೇಳಿದ್ದರು. 'ಹಿಂದೂ –ಮುಸ್ಲಿಂ ಸೌಹಾರ್ದತೆಯನ್ನು ಉತ್ತೇಜಿಸಲು ಈ ಸುಳ್ಳು ಹೇಳಿರಬೇಕು!! ಇರಲಿ.

ಇಂತಹ ರಾಜಕೀಯ ಪರಿಸರದಲ್ಲಿ, ಈ ನಾಟಕವನ್ನು ದೇಶದ ಇಂದಿನ ಹಾಗೂ ಭವಿಷ್ಯದ ಪೀಳಿಗೆ ನೋಡಲೇಬೇಕು.

ಕನ್ನಡದ ಸುಪ್ರಸಿದ್ಧ ಕಾದಂಬರಿಕಾರ ಹಾಗೂ ಚಿಂತಕ ಡಾ.ಎಸ್.ಎಲ್.ಭೈರಪ್ಪ ಅವರು ನಾಟಕವನ್ನು ವೀಕ್ಷಿಸಿದ ನಂತರ ವೇದಿಕೆ ಮೇಲೆ ಹೋಗಿ, ನಾಟಕವನ್ನು ಶ್ಲಾಘಿಸಿ ಮಾತನಾಡಿ, ಇದನ್ನು ನಮ್ಮ ದೇಶದ ಇತರ ಭಾಷೆಗಳಿಗೆ ಅನುವಾದಿಸಿ, ಹೆಚ್ಚಿನ ಪ್ರೇಕ್ಷಕರಿಗೆ ತಲುಪುವಂತೆ ಪ್ರದರ್ಶಿಸುವಂತೆಯೂ ಸಲಹೆ ನೀಡಿದರು.

ಅದೇನೇ ಇರಲಿ, ಸಿನಿಮಾ, ಟಿವಿ, ಲ್ಯಾಪ್‌ಟಾಪ್ ಇತ್ಯಾದಿಗಳ ಪೈಪೋಟಿಯ ಇಂದಿನ ದಿನಗಳಲ್ಲಿ ನಾಟಕವನ್ನು ಪ್ರದರ್ಶಿಸುವುದು ಆರ್ಥಿಕವಾಗಿ ಲಾಭದಾಯಕವಲ್ಲ, ಕೆಲವೇ ಕೆಲವು ಅಪವಾದಗಳ ಹೊರತಾಗಿ. ಹಾಗಾಗಿ **'ಸತ್ಯವನ್ನೇ ಹೇಳುತ್ತೇನೆ'** ಎಂಬಂತಹ ನಾಟಕಗಳ ಪ್ರದರ್ಶನಕ್ಕೆ ಪೋಷಕರ ಮತ್ತು ರಂಗಪ್ರೇಮಿಗಳ ಬೆಂಬಲದ ಅಗತ್ಯವಿದೆ. ವಿಶೇಷವಾಗಿ 'ಇಂಡಿಯಾ ಫಸ್ಟ್' (ಭಾರತವೇ ಮೊದಲು) ಎಂಬ ಭಾವನೆಯಿಂದ ಪ್ರತಿಜ್ಞೆ ಮಾಡುವವರಿಂದ.

ಮತ್ತೊಂದು ಪ್ರಮುಖ ವಿಚಾರ; ನೆರವು ನೀಡಲು ಅಭಿಲಾಷೆ ಉಳ್ಳ ಕಲಾಪ್ರೇಮಿಗಳು, **ರಂಗಭೂಮಿ ಟ್ರಸ್ಟ್, ಕೊಡಗು, SBI A/c ಸಂಖ್ಯೆ 64178640827. IFSC: SBIN0040320 ಅಥವಾ ಮೊಬೈಲ್: 94484–22343**ಗೆ ಸಂದಾಯ ಮಾಡಬಹುದು.

ವಿಶೇಷ ಸೂಚನೆ : ಕಳೆದ ತಿಂಗಳು ನಾಲ್ಕು ದಿನಗಳ ಪ್ರದರ್ಶನದಲ್ಲಿ ಉತ್ತಮ ಪ್ರತಿಕ್ರಿಯೆ ಪಡೆದ ಈ ನಾಟಕವು ಮತ್ತೆ ಮೂರು ದಿನಗಳ ಕಾಲ **ನ.11ರಿಂದ 13ರವರೆಗೆ ಸಂಜೆ 6.30ಕ್ಕೆ ಕಿರುರಂಗ ಮಂದಿರದಲ್ಲಿ ಪ್ರದರ್ಶನಗೊಳ್ಳುತ್ತಿದೆ. ಟಿಕೆಟ್ ದರ ರೂ. 200.**

(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

email:
voice@starofmysore.com

'ಸತ್ಯವನ್ನೇ ಹೇಳುತ್ತೇನೆ' ಹೌಸ್‌ಫುಲ್ ಪ್ರದರ್ಶನ



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗ ಮಂದಿರದಲ್ಲಿ ಸೋಮವಾರ ಪ್ರದರ್ಶನ ಕಂಡ 'ಸತ್ಯವನ್ನೇ ಹೇಳುತ್ತೇನೆ' ನಾಟಕದ ದೃಶ್ಯ.

ಮೈಸೂರು,ನ.11(ಪಿಎಂ)– ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ 'ಸತ್ಯವನ್ನೇ ಹೇಳುತ್ತೇನೆ' ಕನ್ನಡ ನಾಟಕದ 3 ದಿನಗಳ ಮರು ಪ್ರದರ್ಶನಕ್ಕೆ ಕಲಾ ಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸೋಮವಾರ ಚಾಲನೆ ದೊರೆಯಿತು.

ಅಲ್ಲದೆ, ಈ ಹಿಂದಿನಂತೆ ಸೋಮವಾರವೂ ಇಡೀ ಸಭಾಂಗಣ ಪ್ರೇಕ್ಷಕರಿಂದ ಭರ್ತಿಯಾಗಿ ಹೌಸ್‌ಫುಲ್ ಪ್ರದರ್ಶನ ಕಂಡಿತು. ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು ರಚಿಸಿ, ನಿರ್ದೇಶಿಸಿರುವ ಈ ನಾಟಕ ಪ್ರೇಕ್ಷಕರ ಮನಗೆದ್ದಿರುವುದಕ್ಕೆ ಈವರೆಗೆ ಸದರಿ ಕಿರುರಂಗ ಮಂದಿರದಲ್ಲೇ ನಡೆದ ಐದು ಪ್ರದರ್ಶನಗಳೂ ಹೌಸ್‌ಫುಲ್ ಆಗಿರುವುದು ಸಾಕ್ಷಿಯಾಗಿದೆ.

ಕಿರುರಂಗಮಂದಿರ 230 ಆಸನ ಸಾಮರ್ಥ್ಯ ಹೊಂದಿದ್ದು, ಪ್ಲಾಸ್ಟಿಕ್ ಕುರ್ಚಿಗಳ ವ್ಯವಸ್ಥೆಯ ಮೂಲಕ ಹೆಚ್ಚುವರಿ ಆಸನಗಳನ್ನು ಸಹ ಕಲ್ಪಿಸಲಾಗಿದೆ. ಸೋಮವಾರ ಎಲ್ಲಾ ಆಸನಗಳು ಪ್ರೇಕ್ಷಕರಿಂದ ಭರ್ತಿಗೊಂಡಿದ್ದವು. ನ.12 ಮತ್ತು 13ರಂದು ಸಹ ಇದೇ ಕಿರು ರಂಗಮಂದಿರದಲ್ಲಿ ಸಂಜೆ 6.30ಕ್ಕೆ ಈ ನಾಟಕ ಪ್ರದರ್ಶನಗೊಳ್ಳಲಿದೆ. ಟಿಕೆಟ್ ದರ 200 ರೂ. ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ಸಂ.94484–22343 ಅನ್ನು ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ ಮಂಗಳವಾರ 12 ನವೆಂಬರ್ 2024

ಭಾರತದ 51ನೇ ಮುಖ್ಯ ನ್ಯಾಯಮೂರ್ತಿಯಾಗಿ ನ್ಯಾ.ಸಂಜೀವ್ ಖನ್ನಾ ಪ್ರಮಾಣ ವಚನ ಸ್ವೀಕಾರ



ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾರತದ 51ನೇ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರಿಗೆ ಪ್ರಮಾಣ ವಚನ ಬೋಧಿಸಿದರು.

ನವದೆಹಲಿ: ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಭಾರತದ 51ನೇ ಮುಖ್ಯ ನ್ಯಾಯಮೂರ್ತಿಯಾಗಿ ರಾಷ್ಟ್ರಪತಿ ಭವನದಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನ್ಯಾ.ಖನ್ನಾ ಅವರಿಗೆ ಪ್ರಮಾಣ ವಚನ ಬೋಧಿಸಿದರು.

ನ್ಯಾ.ಖನ್ನಾ ಅವರ ಹೆಸರನ್ನು ನ್ಯಾ.ಡಿವೈ ಚಂದ್ರಚೂಡ್ ಅವರು ಶಿಫಾರಸು ಮಾಡಿದ್ದರು. ಇವರು ಮುಂದಿನ ವರ್ಷ ಮೇ 13ರವರೆಗೆ ಭಾರತದ ಮುಖ್ಯ ನ್ಯಾಯಮೂರ್ತಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ನ್ಯಾ.ಚಂದ್ರಚೂಡ್ ಅವರು ನ.10ರಂದು ಹುದ್ದೆಯಿಂದ ನಿವೃತ್ತರಾದರು.

ಪ್ರಮಾಣವಚನ ಸ್ವೀಕಾರದ ವೇಳೆ ಪ್ರಧಾನಿ ನರೇಂದ್ರ ಮೋದಿ, ಉಪರಾಷ್ಟ್ರಪತಿ ಜಗದೀಪ್ ಧನಕರ್, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ನಿವೃತ್ತ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಉಪಸ್ಥಿತರಿದ್ದರು. ಮೇ 14, 1960ರಲ್ಲಿ ಜನಿಸಿದ್ದ ನ್ಯಾ.ಸಂಜೀವ್ ಖನ್ನಾ ಅವರು, ದೆಹಲಿ ವಿಶ್ವವಿದ್ಯಾಲಯದಲ್ಲಿ ಕಾನೂನು ಅಧ್ಯಯನ ಮಾಡಿದ್ದರು. ಕೆಲವು ಕಾಲ ವಕೀಲರಾಗಿ, ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿಗಳಾಗಿ ಸೇವೆ ಸಲ್ಲಿಸಿದ್ದರು. ಅಲ್ಲದೆ, ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಜನವರಿ 2019ರಲ್ಲಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡರು. ಈ ಅವಧಿಯಲ್ಲಿ, ದೆಹಲಿ ಮಾಜಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಜಾಮೀನು ಅರ್ಜಿಗಳ ವಿಚಾರಣೆ ಸೇರಿದಂತೆ ಹಲವಾರು ರಾಜಕೀಯವಾಗಿ ಸೂಕ್ಷ್ಮ ಪ್ರಕರಣಗಳ ಪೀಠಗಳ ನೇತೃತ್ವ ವಹಿಸಿದ್ದರು. ಸಂವಿಧಾನ ಪೀಠದ ಭಾಗವಾಗಿ, ನ್ಯಾ.ಖನ್ನಾ ಅವರು ಆರ್ಟಿಕಲ್ 370ರ ರದ್ದು ಮತ್ತು ಚುನಾವಣಾ ಬಾಂಡ್, ಎಲೆಕ್ಟ್ರಾನಿಕ್ ಮತಯಂತ್ರಗಳು ಮತ್ತು ಮತದಾರರ ದೃಢೀಕೃತ ಪೇಪರ್ ಆಡಿಟ್ ಸಂಬಂಧಿಸಿದ ಪ್ರಕರಣಗಳ ವಿಚಾರಣೆ ನಡೆಸಿದ್ದಾರೆ.

ನಿಮ್ಮ ಜೊತೆ ಯೋಗ್ಯನಾಗಿ ಕೆಲಸ ಮಾಡಲು ಇದೊಂದು ಬಾರಿ ಅವಕಾಶ ಮಾಡಿಕೊಡಿ

ಪತ್ನಿ ರೇವತಿಯೊಡಗೂಡಿ ಮಂಡಿಯೂರಿ ಜನತೆಗೆ ನಮಸ್ಕರಿಸಿದ ನಿಖಿಲ್ ಕುಮಾರಸ್ವಾಮಿ

ಚನ್ನಪಟ್ಟಣ, ನ11– ಹಳ್ಳಿ-ಹಳ್ಳಿಗಳಲ್ಲಿ ನಿಖಿಲ್ ಗೆಲ್ಲಬೇಕು ಎಂದು ಜನ ಅಂದುಕೊಂಡಿದ್ದಾರೆ. ಇದು ನಿಖಿಲ್ ಭವಿಷ್ಯದ ಪ್ರಶ್ನೆ ಅಲ್ಲ, ಪ್ರಾದೇಶಿಕ ಪಕ್ಷದ ಅಸ್ತಿತ್ವದ ಪ್ರಶ್ನೆಯಾಗಿದೆ. ಈ ಭೂಮಿ ಮೇಲೆ ನಿಮ್ಮ ಜೊತೆ ಯೋಗ್ಯನಾಗಿ ಕೆಲಸ ಮಾಡಲು ಮೂರೂವರೆ ವರ್ಷ ಅವಕಾಶ ಮಾಡಿಕೊಡಿ ಎಂದು ನಿಖಿಲ್ ಕುಮಾರಸ್ವಾಮಿ ಜನತೆಯಲ್ಲಿ ಮನವಿ ಮಾಡಿದ್ದಲ್ಲದೇ, ಪತ್ನಿ ರೇವತಿ ಜೊತೆಗೂಡಿ ಮಂಡಿಯೂರಿ ನಮಸ್ಕರಿಸಿದ್ದಾರೆ.



ಚನ್ನಪಟ್ಟಣದಲ್ಲಿ ಪ್ರಚಾರದ ವೇಳೆ ನಿಖಿಲ್ ಕುಮಾರಸ್ವಾಮಿ, ಪತ್ನಿ ರೇವತಿ ಜೊತೆಗೂಡಿ ಮಂಡಿಯೂರಿ ನಮಸ್ಕರಿಸಿದರು.

ಚನ್ನಪಟ್ಟಣದಲ್ಲಿ ಪ್ರಚಾರದ ವೇಳೆ ಮಾತನಾಡಿದ ಅವರು, ನಾನು ಭಾವನಾತ್ಮಕ ಜೀವಿ, ಕ್ಷಮಿಸಿ ಇದರ ಹಿಂದೆ ಬೇರೆ ಉದ್ದೇಶ ಇಲ್ಲ. ಪ್ರತೀ ಹಳ್ಳಿಯಲ್ಲಿ ತಾಯಂದಿರು ಆಶೀರ್ವಾದ ಮಾಡಿದರು. ಪ್ರತೀ ದೇವಸ್ಥಾನಗಳ ದೇವರು ಆಶೀರ್ವಾದ ಮಾಡಿದ್ದಾರೆ. ನನಗೊಂದು ಅವಕಾಶ ಮಾಡಿಕೊಡುವ ಆತ್ಮಸ್ಥೈರ್ಯ ಇಲ್ಲಿನ ಜನ ಮೂಡಿಸಿದ್ದಾರೆ.

ದೇವೇಗೌಡರು ಮೊಮ್ಮಗನನ್ನು ಗೆಲ್ಲಿಸಲು ಆಂಬುಲೆನ್ಸ್‌ನಲ್ಲಿ ಬರುತ್ತಾರೆ ಎಂದು ವಿರೋಧ ಪಕ್ಷದ ನಾಯಕರೊಬ್ಬರು ಹೇಳಿದ್ದರು. ಚನ್ನಪಟ್ಟಣದಲ್ಲಿ ನಿಖಿಲ್ ನಿಂತಿದ್ದಾನೆ ಎಂದು ದೇವೇಗೌಡರು ಬಂದು ಪ್ರಚಾರ ಮಾಡುತ್ತಿದ್ದಾರೆ ಅನ್ನುವ ಪ್ರಶ್ನೆ ಅಲ್ಲ. ಯಾವುದೇ ಸಾಮಾನ್ಯ ಕಾರ್ಯಕರ್ತ ನಿಂತಿದ್ದರೂ ದೇವೇಗೌಡರು ಪ್ರಚಾರಕ್ಕೆ ಬರುತ್ತಿದ್ದರು. ಈ ಜಿಲ್ಲೆಗೂ ದೇವೇಗೌಡರಿಗೂ ಬಹಳ ಹಳೆಯ ನಂಟಿದೆ. ನಾನು ಒಬ್ಬ ಸಾಮಾನ್ಯ ಕಾರ್ಯಕರ್ತನಾಗಿದ್ದೇನೆ. ಈಗ ನಾನು ನಿಲ್ಲುವುದಿಲ್ಲ, ಪಕ್ಷ ಕಟ್ಟೋದಿಕ್ಕೆ ಸ್ವಲ್ಪ ಸಮಯ ಕೊಡಿ ಎಂದು ಹೇಳಿದ್ದೆ. ನಂತರ ಏನೇನಾಯ್ತು ಎಲ್ಲರಿಗೂ ಗೊತ್ತಿದೆ ಎಂದು ಹೇಳಿದರು.

ಈ ಚುನಾವಣೆ ನನ್ನ ಬದುಕಿನ ಬಹುದೊಡ್ಡ ಅಗ್ನಿಪರೀಕ್ಷೆಯಾಗಿದೆ. ನೀನು ಇಲ್ಲಿ ಯಾವ ಪಾತ್ರ ಮಾಡ್ತೀಯಪ್ಪ ಎಂದು ಹಲವರು ಕೇಳುತ್ತಾರೆ. ಕುರುಕ್ಷೇತ್ರ ಸಿನೆಮಾದಲ್ಲಿ ನಾನು ಅಭಿಮನ್ಯು ಆಗಿದ್ದೆ. ನಾನು ಅರ್ಜುನನಾ ಅಥವಾ ಅಭಿಮನ್ಯುನಾ ಎಂದು ಚನ್ನಪಟ್ಟಣ ಜನರೇ ನಿರ್ಧಾರ ಮಾಡುತ್ತಾರೆ. ನನಗೆ ಗೊತ್ತಿರುವುದು ಮನುಷ್ಯತ್ವ ಮಾತ್ರ ಎಂದರು. ಈ ಉಪಚುನಾವಣೆ ನನ್ನ ಪಾಲಿಗೆ ಅನಿರೀಕ್ಷಿತವಾಗಿದೆ. ಕಳೆದೆರಡು ಸೋಲುಗಳಿಂದ ನನ್ನ ಎದೆಗುಂದಲಿಲ್ಲ. ಮಂಡ್ಯದಲ್ಲಿ 5.45 ಲಕ್ಷ ಜನ ಆಶೀರ್ವಾದ ಮಾಡಿದರು. ಆದರೆ ವಿಪರ್ಯಾಸ ಗೆಲ್ಲಲು ಆಗಲಿಲ್ಲ. ಅದಕ್ಕೆ ಅನೇಕ ಕಾರಣ ಇದ್ದವು. ಈಗ ಅದನ್ನು ಮಾತನಾಡುವುದಿಲ್ಲ. ರಾಮನಗರದಲ್ಲೂ ಕೊನೆಯ ಕ್ಷಣದಲ್ಲಿ ನನ್ನ ಸ್ಪರ್ಧೆಯ ತೀರ್ಮಾನ ಆಯ್ತು. 76.5 ಸಾವಿರ ಜನ ನನಗೆ ಆಶೀರ್ವಾದ ಮಾಡಿದರು. ಅಲ್ಲಿನ ಸೋಲಿಗೆ ಕಾಂಗ್ರೆಸ್ ಗಿಫ್ಟ್ ಕೂಪನ್ ಕಾರ್ಡ್ ಕಾರಣವಾಗಿದೆ. ಯಾವ ಕೂಪನ್, ಯಾವ ಆಮಿಷಕ್ಕೂ ಚನ್ನಪಟ್ಟಣದ ಜನ ಬಲಿಯಾಗುವುದಿಲ್ಲ ಅನ್ನುವ ವಿಶ್ವಾಸ ನನಗಿದೆ ಎಂದು ತಿಳಿಸಿದರು.

ನ.14ರಂದು ವಿಶೇಷಚೇತನ ಗಾಯಕರಿಂದ 'ಕಣ್ತೆರೆದು ನೋಡು' ಗಾಯನ ಕಾರ್ಯಕ್ರಮ

ಮೈಸೂರು,ನ.11(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ನ.14ರಂದು ಸಂಜೆ 5.30ಕ್ಕೆ ದೃಷ್ಟಿಹೀನ ಗಾಯಕರಿಂದ 'ಕಣ್ತೆರೆದು ನೋಡು' ಹಳೆಯ ಚಿತ್ರಗೀತೆ ಹಾಗೂ ಭಾವಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ಸಂಸ್ಥಾಪಕ ಮೈಸೂರು ಜಯರಾಂ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಹಲವೆಡೆ ದೃಷ್ಟಿಹೀನ ಗಾಯಕರು ರಸ್ತೆ ಬದಿಗಳಲ್ಲಿ ಗೀತೆಗಳನ್ನು ಹಾಡುತ್ತಾ ನೆರವಿಗಾಗಿ ಪರಿತಪಿಸುತ್ತಿರುತ್ತಾರೆ. ಈ ಹಿನ್ನೆಲೆಯಲ್ಲಿ ಹಲವು ದೃಷ್ಟಿಹೀನ ಗಾಯಕರನ್ನು ಒಂದೆಡೆ ಸೇರಿಸಿ, ಅವರಿಗೆ ವೇದಿಕೆ ಕಲ್ಪಿಸಿಕೊಟ್ಟು ಗಾಯನ ಕಾರ್ಯಕ್ರಮ ನಡೆಸಲಾಗುತ್ತಿದೆ. ಅದಕ್ಕಾಗಿ 'ಕಣ್ತೆರೆದು ನೋಡು' ಎಂದು ಶೀರ್ಷಿಕೆ ಇಡಲಾಗಿದೆ. ಗಾಯನ ಕಾರ್ಯಕ್ರಮದಲ್ಲಿ ಅಂಧ ಗಾಯಕರಾದ ಗೌತಮ್, ವೀರೇಶ್, ದಾಲ್‌ದೂರಪ್ಪ, ರಮೇಶ್, ಲಿಂಗರಾಜು ಸೇರಿದಂತೆ ಇನ್ನಿತರರು ಹಾಡಲಿದ್ದಾರೆ. ಇವರೊಂದಿಗೆ ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್ ಗಾಯಕರು ಧ್ವನಿಗೂಡಿಸಲಿದ್ದಾರೆ. ಕಾರ್ಯಕ್ರಮವನ್ನು ಅಂದು ಸಂಜೆ 6.30ಕ್ಕೆ ಕವಿ ಜಯಪ್ಪ ಹೊನ್ನಾಳಿ, ನಗರಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಕಲಾ ಪೋಷಕ ಶ್ರೀನಿವಾಸ್ ಮೂರ್ತಿ, ವೈದ್ಯ ಡಾ.ಅಪ್ಪಾಜಿ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಇದೇ ವೇಳೆ ಅಂಧ ಗಾಯಕ ಗೌತಮ್ ಮಾತನಾಡಿ, ಜೀವನ ನಿರ್ವಹಣೆಗಾಗಿ ದೃಷ್ಟಿಹೀನ ಕಲಾವಿದರು ಸೇರಿಕೊಂಡು ವಿವಿಧೆಡೆ ಗಾಯನ ಮಾಡಿ ಸಾರ್ವಜನಿಕರಿಗೆ ಸಹಾಯ ಕೇಳುತ್ತಾ ಬಂದಿದ್ದೇವೆ. ಇದೀಗ ನ.14ರಂದು ಸಂಜೆ 5.30ರಿಂದ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕಣ್ತೆರೆದು ನೋಡು ಸಂಗೀತ ಸಂಜೆ ಕಾರ್ಯಕ್ರಮ ನಡೆಸಿಕೊಡುತ್ತಿದ್ದು, ದಾನಿಗಳು ನೆರವು ನೀಡುವಂತೆ ಕೋರಿದರು.

ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಸುರೇಶ್, ಶ್ರೀಧರ್, ದೀಪ ಇದ್ದರು.

ಡಿ.9ರಿಂದ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಭಜನಾ ಕಾರ್ಯಾಗಾರ

ಮೈಸೂರು, ನ.11–ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಡಿ.9ರಿಂದ 14ರವರೆಗೆ ಶ್ರೀ ಸುತ್ತೂರು ಕ್ಷೇತ್ರದಲ್ಲಿ ಭಜನಾ ಕಾರ್ಯಾಗಾರವನ್ನು ಆಯೋಜಿಸಲಾಗಿದೆ. ಇದರಲ್ಲಿ ಪುರುಷ ಮತ್ತು ಮಹಿಳಾ ತಂಡಗಳು ಭಾಗವಹಿಸಬಹುದಾಗಿದೆ.

ಭಜನೆಗಳನ್ನು ಹಾಡುವಾಗ ಗಮನಿಸಬೇಕಾದ ಶ್ರುತಿ, ರಾಗ, ತಾಳ, ಸಾಹಿತ್ಯ ಹಾಗೂ ಭಜನೆ ಮಾಡುತ್ತಾ ನೃತ್ಯ ಮಾಡುವ ಬಗ್ಗೆ ತಜ್ಞರು ಕಾರ್ಯಾಗಾರದಲ್ಲಿ ಮಾರ್ಗದರ್ಶನ ನೀಡಲಿದ್ದಾರೆ. ಪ್ರತಿ ಭಜನಾ ತಂಡದಿಂದ ಹಾರ್ಮೋನಿಯಂ, ತಬಲ, ಖಂಜರ, ದಮ್ಮಡಿ ಕಲಾವಿದರು ಹಾಗೂ ಹಾಡುವವರು ಸೇರಿದಂತೆ ಒಟ್ಟು ಐವರು ಮಾತ್ರ ಭಾಗವಹಿಸಬಹುದಾಗಿದೆ. ಕಾರ್ಯಾಗಾರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಬಿ.ರಾಜೇಶ್, ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದಲ್ಲಿ ನೇರವಾಗಿ ಅಥವಾ ದೂರವಾಣಿಯಲ್ಲಿ 0821-2548212 Extn.223/224 ಸಂಪರ್ಕಿಸಬಹುದು ಹಾಗೂ www.jssonline.org ಯಿಂದ ವಿವರ ಪಡೆಯಬಹುದು. jsspublications@gmail.com ಇ-ಮೇಲ್ ಮೂಲಕವೂ ನೋಂದಾಯಿಸಿಕೊಳ್ಳಬಹುದಾಗಿದೆ. ಮೊದಲು ನೋಂದಾಯಿಸಿದವರಿಗೆ ಆದ್ಯತೆ ನೀಡಲಾಗುವುದು. ತಡವಾಗಿ ನೋಂದಾಯಿಸಿಕೊಳ್ಳುವವರಿಗೆ ಮುಂದಿನ ಕಾರ್ಯಾಗಾರಗಳಲ್ಲಿ ಅವಕಾಶ ನೀಡಲಾಗುವುದು.

ವಿಶೇಷಚೇತನರಿಗೆ ಅನುಕಂಪದ ಬದಲಿಗೆ ಅವಕಾಶ ಕಲ್ಪಿಸಿ

ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರ ಸಲಹೆ



ಹೂಟಗಳ್ಳಿ ನಗರಸಭೆ ವತಿಯಿಂದ ಸೋಮವಾರ ವಿಶೇಷಚೇತನರಿಗೆ ವ್ಹೀಲ್‌ಚೇರ್, ತ್ರಿಚಕ್ರ ವಾಹನ, ಹಿಯರಿಂಗ್ ಹೆಡ್, ಮಹಿಳೆಯರಿಗೆ ಹೊಲಿಗೆ ಯಂತ್ರ, ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣಾ ಸಮಾರಂಭದಲ್ಲಿ ಅರ್ಹ ಫಲಾನುಭವಿಗಳಿಗೆ ಸವಲತ್ತುಗಳನ್ನು ಶಾಸಕ ಜಿ.ಟಿ.ದೇವೇಗೌಡ ವಿತರಿಸಿದರು. ಈ ವೇಳೆ ಹೂಟಗಳ್ಳಿ ನಗರಸಭೆ ಪೌರಾಯುಕ್ತ ಚಂದ್ರಶೇಖರ್, ಎಇಇ ಮಧು, ಮುಖಂಡರಾದ ಸುರೇಶ್, ರಾಮು ಮತ್ತಿತರರು ಹಾಜರಿದ್ದರು.

ಮೈಸೂರು: ವಿಶೇಷಚೇತನರಿಗೆ ಅನುಕಂಪ, ಮಾನವೀಯತೆ ತೋರಿ ಸುಮ್ಮನಾಗುವ ಬದಲಿಗೆ ಅವಕಾಶ ಕೊಡಬೇಕು. ಶ್ರಮಪಟ್ಟು ಶಿಕ್ಷಣ ಪಡೆದರೆ ಹಲವಾರು ಉದ್ಯೋಗಗಳನ್ನು ಪಡೆಯಲು ಸಾಧ್ಯವಿರುವ ಕಾರಣ ಸರ್ಕಾರದ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಸಲಹೆ ನೀಡಿದರು.

ಹೂಟಗಳ್ಳಿ ನಗರಸಭೆ ವತಿಯಿಂದ ಸೋಮವಾರ ವಿಶೇಷಚೇತನರಿಗೆ ವ್ಹೀಲ್ ಚೇರ್, ತ್ರಿಚಕ್ರವಾಹನ, ಹಿಯರಿಂಗ್ ಹೆಡ್, ಮಹಿಳೆಯರಿಗೆ ಹೊಲಿಗೆ ಯಂತ್ರ, ವಿದ್ಯಾರ್ಥಿಗಳಿಗೆ ಲ್ಯಾಪ್‌ವಿತರಣಾ ಸಮಾರಂಭದಲ್ಲಿ ಅರ್ಹ ಫಲಾನುಭವಿಗಳಿಗೆ ಸವಲತ್ತುಗಳನ್ನು ವಿತರಿಸಿ ಮಾತನಾಡಿದರು.

ಹೂಟಗಳ್ಳಿ ನಗರಸಭೆ ವತಿಯಿಂದ ನೇರವಾಗಿ ಅರ್ಜಿಗಳನ್ನು ಕರೆದು ಪಾರದರ್ಶಕವಾಗಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಫಲಾನುಭವಿಗಳಿಗನುಗುಣವಾಗಿ ಅಗತ್ಯವಿರುವ ಸಲಕರಣೆ ಖರೀದಿಸಿರುವುದು ಸಂತೋಷಕರ ಸಂಗತಿ ಎಂದರು. ವಿಶೇಷಚೇತನರು ಶಿಕ್ಷಣ ಪಡೆದು ಸರ್ಕಾರಿ ಉದ್ಯೋಗಗಳನ್ನು ಪಡೆದಿದ್ದಾರೆ. ಅಂಗವೈಕಲ್ಯತೆಯನ್ನು ಮೆಟ್ಟಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿಗಳನ್ನು ಪಡೆದಿರುವುದನ್ನು ಕಾಣಬಹುದು. ವಿಶೇಷಚೇತನರಿಗೆ ನಾವು ಅನುಕಂಪ,ಮಾನವೀಯತೆ ತೋರಿ ಸುಮ್ಮನಾಗುವ ಬದಲಿಗೆ ಪ್ರೋತ್ಸಾಹ ನೀಡಬೇಕು. ಸಾಮಾನ್ಯರಂತೆ ಅವಕಾಶಗಳನ್ನು ನೀಡಿದರೆ ಮುಂದೆ ಬರುತ್ತಾರೆ. ಸಮಾಜದಲ್ಲಿ ಎಲ್ಲರಂತೆ ಬದುಕಲು ದಾರಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಸರ್ಕಾರ ಹಲವಾರು ಸವಲತ್ತುಗಳನ್ನು ನೀಡಿದರೂ ಸರಿಯಾಗಿ ಫಲಾನುಭವಿಗಳಿಗೆ ದೊರಕುತ್ತಿರಲಿಲ್ಲ. ಆದರೆ, ಈಗ ಅರಿವು ಮೂಡಿರುವುದರಿಂದ ಸ್ವಯಂ ಪ್ರೇರಣೆಯಿಂದ ತ್ರಿಚಕ್ರವಾಹನ, ವಿದ್ಯುತ್ ಚಾಲಿತ ವ್ಹೀಲ್‌ಚೇರ್‌ಗಳನ್ನು ಪಡೆಯುತ್ತಿದ್ದಾರೆ ಎಂದರು.

ಇಂಜಿನಿಯರಿಂಗ್, ವೈದ್ಯಕೀಯ ಪ್ರವೇಶ ಪಡೆದಿರುವ ಬಡ ಮಕ್ಕಳಿಗೆ ಶೇ.50ರಷ್ಟು ಶುಲ್ಕವನ್ನು ಪಾವತಿಸಲು ನಿರ್ಧರಿಸಿ ನೀಡುತ್ತಿರುವ ಜತೆಗೆ, ಅತೀ ಹೆಚ್ಚು ಅಂಕ ಗಳಿಸಿದ 150 ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನವನ್ನು ವಿತರಿಸಲಾಗುತ್ತಿದೆ. ಬಡ ಮಕ್ಕಳು ಉನ್ನತ ವ್ಯಾಸಂಗ ಪಡೆದು ಸರ್ಕಾರಿ, ಖಾಸಗಿ ಕಂಪೆನಿಗಳಲ್ಲಿ ಸೇವೆಗೆ ಸೇರಿದ ಮೇಲೆ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು. ಬಡ ಮಕ್ಕಳ ನೆರವಿಗೆ ಕೈಲಾದಷ್ಟು ನೆರವು ನೀಡಿದರೆ ಸಮಾಜದಲ್ಲಿ ಸಮಾನತೆ ಬರಲು ಸಾಧ್ಯವಾಗಲಿದೆ ಎಂದು ಹೇಳಿದರು.

ಮಹಿಳೆಯರಿಗೆ ಹೊಲಿಗೆ ತರಬೇತಿ ನೀಡಿ ಯಂತ್ರಗಳನ್ನು ನೀಡಲಾಗುತ್ತಿದೆ. ಆಯ್ಕೆಯಾಗಿರುವ ಫಲಾನುಭವಿಗಳ ಮಹಿಳೆಯರ ಮನೆಗೆ ನೇರವಾಗಿ ಯಂತ್ರಗಳನ್ನು ಅಳವಡಿಸಿಕೊಡಲಾಗುತ್ತದೆ. ಮಹಿಳೆಯರು ಸ್ವಯಂ ಉದ್ಯೋಗ ಪಡೆದುಕೊಂಡು ಕುಟುಂಬ ನಿರ್ವಹಣೆ ಮತ್ತು ಆರ್ಥಿಕವಾಗಿ ಸಬಲರಾಗಬೇಕು. ಇಂದು ಟೈಲರಿಂಗ್‌ಗೆ ಭಾರಿ ಬೇಡಿಕೆ ಇದೆ. ಗಾರ್ಮೆಂಟ್ಸ್‌ಗಳು ಹೆಚ್ಚಾಗಿರುವುದರಿಂದ ಮನೆಯಲ್ಲಿ ತಯಾರಿಸಿ ಕೊಡಬಹುದಾಗಿದೆ ಎಂದು ನುಡಿದರು.

ವಸತಿ ಯೋಜನೆಯಡಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಮೂರು ಲಕ್ಷ ರೂ. ಪ್ರೋತ್ಸಾಹಧನದ ಚೆಕ್ ನೀಡಲಾಗಿದೆ. ಸ್ವಂತ ಮನೆ ಕಟ್ಟಿಕೊಳ್ಳಬೇಕು. ಇಂದು ಬಡವರು ಮನೆ ಕಟ್ಟಿಕೊಳ್ಳುವುದು ದುಸ್ತರವಾಗಿರುವ ಕಾರಣ ಸರ್ಕಾರ ಸ್ಥಳೀಯ ಸಂಸ್ಥೆಗಳಲ್ಲಿ ಆಯ್ಕೆಯಾಗುವ ಫಲಾನುಭವಿಗಳ ಪ್ರೋತ್ಸಾಹಧನವನ್ನು ಹೆಚ್ಚಳ ಮಾಡಲಾಗಿದೆ ಎಂದರು.

ಹೂಟಗಳ್ಳಿ ನಗರಸಭೆ ಪೌರಾಯುಕ್ತ ಚಂದ್ರಶೇಖರ್, ಎಇಇ ಮಧು, ಮುಖಂಡರಾದ ಸುರೇಶ್, ರಾಮು ಮತ್ತಿತರರು ಹಾಜರಿದ್ದರು.

ಅಮೃತ ವಿಶ್ವವಿದ್ಯಾಪೀಠಂನಲ್ಲಿ ನಾಳೆ ಸೈನ್ಸ್ ಸ್ಪ್ರಿಂಟ್ 2024

ಮೈಸೂರು, ನ.11– ಅಮೃತ ವಿಶ್ವವಿದ್ಯಾಪೀಠಂ, ಮೈಸೂರು ಕ್ಯಾಂಪಸ್‌ನ ವತಿಯಿಂದ ನ.13ರಂದು ಪದವಿ ಪೂರ್ವ ಕಾಲೇಜುಗಳ(ರಾಜ್ಯ ಪಠ್ಯಕ್ರಮ, ಸಿಬಿಎಸ್‌ಸಿ ಮತ್ತು ಐಎಸ್‌ಸಿ) ವಿಜ್ಞಾನ ವಿದ್ಯಾರ್ಥಿಗಳಿಗೆ "ಸೈನ್ಸ್ ಸ್ಪ್ರಿಂಟ್ 2024" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿದ್ಯಾರ್ಥಿಗಳಲ್ಲಿ ಸಂವಾದಾತ್ಮಕ, ವಿಜ್ಞಾನ ಕೇಂದ್ರಿತ ಸವಾಲುಗಳ ಮೂಲಕ ವಿಮರ್ಶಾತ್ಮಕ ಚಿಂತನೆ, ಸಮಸ್ಯೆ ಪರಿಹರಿಸುವ ಕೌಶಲಗಳನ್ನು ಬೆಳೆಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ 'ಸೈ-ಕ್ಯೂ' ಎಂಬ ರಸಪ್ರಶ್ನೆ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ. ವಿಜ್ಞಾನ ಆಧಾರಿತ ಈ ರಸಪ್ರಶ್ನೆ ಸ್ಪರ್ಧೆಯಲ್ಲಿ ಸೈನ್ಸ್ ಟ್ರಿವಿಯಾ, ಹಂಟ್ ದಿ ಶಿಪ್ಸ್ ಹಾಗೂ ಮೈಂಡ್ ಸ್ಪ್ರಿಂಟ್ ಎಂಬ ಮೂರು ಸುತ್ತುಗಳಲ್ಲಿ ಒಂದು ತಂಡದಲ್ಲಿ ಇಬ್ಬರನ್ನೊಳಗೊಂಡಂತೆ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ. ರಸಪ್ರಶ್ನೆ ಸ್ಪರ್ಧೆ ವಿಜೇತರು ಆಕರ್ಷಕ ನಗದು ಬಹುಮಾನವನ್ನು ಗಳಿಸಬಹುದಾಗಿದೆ. ರಸಪ್ರಶ್ನೆ ಸ್ಪರ್ಧೆ ಜೊತೆಗೆ ನಿಪುಣ ವಿಜ್ಞಾನ ತಜ್ಞರಿಂದ ವೈಜ್ಞಾನಿಕ ಪ್ರಯೋಗಗಳ ಪ್ರಾತ್ಯಕ್ಷಿಕೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಪ್ರಯೋಗಗಳ ಮೂಲಕ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ತಿಳುವಳಿಕೆಯನ್ನು ಗಾಢವಾಗಿಸಲು ಈ ಕಾರ್ಯಕ್ರಮ ಸಹಕಾರಿಯಾಗಲಿದೆ. ರಸಪ್ರಶ್ನೆ ಸ್ಪರ್ಧೆಯಲ್ಲಿ ಭಾಗವಹಿಸಲು ನೋಂದಣಿಯು ಉಚಿತವಾಗಿದ್ದು, ಪದವಿ ಪೂರ್ವ ವಿಜ್ಞಾನ ವಿದ್ಯಾರ್ಥಿಗಳಿಗೆ ವಿಜ್ಞಾನ ಸಾಧಕರು ಮತ್ತು ಆಕಾಂಕ್ಷಿಗಳೊಂದಿಗೆ ಬೆರೆಯಲು ಉತ್ತಮ ವೇದಿಕೆಯಾಗಿದೆ. ನೋಂದಣಿ, ಮಾಹಿತಿಗೆ 974052 0156, 935331 2456 ಸಂಪರ್ಕಿಸಬಹುದಾಗಿದೆ.

ಗೆಜ್ಜೆಪೂಜೆ ಕಾರ್ಯಕ್ರಮ



ಮೈಸೂರಿನ ಗಾಯತ್ರಿಪುರಂನಲ್ಲಿರುವ ನೃತ್ಯಧಾರ ಸಂಸ್ಥೆಯಲ್ಲಿ ಹೊಸ ಭರತನಾಟ್ಯ ವಿದ್ಯಾರ್ಥಿಗಳಿಗೆ ಗೆಜ್ಜೆಪೂಜೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ನೃತ್ಯಧಾರ ಸಂಸ್ಥೆಯ ಮುಖ್ಯಸ್ಥೆ ವಿದೂಷಿ ಅಮೃತ ಎಂ.ಎಸ್ ಮತ್ತು ನೃತ್ಯ ವಿದ್ಯಾಪೀಠದ ಮುಖ್ಯಸ್ಥೆ ಗುರು. ವಿದೂಷಿ ಸಿ. ಎನ್ ಅನಿತ ಹಾಗೂ ನೃತ್ಯಧಾರ ಸಂಸ್ಥೆಯ ವಿದ್ಯಾರ್ಥಿಗಳನ್ನು ಚಿತ್ರದಲ್ಲಿ ಕಾಣಬಹುದು.

ಚೈತ್ರಾಗೆ ಪಿಹೆಚ್.ಡಿ



ಮೈಸೂರು: ಡಾ.ಟಿ.ಎಸ್. ಜಗದೀಶ್ ಕುಮಾರ್ ಅವರ ಮಾರ್ಗದರ್ಶನದಲ್ಲಿ ಎಸ್.ಚೈತ್ರಾ ಅವರು ರೇಷ್ಮೆ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ

ಮಂಡ್ಯದಲ್ಲಿ ದೇವಾಲಯಕ್ಕೆ ಪರಿಶಿಷ್ಟರ ಪ್ರವೇಶಕ್ಕೆ ನಿರ್ಬಂಧ ಸಂಘರ್ಷ

ಮಾಜಿ ಮೇಯರ್ ಪುರುಷೋತ್ತಮ್ ವಿಷಾದ

ಮೈಸೂರು,ನ.11(ಎಂಟಿವೈ)–ಮಂಡ್ಯ ತಾಲೂಕಿನ ಹನಕೆರೆ ಗ್ರಾಮದಲ್ಲಿ ದೇವರ ಹೆಸರಲ್ಲಿ ಅಸ್ಪೃಶ್ಯತೆ ಎಂಬ ಅನಾಗರಿಕತೆ ಆಚರಣೆ ಮಾಡುವ ಮೂಲಕ ಗ್ರಾಮದ ಕಾಲಭೈರವೇಶ್ವರ ದೇವಾಲಯಕ್ಕೆ ಪರಿಶಿಷ್ಟ ಜಾತಿ ಜನರ ಪ್ರವೇಶ ನಿರ್ಬಂಧಿಸುವ ಮನಸ್ಸುಗಳಿಂದಾಗಿ ಸಂಘರ್ಷ ಉಂಟಾಗಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ವಿಷಾದಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಜರಾಯಿ ಇಲಾಖೆಗೆ ಸೇರಿದ ಕಾಲಭೈರವೇಶ್ವರ ದೇವಾಲಯಕ್ಕೆ ದಲಿತರು ಪ್ರವೇಶಿಸುವುದನ್ನು ಸವರ್ಣೀಯರು ವಿರೋಧಿಸಿದ್ದಾರೆ. ಇದರಿಂದಾಗಿ ಉಂಟಾದ ಬಿಕ್ಕಟ್ಟು ಶಮನಕ್ಕಾಗಿ ಉನ್ನತ ಮಟ್ಟದ ಅಧಿಕಾರಿಗಳ ಸಮ್ಮುಖದಲ್ಲಿ ನಾಲ್ಕು ಬಾರಿ ಸಭೆ ನಡೆದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಅನಾಗರಿಕ ಘಟನೆ ಕುರಿತು ಹಿಂದೂ ವಾರಸುದಾರರ ಮೌನ ಮುರಿದು ಮಾತನಾಡಬೇಕು ಎಂದು ಒತ್ತಾಯಿಸಿದರು.

ದಲಿತರಿಗೆ ಬೇಡವಾದ ಕೆಲಸ: ಚಾರ್ವಾಕನ ಕಾಲದಿಂದಲೂ ದೇವರು ಕಾಲ್ಪನಿಕ ಎಂದು ಹೇಳಲಾಗುತ್ತಿದೆ. ಹಲವು ದಾರ್ಶನಿಕರು ದೇವರನ್ನು ಧಿಕ್ಕರಿಸಿದ್ದಾರೆ. ಹಾಗಾಗಿ ಹನಕೆರೆ ಗ್ರಾಮದ ಪರಿಶಿಷ್ಟ ಜಾತಿಯ ಜನರು ದೇವಾಲಯ ಪ್ರವೇಶ ಮಾಡುವ, ನಮಗೆ ಬೇಡವಾದ ಕೆಲಸವನ್ನು ಬಿಡಬೇಕು ಎಂದು ಸಲಹೆ ನೀಡಿದರು.



ಸೌಹಾರ್ದ ರೀತಿಯಲ್ಲಿ ಬಗೆಹರಿಸಿಕೊಳ್ಳಿ: ಒಳ ಮೀಸಲಾತಿ ಹಂಚಿಕೆ ಸಂಬಂಧ ಹೊಲೆಯ ಮತ್ತು ಮಾದಿಗ ಸಮುದಾಯಗಳ ನಡುವೆ ಸಂಘರ್ಷ ಹೆಚ್ಚಾಗುತ್ತಿದೆ. ಇದು ಅಪಾಯಕಾರಿ. ಎರಡೂ ಸಮುದಾಯಗಳ ಜನರಿಗೆ ಡಾ.ಅಂಬೇಡ್ಕರ್ ಅವರ ಮೇಲೆ ಗೌರವ ಇದ್ದರೆ, ಸಹೋದರರಂತೆ ಸಮಸ್ಯೆಯನ್ನು ಒಳ್ಳೆಯ ರೀತಿ ಇತ್ಯರ್ಥಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಮಹಿಷಾ ದಸರಾ ಆಚರಣೆಯಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಸ್ಥಿತಿ ಬಂದಿದೆ ಎಂದು ಶಾಸಕ ಜನಾರ್ಧನ್ ರೆಡ್ಡಿ ಹೇಳಿಕೆ ಖಂಡಿಸಿದ ಮಾಜಿ ಮೇಯರ್ ಪುರುಷೋತ್ತಮ್, ದೇಶದ ಸಂಪತ್ತನ್ನು ಲೂಟಿ ಮಾಡಿದ ಜನಾರ್ಧನ್ ರೆಡ್ಡಿ ಮೌಢ್ಯದಿಂದ ಮಾತಾಡುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ವಿಚಾರವಾದಿ ಪ್ರೊ.ಕೆ.ಎಸ್.ಭಗವಾನ್ ಮಾತನಾಡಿ, ಜನಾರ್ಧನ್ ರೆಡ್ಡಿ ಅವರ ಹೇಳಿಕೆ ಮಾನಸಿಕತೆಯಿಂದ ಕೂಡಿದೆ. ಸಿದ್ದರಾಮಯ್ಯ ಅವರು ಸಾರ್ವಜನಿಕ ಜೀವನದಲ್ಲಿ ಸ್ವಚ್ಛವಾಗಿದ್ದಾರೆ. ಅನವಶ್ಯಕ ಟೀಕೆಗಳಿಗೆ ಬೆಲೆ ಇಲ್ಲ ಎಂದರು.

ಲೇಖಕ ಸಿದ್ದಸ್ವಾಮಿ ಮಾತನಾಡಿ, ಮಹಿಷಾ ದಸರಾ ಆಚರಣೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅಥವಾ ಸರ್ಕಾರದಿಂದ ಆಚರಿಸಿಲ್ಲ. ಈ ನೆಲದ ಮೂಲನಿವಾಸಿಗಳು ಆಚರಣೆ ಮಾಡಿದ್ದೇವೆ. ಬುದ್ಧನ ಪೂರ್ವ ಕಾಲದಿಂದಲೂ ಮಹಿಷಾ ಇದ್ದಾನೆ. ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಹೇಳಿಕೆ ನೀಡುವುದು ಸರಿಯಲ್ಲ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಸೋಮಯ್ಯ ಮಲೆಯೂರು ಹಾಗೂ ಇನ್ನಿತರರು ಇದ್ದರು.

ಸ್ತ್ರೀ, ಶೂದ್ರರಿಗೂ ವೇದದ ಪರಮಾಧಿಕಾರ ಪ್ರತಿಪಾದಿಸಿದವರು ದಯಾನಂದ ಸರಸ್ವತಿ

ಶ್ರೀ ದಯಾನಂದ ಸರಸ್ವತಿ ಸಂಸ್ಮರಣೋತ್ಸವದಲ್ಲಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಮತ



ಮೈಸೂರಿನ ಆರ್ಯ ಸಮಾಜದಲ್ಲಿ ಏರ್ಪಡಿಸಿದ್ದ ಮಹರ್ಷಿ ಶ್ರೀ ದಯಾನಂದ ಸರಸ್ವತಿ ಅವರ ಸಂಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಸಂಸ್ಕೃತ ವಿದುಷಿ ಡಾ.ಲೀಲಾ ಪ್ರಕಾಶ್ ಹಾಗೂ ಯೋಗಾಚಾರ್ಯ ಡಾ. ಬಿ.ಪಿ.ಮೂರ್ತಿ ಅವರಿಗೆ ಮಹರ್ಷಿ ದಯಾನಂದ ಸರಸ್ವತಿ ಸದ್ಭಾವನಾ ಪ್ರಶಸ್ತಿ ನೀಡಿ, ಗೌರವಿಸಲಾಯಿತು.

ಮೈಸೂರು,ನ.11–ಸಮಾಜದಲ್ಲಿ ಕಡೆಗಣನೆಗೆ ಒಳಗಾಗಿದ್ದ ಸ್ತ್ರೀ ಮತ್ತು ಶೂದ್ರರಿಗೂ ವೇದದ ಪರಮಾಧಿಕಾರವನ್ನು ಪ್ರತಿಪಾದಿಸಿದವರು ಮಹರ್ಷಿ ದಯಾನಂದ ಸರಸ್ವತಿ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಅಭಿಪ್ರಾಯಪಟ್ಟರು.

ನಗರದ ದೇವರಾಜ ಮೊಹಲ್ಲಾದಲ್ಲಿರುವ ಆರ್ಯ ಸಮಾಜದಲ್ಲಿ ಏರ್ಪಡಿಸಿದ್ದ ಮಹರ್ಷಿ ಶ್ರೀ ದಯಾನಂದ ಸರಸ್ವತಿ ಅವರ ಸಂಸ್ಮರಣೋತ್ಸವವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಸಮಾಜದಲ್ಲಿ ತುಂಬಿ ತುಳುಕುತ್ತಿದ್ದ ಅಸಮಾನತೆ, ಮೌಢ್ಯತೆಗಳ ವಿರುದ್ಧ ದನಿಯೆತ್ತಿ ಕಳೆದ 240 ವರ್ಷಗಳ ಹಿಂದೆಯೇ ಮನುಕುಲದ ಒಳಿತಿಗಾಗಿ ವೇದಗಳ ಅವಶ್ಯಕತೆಯನ್ನು ಮನಗಾಣಿಸಿದ ಕೀರ್ತಿ ಮಹರ್ಷಿ ದಯಾನಂದ ಸರಸ್ವತಿಗಳಿಗೆ ಸಲ್ಲುತ್ತದೆ ಎಂದು ಹೇಳಿದರು.

ಶ್ರೀ ದಯಾನಂದ ಸರಸ್ವತಿಗಳ ಕುರಿತು ಮಾತನಾಡಿದ ಖ್ಯಾತ ಸಂಸ್ಕೃತ ವಿದುಷಿ ಡಾ.ಕೆ.ಲೀಲಾಪ್ರಕಾಶ್, ವೇದಗಳ ಮೇಲೆ ಆಧಾರಿತವಾಗಿ ನಿಂತ ಸನಾತನ ಧರ್ಮವು ಪ್ರತಿಯೊಬ್ಬ ಮನುಷ್ಯನಿಗೂ ವೇದಗಳ ಮಹತ್ವವನ್ನು ಸಾರುತ್ತದೆ ಎಂದರಲ್ಲದೆ, ವೇದಗಳಿಗೆ ಹಿಂತಿರುಗಿ ಎಂಬ ಮಹರ್ಷಿಗಳ ಸಂದೇಶ ಸಾರ್ವಕಾಲಿಕ ಮಹತ್ವ ಪಡೆದುಕೊಂಡಿದೆ ಎಂದರು.

ವಿಗ್ರಹ ಆರಾಧನೆಯನ್ನು ಬಲವಾಗಿ ಖಂಡಿಸಿದ ಮಹರ್ಷಿ ದಯಾನಂದ ಸರಸ್ವತಿ ಅವರು, ಮನುಕುಲದ ಒಳಿತಿಗಾಗಿಯೇ ಇರುವ ವೇದಗಳ ನಿಜವಾದ ಸಂದೇಶ ಸಾರಲು ಸತ್ಯಾರ್ಥ ಪ್ರಕಾಶ ಎಂಬ ಗ್ರಂಥವನ್ನು ರಚಿಸಿ ಮನುಕುಲಕ್ಕೆ ನೀಡಿದರು ಎಂದು ತಿಳಿಸಿದರು.

ಸತ್ಯದ ಪ್ರತಿಪಾದನೆ ಮಾಡಹೊರಟ ಮಹರ್ಷಿಗಳನ್ನು ಕೊಲ್ಲಲು ಹಲವರು ಪ್ರಯತ್ನ ನಡೆಸಿದರಾದರೂ ಸ್ವಾಮೀಜಿ ತಮ್ಮ ಯೋಗ ಬಲದಿಂದ ಅವುಗಳಿಂದ ಪಾರಾದರು. ಆದರೆ ಕೊನೆಗೆ ಇಂತಹ ಮಹರ್ಷಿಗಳಿಗೆ ಗಾಜಿನ ಪುಡಿಯನ್ನು ಆಹಾರದಲ್ಲಿ ಮಿಶ್ರಣ ಮಾಡಿ ಹತ್ಯೆ ಮಾಡಲಾಗಿದ್ದು ದುರಂತ ಎಂದರು.

ಆರ್ಯ ಸಮಾಜದ ಅಧ್ಯಕ್ಷ ಎಸ್.ಹೇಮಚಂದ್ರ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಕೃತ ವಿದುಷಿ ಡಾ. ಲೀಲಾ ಪ್ರಕಾಶ್ ಹಾಗೂ ಯೋಗಾಚಾರ್ಯ ಡಾ.ಬಿ.ಪಿ.ಮೂರ್ತಿ ಅವರಿಗೆ ಮಹರ್ಷಿ ದಯಾನಂದ ಸರಸ್ವತಿ ಸದ್ಭಾವನಾ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕಾರ್ಯಕ್ರಮಕ್ಕೂ ಮುನ್ನ ಅಗ್ನಿಹೋತ್ರ ನಡೆಸಲಾಯಿತು. ವೇದಮಂತ್ರ ಪಠಣಗಳೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಹಿಮಾಲಯ ಪ್ರತಿಷ್ಠಾನದ ಅಧ್ಯಕ್ಷ ಎನ್.ಅನಂತ, ಸಂಚಾಲಕ ಎಂ.ವಿ.ನಾಗೇಂದ್ರ ಬಾಬು, ಆರ್ಯ ಸಮಾಜದ ಉಪಾಧ್ಯಕ್ಷ ಪೃಥ್ವಿರಾಜ್, ಕಾರ್ಯದರ್ಶಿ ಕೆ.ವಿ. ಉಮೇಶ್, ನವೀನ್‌ಕುಮಾರ್ ಮುಂತಾದವರು ಉಪಸ್ಥಿತರಿದ್ದರು.

ಮೇಲುಕೋಟೆಯಲ್ಲಿ ವೈಭವದ ತೊಟ್ಟಿಲಮಡು ಜಾತ್ರೆ

ಮೇಲುಕೋಟೆ: ಚೆಲುವನಾರಾಯಣಸ್ವಾಮಿಯ ಪ್ರಸಿದ್ಧ ಆರಾಧನೆಯ ಮಳೆಗಾಲದ ಉತ್ಸವ ತೊಟ್ಟಿಲಮಡು ಜಾತ್ರೆ, ಅಷ್ಟ ತೀರ್ಥೋತ್ಸವ ಸೋಮವಾರ ವೈಭವದಿಂದ ನೆರವೇರಿತು. ಮಕ್ಕಳ ಭಾಗ್ಯ ಅಪೇಕ್ಷಿತ ದಂಪತಿಗಳು ಹರಕೆ ಕಟ್ಟಿಕೊಂಡು ಸ್ವಾಮಿ ಪಾದುಕೆಯ ಹಿಂದೆ ಸಾಗಿ ಬಂದರೆ, ಸಹಸ್ರಾರು ಭಕ್ತರು ತೊಟ್ಟಿಲಮಡು ಜಾತ್ರೆಯಲ್ಲಿ ಪಾಲ್ಗೊಂಡಿದ್ದರು.

ರಾಜಮುಡಿ ಬ್ರಹ್ಮೋತ್ಸವದ 6ನೇ ತಿರುನಾಳ್ ಅಂಗವಾಗಿ ನಡೆದ ಅಷ್ಟ ತೀರ್ಥೋತ್ಸವದ ಧಾರ್ಮಿಕ ಕೈಂಕರ್ಯಗಳು ಬೆಳಗ್ಗೆ 7 ಗಂಟೆಗೆ ಆರಂಭವಾದವು. ವೇದಾಂತ ದೇಶಿಕರ ಸನ್ನಿಧಿಗೆ ಸ್ವಾಮಿಯ ಪಾದುಕಾ ಪಲ್ಲಕ್ಕಿಯ ಉತ್ಸವ ನಡೆದ ನಂತರ 9 ಗಂಟೆಗೆ ವಜ್ರ ಖಚಿತರಾಜಮುಡಿ ಧರಿಸಿದ ಚೆಲುವನಾರಾಯಣಸ್ವಾಮಿ ಮತ್ತು ರಾಮಾನುಜಾಚಾರ್ಯರ ಉತ್ಸವ ನೆರವೇರಿತು. ನಂತರ ಗಜೇಂದ್ರವರದನ ಸನ್ನಿಧಿಯ ಮುಖ್ಯಾಂಗದಲ್ಲಿ ವೇದಘೋಷದೊಂದಿಗೆ ಸ್ವಾಮಿಯ ಪಾದುಕೆಗೆ ಅಭಿಷೇಕ ನೆರವೇರಿದ ನಂತರ ಅಷ್ಟ ತೀರ್ಥೋತ್ಸವದ ಕಾರ್ಯಕ್ರಮಗಳು ಆರಂಭವಾದವು. ಗ್ರಾಮಸ್ಥರು ಸಹ ತುಂಬಿಕೊಂಡು ಕಲ್ಯಾಣಿಯಲ್ಲಿ ಪವಿತ್ರ ಸ್ನಾನ ಮಾಡಿದರು.

ಅರ್ಚಕ ಎಸ್.ನಾರಾಯಣಭಟ್ಟರ್ ಮತ್ತು ಯೋಗಾನಂದ ಭಟ್ಟರ್ ಕಲ್ಯಾಣಿಯಲ್ಲಿ ಅವಭೃತಚೂರ್ಣಿಕಾ ಮಂತ್ರಗಳೊಂದಿಗೆ ಸ್ವಾಮಿ ಪಾದುಕೆಗೆ ಕಲ್ಯಾಣಿಯಲ್ಲಿ ಪ್ರಥಮ ಅಭಿಷೇಕ ಮಾಡಿ ನೆರದ ಭಕ್ತರ ಇಷ್ಟಾರ್ಥ ಈಡೇರಲಿ, ನಾಡು ಸುಭಿಕ್ಷವಾಗಿರಲಿ ಎಂದು ಪ್ರಾರ್ಥಿಸಿದರು. ರಾಮಾನುಜರ ಸನ್ನಿಧಿಯ ಅರ್ಚಕ ವಿದ್ವಾನ್ ಬಿ.ವಿ. ಆನಂದಾಳ್ವಾರ್ ಸ್ಥಾನೀಕ ಶ್ರೀನಿವಾಸ ನರಸಿಂಹನ್ ಗುರೂಜಿ, ಮುಕುಂದನ್ ಕರಗಂರಾಮಪ್ರಿಯ ಸೇರಿದಂತೆ ವೇದಪಾರಾಯಣ ಕೈಂಕರ್ಯಪರರು, ಪಾಂಡವಪುರ ಎಸಿ ಶ್ರೀನಿವಾಸ್, ದೇವಾಲಯದ ಇಓ ಎನ್.ಎಸ್.ಶೀಲಾ, ಗ್ರಾಮ ಆಡಳಿತಾಧಿಕಾರಿ ರಮೇಶ್ ಭಾಗವಹಿಸಿದ್ದರು.



ಮೇಲುಕೋಟೆಯ ಅಷ್ಟ ತೀರ್ಥೋತ್ಸವದ ಪ್ರಯುಕ್ತ ಕಲ್ಯಾಣಿಯಲ್ಲಿ ಪ್ರಥಮ ಸ್ನಾನದ ನಂತರ ಚೆಲುವನಾರಾಯಣಸ್ವಾಮಿ ಉತ್ಸವದ ಹಿಂದೆ ಸಾಗಿದ ಭಕ್ತರು.

ಅಷ್ಟ ತೀರ್ಥಗಳಲ್ಲಿ ಅಭಿಷೇಕ ತೊಟ್ಟಿಲಮಡು ಜಾತ್ರೆ: ಬೆಳಗ್ಗೆ 10.30ಕ್ಕೆ ದೇವಾಲಯದಿಂದ ಪಲ್ಲಕ್ಕಿಯಲ್ಲಿ ಹೊರಟ ಸ್ವಾಮಿ ಸ್ವರ್ಣಪಾದುಕೆಗೆ ಚೆಲುವ ದೈವಿವನದ ಮಧ್ಯೆ ಇರುವ ವೇದ ಪುಷ್ಕರಣಿ, ಶ್ರೀರಾಮ ಸೀತಾ ಮಾತೆಯ ದಾಹ ತಣಿಸಲು ಬಾಣ ಬಿಟ್ಟು ಹೆಬ್ಬಂಡೆಗಳ ನಡುವಿನಿಂದ ನೀರು ಉಕ್ಕಿಸಿದ ಧನುಷ್ಕೋಟಿ, ಬೆಟ್ಟಗುಡ್ಡಗಳಿಂದ ಹರಿಯುವ ಯಾದವಾತೀರ್ಥ, ಬೆಟ್ಟಗಳ ಮಧ್ಯೆ ಇರುವ ದರ್ಭತೀರ್ಥ, ಪಲಾಶ ತೀರ್ಥ, ಪದ್ಮತೀರ್ಥ, ಸರ್ಕಾರಿ ಬಾಲಕರ ಶಾಲೆ ಹಿಂಭಾಗವಿರುವ ನರಸಿಂಹ ತೀರ್ಥ, ವೈಕುಂಠ ವಾಸಿಯಾದವರಿಗೆ ಮೋಕ್ಷ ಕರುಣಿಸುವ ನಂಬಿಕೆಯುಳ್ಳ ನಾರಾಯಣ ತೀರ್ಥಗಳಲ್ಲಿ ಅಭಿಷೇಕ ನೆರವೇರಿಸಲಾಯಿತು. ಸಂಜೆ 5.30ರ ವೇಳೆಗೆ ವೈಕುಂಠಗಂಗೆಯಲ್ಲಿ ಕೊನೆಯ ಅಭಿಷೇಕ ಮಾಡಲಾಯಿತು. ಪ್ರಕೃತಿಯ ಸುಂದರ ಪರಿಸರದ ಮಧ್ಯೆ ಇರುವ ವೈಕುಂಠ ಗಂಗೆ ತೊಟ್ಟಿಲಮಡು ಬಳಿ ಸಂಜೆ ನಡೆದ ಜಾತ್ರೆಯಲ್ಲಿ ಸಹಸ್ರಾರು ಭಕ್ತರು ಭಾಗಿಯಾಗಿ ವೈಕುಂಠನಾಥನಿಗೆ ಪೂಜೆ ಸಲ್ಲಿಸಿದರು. ಸಿಹಿ ತಿನಿಸು ಮತ್ತು ಆಟಿಕೆಗಳ ಅಂಗಡಿಗಳಿಗೆ ಭರ್ಜರಿ ವ್ಯಾಪಾರ ನಡೆಯಿತು. ವಿಷ್ಣುಸಹಸ್ರನಾಮ ಪಾರಾಯಣದೊಂದಿಗೆ ಸಾಗಿದ ಪಾದುಕೆ ಯೋಗಾನರಸಿಂಹನ ಬೆಟ್ಟದ ಗಿರಿಪ್ರದಕ್ಷಿಣೆಯೊಂದಿಗೆ ರಾತ್ರಿ 9ಕ್ಕೆ ದೇವಾಲಯ ತಲುಪಿ ಅಷ್ಟತೀರ್ಥೋತ್ಸವ ಮುಕ್ತಾಯವಾಯಿತು.

ಮೇಲುಕೋಟೆ ಗ್ರಾಮ ಪಂಚಾಯಿತಿ, ತೊಟ್ಟಿಲಮಡುಗೆ ಬರುವ ರಸ್ತೆ ಹಾಗೂ ವೈಕುಂಠ ಗಂಗೆಯ ಬಳಿ ಸ್ವಚ್ಛತಾ ಕಾರ್ಯ ಮಾಡಿ ಕುಡಿಯುವ ನೀರಿನ ಸೌಕರ್ಯ ಕಲ್ಪಿಸಿ ಬೆಳಕಿನ ವ್ಯವಸ್ಥೆ ಮಾಡಿತ್ತು. ಗ್ರಾಪಂ ಅಧ್ಯಕ್ಷೆ ಮಣಿಮುರುಗನ್, ಉಪಾಧ್ಯಕ್ಷ ಜಿ.ಕೆ.ಕುಮಾರ್ ಹಾಗೂ ಸದಸ್ಯರು, ಪಿಡಿಓ ರಾಜೇಶ್ವರಿ ಆಸಕ್ತಿಯ ಪರಿಣಾಮ ತೊಟ್ಟಿಲಮಡು ಜಾತ್ರೆಗೆ ಭಕ್ತಸ್ನೇಹಿಯಾಗಿ ವ್ಯವಸ್ಥೆ ಮಾಡಲಾಗಿತ್ತು. ಇನ್ಸ್‌ಪೆಕ್ಟರ್ ಸಿದ್ದಪ್ಪ ಮಾರ್ಗದರ್ಶನದಲ್ಲಿ ಮೇಲುಕೋಟೆ ಪೊಲೀಸರು ಜಾತ್ರಾ ಸಮಯದಲ್ಲಿ ಕಟ್ಟೆ ಬಳಿಯಿಂದ ತೊಟ್ಟಿಲಮಡು ಬಳಿಗೆ ಯಾವುದೇ ವಾಹನಗಳು ಹೋಗದಂತೆ ಕಣಿವೆಯಲ್ಲೇ ವಾಹನಗಳ ಪಾರ್ಕಿಂಗ್ ಮಾಡಿಸಿ ವಾಹನ ದಟ್ಟಣೆಯನ್ನು ನಿಯಂತ್ರಿಸಿದರು. ದೇವಾಲಯದ ಜೋಡಿದಾರ್ ಮನೆತನ ಹಾಗೂ ವಿವಿಧ ಜನಾಂಗದವರು ವಿಶೇಷವಾದ ಕದಂಬ ಪ್ರಸಾದ ತಯಾರಿಸಿ ಭಕ್ತರಿಗೆ ವಿನಿಯೋಗ ಮಾಡಿದರು.

ಮಕ್ಕಳ ಏಳಿಗೆಯಲ್ಲಿ ತಾಯಂದಿರ ಪಾತ್ರ ಅಪಾರ



ಮಂಡ್ಯದ ವೈಯರಹಳ್ಳಿ ಗ್ರಾಮದಲ್ಲಿ ನಡೆದ ಕಾರ್ಯಕ್ರಮಕ್ಕೆ ಆದಿಚುಂಚನಗಿರಿ ಪೀಠಾಧ್ಯಕ್ಷ ನಿರ್ಮಲಾನಂದನಾಥಶ್ರೀ ಚಾಲನೆ ನೀಡಿದರು.

ಮಂಡ್ಯ, ನ.11– ಮಕ್ಕಳ ಏಳಿಗೆಯಲ್ಲಿ ತಾಯಂದಿರ ಪಾತ್ರ ಅಪಾರ. ನಿಸ್ವಾರ್ಥ ಪ್ರೀತಿ, ತ್ಯಾಗ ಮತ್ತು ತಾಳ್ಮೆಯಿಂದ ಮಕ್ಕಳ ಬೆಳವಣಿಗೆಗೆ ಸಾಕಾರ ಮೂರ್ತಿಯಾಗಿ ಕಾಣುತ್ತಾರೆ ಎಂದು ಶ್ರೀಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು.

ತಾಲೂಕಿನ ವೈಯರಹಳ್ಳಿ ಡೈರಿ ನೂತನ ಬಿಲ್ಡಿಂಗ್ ಉದ್ಘಾಟನೆ, ಜಯ ಚಾಮರಾಜೇಂದ್ರ ಒಡೆಯರ್, ಬಾಲಗಂಗಾಧರನಾಥ ಸ್ವಾಮೀಜಿ, ಸರ್ ಎಂ.ವಿಶ್ವೇಶ್ವರಯ್ಯ ಅವರ ಪುತ್ಥಳಿ ಅನಾವರಣ ಹಾಗೂ ಕನ್ನಡ ರಾಜ್ಯೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಸಮಾಜದ ಏಳಿಗೆಗೆ ಶ್ರಮಿಸಿದ ನಾಯಕರ ಪ್ರತಿಮೆಯನ್ನು ಗ್ರಾಮದಲ್ಲಿ ಸ್ಥಾಪಿಸಿ, ಯುವ ಜನಾಂಗ ಆದರ್ಶ ಮೈಗೂಡಿಸಿಕೊಳ್ಳಬೇಕು. ತಾಯಂದಿರು ಮನಸು ಮಾಡಿದರೆ ತಪ್ಪು ದಾರಿಯಲ್ಲಿ ಹೋಗುವ ಮಕ್ಕಳನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಬಾಲ್ಯದಲ್ಲಿಯೇ ಮಕ್ಕಳನ್ನು ತಿದ್ದುವ ಕೆಲಸವಾಗಬೇಕು ಎಂದು ಸಲಹೆ ನೀಡಿದರು.

ಬಿಜೆಪಿ ಮುಖಂಡ ಸಚ್ಚಿದಾನಂದ ಇಂದುವಾಳು ಮಾತನಾಡಿ, ಚುಂಚನಗಿರಿ ಮಠವನ್ನು ಚಿನ್ನದ ಗಿರಿ ಮಾಡಿದ ಬಾಲಗಂಗಾಧರನಾಥ ಸ್ವಾಮೀಜಿ ಅವರು ಮಂಡ್ಯ ಜಿಲ್ಲೆಯನ್ನು ಅಂದಿನ ಕಾಲದಲ್ಲಿಯೇ ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡುವಂತೆ ಮಾಡಿದ್ದಾರೆ ಎಂದು ಸ್ಮರಿಸಿದರು.

ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿದರು. ಜಲ ಸಂಪನ್ಮೂಲ ಇಲಾಖೆಯ ಅಧೀಕ್ಷಕ ಇಂಜಿನಿಯರ್ ಸತೀಶ್, ಕಾರ್ಯಕ್ರಮ ಸಂಯೋಜಕ ಶಿವಕುಮಾರ್ ಯರಹಳ್ಳಿ, ಮುಖಂಡರಾದ ಪುಟ್ಟಸ್ವಾಮಿ, ದೇವೇಗೌಡ ಭಾಗವಹಿಸಿದ್ದರು.

ಒನಕೆ ಓಬವ್ವನ ಆದರ್ಶ ಮೈಗೂಡಿಸಿಕೊಳ್ಳಿ



ಒನಕೆ ಓಬವ್ವ ಅವರ ಭಾವಚಿತ್ರಕ್ಕೆ ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಪುಷ್ಪಾರ್ಚನೆ ಮಾಡಿದರು.

ಮಂಡ್ಯ,ನ.11– ಪ್ರತಿ ಹೆಣ್ಣುಮಕ್ಕಳು ವೀರ ವನಿತೆ ಒನಕೆ ಓಬವ್ವನ ಆದರ್ಶಗಳನ್ನು ತಮ್ಮ ಜೀವನ ದಲ್ಲಿ ಮೈಗೂಡಿಸಿಕೊಂಡು ಅವರಂತೆ ಧೈರ್ಯಶಾಲಿ ಯಾಗಿ ಬದುಕಬೇಕು ಎಂದು ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು ಕರೆ ನೀಡಿದರು.

ಇಂದು ಮಂಡ್ಯ ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ನಡೆದ ಮಂಡ್ಯ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ವೀರವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ, ಒನಕೆ ಓಬವ್ವ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು.

ಓಬವ್ವ ಮದಕರಿ ನಾಯಕನ ಚಿತ್ರದುರ್ಗ ಕೋಟೆಯ ಕಾವಲುಗಾರನಾಗಿದ್ದ ಕಹಳೆ ಮದ್ದ ಹನುಮಪ್ಪನ ಪತ್ನಿಯಾಗಿದ್ದು, ಶತ್ರುಗಳನ್ನು ಸದೆಬಡಿಯಲು ತನ್ನ ಪ್ರಾಣವನ್ನು ಲೆಕ್ಕಿಸದೆ ಹೋರಾಡಿ ತನ್ನ ಧೈರ್ಯ ಹಾಗೂ ರಾಜ ನಿಷ್ಠೆಯನ್ನು ಮೆರೆದರು. ಈಕೆಯು ಯಾವುದೇ ವಿದ್ಯಾಭ್ಯಾಸವನ್ನಾಗಲಿ ಅಥವಾ ಯಾವುದೇ ಹುದ್ದೆಯನ್ನು ಪಡೆದವಳಲ್ಲ. ಆದರೂ ತನ್ನ ಪತಿಯ ಕರ್ತವ್ಯವನ್ನು ತನ್ನದೆಂದು ಭಾವಿಸಿ ವಿರಾವೇಶದಿಂದ ಶತ್ರು ನಾಶ ಮಾಡಿದ ಆಕೆಯ ಸಾಧನೆ ಎಲ್ಲರೂ ಮೆಚ್ಚುವಂತದ್ದು ಎಂದರು.

ಬೆಂಗಳೂರು ಶ್ರೀ ಶಾರದ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಟಿ.ಬಿ.ಅನುಸೂಯ ಹೊಂಬಾಳೆ ಅವರು ಮಾತನಾಡಿ, ಯಾರೂ ಹುಟ್ಟಿನಿಂದ ಮಹಾತ್ಮರಾಗಿರುವುದಿಲ್ಲ. ಯಾವ ಸಾಮಾನ್ಯ ಮನುಷ್ಯನು ಕೂಡ ಮಹಾತ್ಮರಾಗಬಹುದು. ಆದರೆ ಆ ಚೇತನಕ್ಕೆ ಒಂದು ಕಿಡಿ ತಾಗಬೇಕು. ಒಂದು ರಸ ಸೋಕಬೇಕು. ಕಿಡಿ ತಾಕಿ ರಸ ಸೋಕಿದಾಗ ಎಲ್ಲರೂ ಮಹಾತ್ಮರಾಗಬಹುದು ಎಂಬ ಕುವೆಂಪುರವರ ಮಾತಿನಂತೆ ಓಬವ್ವನಂತಹ ಕಿಡಿ ತಾಕಿ ಧೈರ್ಯ, ಶೌರ್ಯವೆಂಬ ರಸ ಸೋಕಿದಾಗ ಎಲ್ಲರೂ ಮಹಾತ್ಮರಾಗುವರು. ಆದರೆ ಇಂದಿನ ಹೆಣ್ಣುಮಕ್ಕಳು ಒಂದು ಜಿರಳೆಯನ್ನು ಎದುರಿಸಲು ಮನೆಯವರ ಸಹಾಯ ಪಡೆಯುತ್ತೀರ. ಆದರೆ ಅಂದಿನ ಕಾಲದಲ್ಲಿಯೇ ಓಬವ್ವ ಒಬ್ಬಂಟಿಯಾಗಿ ಶತ್ರುಗಳ ವಿರುದ್ಧ ಹೋರಾಡಿ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಉಳಿದಿದ್ದಾರೆ. ಪ್ರತಿ ಹೆಣ್ಣು ಕೂಡ ಯಾವುದೇ ಸಮಸ್ಯೆಗಳನ್ನು ದಿಟ್ಟತನದಿಂದ ಎದುರಿಸಬೇಕು ಎಂದರು.

ನಾಳೆ ವಿದ್ಯುತ್ ವ್ಯತ್ಯಯ

ಮಂಡ್ಯ, ನ.11– ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ನವೆಂಬರ್ 13 ರಂದು ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯ ವರೆಗೆ ವಿದ್ಯುತ್‌ನಲ್ಲಿ ಅಡಚಣೆ ಉಂಟಾಗಲಿದೆ.

ಚಿಕ್ಕ ಮಂಡ್ಯ ವಿದ್ಯುತ್ ವಿತರಣಾ ಕೇಂದ್ರದ ನಗರ ಪ್ರದೇಶಗಳಾದ ಶಂಕರಪುರ, ಜೈನ್ ಸ್ಟ್ರೀಟ್, ಬೀಡಿ ಕಾಲೋನಿ, ಜಬರ್ ಸರ್ಕಲ್, ವಿನಾಯಕ ಬಡಾವಣೆ ಹಾಗೂ ಗ್ರಾಮಾಂತರ ಪ್ರದೇಶಗಳಾದ ಗೋಪಾಲಪುರ, ಚಿಕ್ಕಮಂಡ್ಯ, ಸಾತನೂರು, ಕೊಮ್ಮೇರಹಳ್ಳಿ, ಹುಲಿವಾನ, ಕೆ. ಗೌಡಗೆರೆ, ಹೆಚ್. ಮಲ್ಲಿಗೆರೆ, ಎಸ್.ಐ. ಕೋಡಿಹಳ್ಳಿ, ಹೆಚ್. ಕೋಡಿಹಳ್ಳಿ, ಸಂಪಹಳ್ಳಿ, ಗೊರವಾಲೆ, ಬಿ. ಹೊಸಹಳ್ಳಿ, ಬೀರಗೌಡನಹಳ್ಳಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗುತ್ತದೆ ಎಂದು ಮಂಡ್ಯ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಕಾ ಮತ್ತು ಪಾ ಮಂಡ್ಯ ವಿಭಾಗದ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಲ್‌ಡಿ ಬ್ಯಾಂಕ್‌ಗೆ ಶಿವಕುಮಾರ್ ಅಧ್ಯಕ್ಷ



ಪಿಎಲ್‌ಡಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಿ.ಆರ್.ಶಿವಕುಮಾರ್ ಅವರನ್ನು ಬ್ಯಾಂಕ್ ನಿರ್ದೇಶಕರು ಹಾಗೂ ಮುಖಂಡರು ಅಭಿನಂದಿಸಿದರು.

ಕೆ.ಆರ್.ಪೇಟೆ, ನ.11– ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಬ್ಯಾಂಕ್(ಪಿಎಲ್‌ಡಿ) ಅಧ್ಯಕ್ಷರಾಗಿ ಬಂಡಿಹೊಳೆ ಬಿ.ಆರ್.ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷೆ ರಾಧಾ ಅವರ ರಾಜೀನಾಮೆಯಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಸಂಘದ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಶಿವಕುಮಾರ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಭರತ್ ಘೋಷಿಸಿದರು. ನೂತನ ಅಧ್ಯಕ್ಷರನ್ನು ಬ್ಯಾಂಕ್ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು, ನೌಕರರು ಅಭಿನಂದಿಸಿದರು.

ಬಳಿಕ ಮಾತನಾಡಿದ ಬ್ಯಾಂಕ್ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿಗೌಡ, ಅಧ್ಯಕ್ಷರಾದವರಿಗೆ ಜವಾಬ್ದಾರಿ ಹೆಚ್ಚಿರುತ್ತದೆ. ಬ್ಯಾಂಕ್‌ನ ಎಲ್ಲಾ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಬ್ಯಾಂಕ್ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ನೂತನ ಅಧ್ಯಕ್ಷ ಶಿವಕುಮಾರ್ ಮಾತನಾಡಿ, ನನಗೆ ಕೊಟ್ಟ ಜವಾಬ್ದಾರಿ ಸ್ಥಾನಕ್ಕೆ ಯಾವುದೇ ಕಪ್ಪುಚುಕ್ಕೆ ಬಾರದಂತೆ ಕಾರ್ಯ ನಿರ್ವಹಿಸುತ್ತೇನೆ. ಎಲ್ಲರ ವಿಶ್ವಾಸಕ್ಕೆ ಪಾತ್ರನಾಗಿ ಉಳಿದಿರುವ ಅವಧಿಯಲ್ಲಿ ಬ್ಯಾಂಕ್ ಅಭಿವೃದ್ಧಿ ಹಾಗೂ ರೈತರ ಬೆನ್ನೆಲುಬಾಗಿ ಪ್ರಾಮಾಣಿಕವಾಗಿ ದುಡಿಯಲು ಪ್ರಯತ್ನಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಬ್ಯಾಂಕ್ ಉಪಾಧ್ಯಕ್ಷ ಏಜಾಜ್ ಪಾಷಾ, ಮಾಜಿ ಅಧ್ಯಕ್ಷೆ ರಾಧಾ, ಪಾಪಣ್ಣ, ಗೋವಿಂದರಾಜು, ಮಾಜಿ ಉಪಾಧ್ಯಕ್ಷ ಧನಂಜಯ್, ಕಾಂತರಾಜೇಗೌಡ, ಚಂದ್ರೇಗೌಡ, ನಾಗರಾಜೇಗೌಡ, ಕಮಲಮ್ಮ, ಜಯಶೀಲ, ನಾಗೇಶ್, ನಿರ್ದೇಶಕ ಚಂದ್ರೇಗೌಡ, ಶಂಭುಲಿಂಗೇಗೌಡ, ರಾಜಾನಾಯಕ್, ವ್ಯವಸ್ಥಾಪಕ ರವಿಕುಮಾರ್ ಇನ್ನಿತರರಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ
ಮದ್ಯದಂಗಡಿ ಮಾಲೀಕರಿಂದ ಸಿಎಂಗೆ ಮನವಿ



ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿ ವತಿಯಿಂದ ತಮ್ಮ ಹಲವು ಬೇಡಿಕೆಗಳ ಈಡೇರಿಕೆಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು.

ಬೆಂಗಳೂರು, ನ.11– ಕರ್ನಾಟಕ ರಾಜ್ಯ ಲಿಕ್ಕರ್ ಮರ್ಚೆಂಟ್ಸ್ ಡೆವಲಪ್‌ಮೆಂಟ್ ಕೋ–ಆಪರೇಟಿವ್ ಸೊಸೈಟಿ ನಿಯೋಗವು ಬೆಂಗಳೂರಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಸಲ್ಲಿಸಿತು.

ಸಂಘದ ಅಧ್ಯಕ್ಷ ಎಸ್.ಚಂದ್ರಶೇಖರ್ ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿದ ನಿಯೋಗವು ಸನ್ನದು ಶುಲ್ಕ, ವಿದ್ಯುತ್ ಬಿಲ್, ನೌಕರರ ಸಂಬಳ, ಬಾಡಿಗೆ ಮುಂತಾದವುಗಳ ವೆಚ್ಚ ಹೆಚ್ಚಾಗಿರುವುದರಿಂದ ಹಾಲಿ ಇರುವ ಶೇ.10ರಷ್ಟು ಲಾಭಾಂಶವನ್ನು ಶೇ.15ಕ್ಕೆ ಹೆಚ್ಚಿಸಬೇಕು ಎಂದು ಮನವಿ ಮಾಡಿದರು.

3 ಮೊಕದ್ದಮೆಗಳು ದಾಖಲಾದರೆ ಸನ್ನದು ಅಮಾನತುಪಡಿಸುವ ಬಗ್ಗೆ ಹಾಲಿ ಇರುವ ಸುತ್ತೋಲೆಯನ್ನು ಮಾರ್ಪಡಿಸಿ ಪ್ರಕರಣದ ಸ್ವರೂಪ ಮತ್ತು ನ್ಯೂನ್ಯತೆಗಳನ್ನು ಪರಿಶೀಲಿಸಿ ಅಬಕಾರಿ ನಿಯಮಗಳಡಿ ಕ್ರಮ ಕೈಗೊಳ್ಳುವಂತೆ ಜಿಲ್ಲೆಯ ಅಬಕಾರಿ ಅಧಿಕಾರಿಗಳಿಗೆ ಸುತ್ತೋಲೆ ಹೊರಡಿಸುವುದು. ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಕಟ್ಟುನಿಟ್ಟಿನ ಅಬಕಾರಿ ನಿಯಮಗಳು ಪ್ರಶಸ್ತವಾಗಿವೆ. ಅದೇ ರೀತಿ ಸಿ.ಎಲ್ 7 ಸನ್ನದು ಮಂಜೂರಾತಿಗೆ ಪ್ರಸ್ತುತ ಇರುವ ನಿಯಮ ಸಮಂಜಸವಾಗಿದೆ ಎಂದು ಮನವಿಯಲ್ಲಿ ತಿಳಿಸಿದ್ದು, ಸನ್ನದುದಾರರಿಗೆ ಅನಾವಶ್ಯಕವಾಗಿ ತೊಂದರೆ ನೀಡುವ ಅಧಿಕಾರಿ, ನೌಕರರ ವಿರುದ್ಧ ಸನ್ನದುದಾರರು ದೂರು ಸಲ್ಲಿಸಿದರೇ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಬೇಕು ಎಂದು ಮನವಿಯಲ್ಲಿ ಕೋರಲಾಗಿದೆ.

ಡಾ.ಗೀತಾ ಸೀತಾರಾಮ್ ಅವರಿಗೆ 'ಸ್ವರಲಿಪಿ ಪ್ರಶಸ್ತಿ' ಪ್ರದಾನ

ಮೈಸೂರು, ನ.11(ಪಿಎಂ)– ಬೆಂಗಳೂರು ಗಾಯನ ಸಮಾಜದ ವತಿಯಿಂದ ಮೈಸೂರಿನ ಗೀತಾಂಜಲಿ ಸ್ಕೂಲ್ ಆಫ್ ಫೈನ್‌ಆರ್ಟ್ಸ್ ನಿರ್ದೇಶಕಿ ಡಾ.ಗೀತಾ ಸೀತಾರಾಮ್ ಅವರಿಗೆ ಭಾನುವಾರ 'ಸ್ವರಲಿಪಿ ಪ್ರಶಸ್ತಿ' ಮತ್ತು 'ಲಿಪಿ ಪ್ರಜ್ಞೆ' ಬಿರುದು ನೀಡಿ ಗೌರವಿಸಲಾಯಿತು.



ಬೆಂಗಳೂರು ಗಾಯನ ಸಮಾಜದಲ್ಲಿ ಮೈಸೂರಿನ ಗೀತಾಂಜಲಿ ಸ್ಕೂಲ್ ಆಫ್ ಫೈನ್‌ಆರ್ಟ್ಸ್ ನಿರ್ದೇಶಕಿ ಡಾ.ಗೀತಾ ಸೀತಾರಾಮ್ ಅವರಿಗೆ 'ಸ್ವರಲಿಪಿ ಪ್ರಶಸ್ತಿ' ಮತ್ತು 'ಲಿಪಿ ಪ್ರಜ್ಞೆ' ಬಿರುದು ನೀಡಿ ಗೌರವಿಸಲಾಯಿತು.

ಬೆಂಗಳೂರಿನ ಕೆಆರ್ ರಸ್ತೆಯಲ್ಲಿರುವ ಗಾಯನ ಸಮಾಜದ ಸಭಾಂಗಣದಲ್ಲಿ ನಡೆದ 54ನೇ ಸಂಗೀತ ಸಮ್ಮೇಳನದಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಪರಿಗಣಿಸಿ ಡಾ.ಗೀತಾ ಸೀತಾರಾಮ್ ಅವರಿಗೆ ಈ ಗೌರವ ನೀಡಲಾಯಿತು.

ಮೈಸೂರಿನ ಡಾ.ಗೀತಾ ಸೀತಾರಾಮ್ ಅವರು 1978ರಿಂದ ಮೈಸೂರಿನ ಕೇಂದ್ರೀಯ ಆಹಾರ ಸಂಶೋದನಾಲಯದಲ್ಲಿ ಗ್ರಂಥ ವಿಜ್ಞಾನಿ ಮತ್ತು ಮುಖ್ಯ ಗ್ರಂಥಾಲಯಾಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದಾರೆ.

ಕರ್ನಾಟಕದ 42ನೇ ವಾಗ್ಗೇಯಕಾರರಾಗಿರುವ ಡಾ.ಗೀತಾ ಸೀತಾರಾಮ್ ಅವರು ಶಾಸ್ತ್ರೀಯ ಸಂಗೀತ ಮತ್ತು ಈ ಕುರಿತ ಸಾಹಿತ್ಯ ರಚನೆಯಲ್ಲಿ ವಿಶೇಷ ಕೆಲಸ ಮಾಡಿದ್ದಾರೆ. ಇವರ ಸಾಹಿತ್ಯ ಕೃಷಿಯನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಬೆಂಗಳೂರು ವತಿಯಿಂದ ಪುಸ್ತಕವಾಗಿ ಪ್ರಕಟಿಸಲಾಗಿದೆ. ಐದು ಧ್ವನಿ ಸುರಳಿಯಲ್ಲಿ ಸ್ವತಃ ಹಾಡಿರುವ ಇವರು, 6 ಹೊಸ ರಾಗಗಳ ಕೊಡುಗೆ ನೀಡಿದ್ದಾರೆ.

2017ರಲ್ಲಿ ನಾಟ್ಯ ಸಾಹಿತ್ಯ ಶಾರದೆ ಬಿರುದು ಇವರಿಗೆ ಲಭಿಸಿದೆ. 10 ಕಾದಂಬರಿ, ನಾಲ್ಕು ಕಥಾ ಸಂಕಲನಗಳು, ಹಾಸ್ಯ ಲೇಖನಗಳನ್ನು ಇವರು ರಚಿಸಿದ್ದಾರೆ. 6 ನಾಟಕಗಳ ರಚನೆ ಸೇರಿದಂತೆ ಶಿಶು ಸಾಹಿತ್ಯ, ಪ್ರವಾಸ ಕಥನ, ವೈಚಾರಿಕ ಪ್ರಬಂಧಗಳೂ ಇವರ ಲೇಖನಿಯಿಂದ ಮೂಡಿಬಂದಿವೆ.

ಶ್ರೀ ಯದುಗಿರಿ ಯತಿರಾಜ್ ನಾರಾಯಣ ಜೀಯರ್ ಸ್ವಾಮೀಜಿಯವರು ಸಮಾರಂಭದಲ್ಲಿ ಸಾನಿಧ್ಯ ವಹಿಸಿದ್ದರು. ಗಾಯನ ಸಮಾಜದ ಪದಾಧಿಕಾರಿಗಳು ಸೇರಿದಂತೆ ಮತ್ತಿತರರು ಹಾಜರಿದ್ದರು.

ಮತಯಾಚನೆ...



ಚನ್ನಪಟ್ಟಣ ಉಪಚುನಾವಣೆಯ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರವಾಗಿ ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಸಂಘದ ಸದಸ್ಯರಾದ ಮೂರ್ತಿ, ಚಂದ್ರಶೇಖರ್, ಶ್ರೀನಿವಾಸ್, ನಾಗರಾಜು, ರಮೇಶ್‌ಕುಮಾರ್ ಮತಯಾಚನೆ ನಡೆಸಿದರು.

ಒನಕೆ ಓಬವ್ವ ಜಯಂತಿ ಆಚರಣೆ



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಪ್ರಜ್ಞಾವಂತ ನಾಗರಿಕ ವೇದಿಕೆ ವತಿಯಿಂದ ವೀರ ವನಿತೆ ಒನಕೆ ಓಬವ್ವ ಅವರ ಜಯಂತಿ ಕಾರ್ಯಕ್ರಮದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು. ಈ ವೇಳೆ ಮನೋರೋಗ ತಜ್ಞರಾದ ಡಾ.ರೇಖಾ, ಬಿಜೆಪಿ ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾರಾಜ್, ನಗರ ಪಾಲಿಕೆ ಮಾಜಿ ಸದಸ್ಯರಾದ ಪ್ರಮೀಳಾ ಭರತ್, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಡ್ಡಿಕೆರೆ ಗೋಪಾಲ್, ಮಾಜಿ ಮುಡಾ ಸದಸ್ಯರಾದ ನವೀನ್ ಕುಮಾರ್, ಜೆಡಿಎಸ್ ಕಾರ್ಯಾಧ್ಯಕ್ಷ ಎಸ್.ಪ್ರಕಾಶ್ ಪ್ರಿಯದರ್ಶನ, ಸಹನಗೌಡ, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಮ ಅಯ್ಯಂಗಾರ್, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೊಳ ಜಗದೀಶ್, ಚಕ್ರಪಾಣಿ, ಸಚಿಂದ್ರ ವಿಘ್ನೇಶ್ವರ ಭಟ್, ಸುದರ್ಶನ್, ಶ್ರೀನಿವಾಸ್, ಚರಣ್, ರಾಮು, ನಾಗೇಶ್ ಯಾದವ್, ಸುಕನ್ಯ, ನಾಗಮಣಿ, ಮಹಾನ್ ಶ್ರೇಯಸ್ ಇನ್ನಿತರರು ಭಾಗವಹಿಸಿದ್ದರು.

ಮೈಸೂರು ಪೊಲೀಸರಿಂದ ಆರೋಪಿಗಳ ಪರೇಡ್




ಮೈಸೂರಿನಲ್ಲಿ ಸೋಮವಾರ ಎನ್‌ಡಿಪಿಎಸ್ ಪ್ರಕರಣಗಳ ಆರೋಪಿಗಳ ಪರೇಡ್ ನಡೆಸಲಾಯಿತು.

ಮೈಸೂರು, ನ.11(ಎಸ್‌ಬಿಡಿ)– ಮೈಸೂರು ನಗರ ಪೊಲೀಸರು, ಎನ್‌ಡಿಪಿಎಸ್ ಕಾಯ್ದೆ ಪ್ರಕರಣಗಳ ಆರೋಪಿಗಳ ಪರೇಡ್ ನಡೆಸಿದರು. ನಗರದ ಸಿಎಆರ್ ಮೈದಾನದಲ್ಲಿ ಸೋಮವಾರ ನಡೆಸಲಾದ ಪರೇಡ್‌ನಲ್ಲಿ ಮಾದಕ ದ್ರವ್ಯ ಮಾರಾಟ, ಸಾಗಾಣಿಕೆ ಮತ್ತು ದಾಸ್ತಾನು ಸಂಬಂಧ ಎನ್‌ಡಿಪಿಎಸ್ ಕಾಯ್ದೆ ಅಡಿಯಲ್ಲಿ ಕಳೆದ 10 ವರ್ಷಗಳಲ್ಲಿ ದಾಖಲಾದ ಪ್ರಕರಣಗಳ 110 ಆರೋಪಿಗಳು ಹಾಜರಿದ್ದರು. ನಗರ ಕಾನೂನು–ಸುವ್ಯವಸ್ಥೆ ಡಿಸಿಪಿ ಮುತ್ತುರಾಜು, ಅಪರಾಧ–ಸಂಚಾರ ಡಿಸಿಪಿ ಎಸ್.ಜಾಹ್ನವಿ, ಎಸಿಪಿ ಶಾಂತಮಲ್ಲಪ್ಪ ಇನ್ನಿತರ ಅಧಿಕಾರಿಗಳು, ಆರೋಪಿಗಳ ವಿಚಾರಣೆ ನಡೆಸಿ, ಅವರ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದರಲ್ಲದೆ, ಮತ್ತೆ ಇಂತಹ ಕೃತ್ಯಗಳಲ್ಲಿ ಭಾಗಿಯಾದರೆ ಕಠಿಣ ಕಾನೂನು ಕ್ರಮ ಜರುಗಿಸುವುದಾಗಿ ಎಚ್ಚರಿಕೆ ನೀಡಿದರು.

ಇಂದು ಕ್ವೀನ್ಸ್ ಆನ್ ದಿ ಗ್ರೀನ್ಸ್ ಮಹಿಳಾ ಗಾಲ್ಫ್ ಪಂದ್ಯಾವಳಿ

ಮೈಸೂರು, ನ.11(ಪಿಎಂ)– ಗಾಲ್ಫಿಂಗ್ ವುಮೆನ್ಸ್ ಅಸೋಸಿಯೇಷನ್, ಜೆಡಬ್ಲ್ಯುಜಿಸಿ ಮೈಸೂರು ಜಂಟಿ ಆಶ್ರಯದಲ್ಲಿ ನ.12ರಂದು ಜೆಡಬ್ಲ್ಯುಜಿಸಿ ಆವರಣದಲ್ಲಿ 'ಕ್ವೀನ್ಸ್ ಆನ್ ದಿ ಗ್ರೀನ್ಸ್ ಶೀರ್ಷಿಕೆಯಡಿ ಮಹಿಳಾ ಗಾಲ್ಫ್ ಪಂದ್ಯಾವಳಿಯ ಮೊದಲ ಆವೃತ್ತಿ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 11ಕ್ಕೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಪಂದ್ಯಾವಳಿಗೆ ಚಾಲನೆ ನೀಡಲಿದ್ದಾರೆ. ಸುಮಾರು 40 ಮಹಿಳಾ ಗಾಲ್ಫ್ ಆಟಗಾರರು ಭಾಗವಹಿಸುವ ನಿರೀಕ್ಷೆ ಇದೆ.

ಇಂದು, ನಾಳೆ ನೀರು ಸರಬರಾಜು ವ್ಯತ್ಯಯ



ಮಂಡ್ಯ, ನ.11– ಕೊಳವೆ ಮಾರ್ಗದ ದುರಸ್ಥಿ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ನ.12 ಮತ್ತು 13 ರಂದು ಮಂಡ್ಯ ನಗರದಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಡಾ.ಎಂ.ಎಲ್.ರಾಜೇಂದ್ರ ಪ್ರಸಾದ್‌ಗೆ ಜಿಲ್ಲಾ ಕನ್ನಡ ರಾಜ್ಯೋತ್ಸವ ಪುರಸ್ಕಾರ ಪ್ರದಾನ



ಡಾ.ಎಂ.ಎಲ್.ರಾಜೇಂದ್ರ ಪ್ರಸಾದ್ ಅವರಿಗೆ ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪುರಸ್ಕಾರ ನೀಡಲಾಯಿತು.

ಮೈಸೂರು, ನ.11(ಪಿಎಂ)– ಜೆಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜಿನ ರೀಡರ್ ಡಾ.ಎಂ.ಎಲ್. ರಾಜೇಂದ್ರ ಪ್ರಸಾದ್ ಅವರಿಗೆ ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಮಟ್ಟದ ಕನ್ನಡ ರಾಜ್ಯೋತ್ಸವ ಪುರಸ್ಕಾರ ನೀಡಲಾಯಿತು.

ಮೈಸೂರಿನ ಓವೆಲ್ ಮೈದಾನದಲ್ಲಿ ನಡೆದ ಕನ್ನಡ ರಾಜ್ಯೋತ್ಸವದಲ್ಲಿ ಡಾ.ಎಂ.ಎಲ್.ರಾಜೇಂದ್ರ ಪ್ರಸಾದ್ ಅವರಿಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪುರಸ್ಕಾರ ನೀಡಿ ಗೌರವಿಸಿದರು. ಡಾ.ಎಂ.ಎಲ್. ರಾಜೇಂದ್ರ ಪ್ರಸಾದ್ ಅವರು 14 ವರ್ಷಗಳಿಂದ ವೃತ್ತಿಯಲ್ಲಿ ಜೆಎಸ್‌ಎಸ್ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಅಸೋಸಿಯೇಟ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದು, ಪ್ರವೃತ್ತಿಯಲ್ಲಿ ಯೋಗ, ಕರಾಟೆಯಲ್ಲಿ ತರಬೇತಿ ಪಡೆದು, 'ರೇಸ್ ಶೋಟೋಕನ್ ಕರಾಟೆ ಅಂಡ್ ಕಿಕ್ ಬಾಕ್ಸಿಂಗ್ ಅಕಾಡೆಮಿ' ಎಂಬ ಸಂಸ್ಥೆ ಸ್ಥಾಪಿಸಿ ನೂರಾರು ವಿದ್ಯಾರ್ಥಿಗಳಿಗೆ ಕರಾಟೆ ಕಲಿಸುತ್ತಿದ್ದಾರೆ. ಜೊತೆಗೆ ಯೋಗ ತರಬೇತಿ ನೀಡುತ್ತಿದ್ದಾರೆ. 2013ರಲ್ಲಿ ಕರಾಟೆಯಲ್ಲಿ ಬ್ಲ್ಯಾಕ್ ಬೆಲ್ಟ್ ಪಡೆದಿರುವ ಇವರು, 10ಕ್ಕೂ ಹೆಚ್ಚು ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಭಾಗವಹಿಸಿ ಪ್ರಥಮ ಹಾಗೂ ದ್ವಿತೀಯ ಬಹುಮಾನ ಪಡೆದಿದ್ದಾರೆ. ಇವರು ಖ್ಯಾತ ಪ್ರಕಾಶಕ ಹಾಗೂ ರಾಜೇಂದ್ರ ಪ್ರಿಂಟರ್ಸ್‌ನ ಮಾಲೀಕರಾದ ಲೋಕಪ್ಪನವರ ಪುತ್ರ.

ನಿಧನ

ಸಿವಿಲ್ ಇಂಜಿನಿಯರ್ ಜೆ.ಎಸ್.ಚಂದ್ರಶೇಖರ್



ಮೈಸೂರು, ನ.11– ನಗರದ ಸರಸ್ವತಿಪುರಂ ನಿವಾಸಿ ಹಾಗೂ ಸಿವಿಲ್ ಇಂಜಿನಿಯರ್ ಜೆ.ಎಸ್. ಚಂದ್ರಶೇಖರ್ (57 ವರ್ಷ) ಹೃದಯಾಘಾತದಿಂದ ಸೋಮವಾರ ಬೆಳಗಿನ ಜಾವ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಶ್ರೀಮತಿ ಲತಾ ಚಂದ್ರಶೇಖರ್, ಮಕ್ಕಳಾದ ಉಪಾಸನ ಚಂದ್ರಶೇಖರ್, ನಮ್ರತಾ ಚಂದ್ರಶೇಖರ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಇಂದು (ಸೋಮವಾರ) ಮಧ್ಯಾಹ್ನ ಜಯನಗರದ ಕಾವೇರಿ ಕಾಲೇಜು ಪಕ್ಕದಲ್ಲಿರುವ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶ್ರೀಮತಿ ಸರೋಜಾರಾವ್



ಮೈಸೂರು, ನ. 11– ಮೈಸೂರಿನ ವಿವೇಕಾನಂದ ವೃತ್ತದ ನಿವಾಸಿ ಶ್ರೀಮತಿ ಸರೋಜಾ ರಾವ್ (82) ಸೋಮವಾರ ನಿಧನರಾದರು. ಅವರು ಪುತ್ರ ಬಿಜೆಪಿಯ ಹಿರಿಯ ಸಕ್ರಿಯ ಕಾರ್ಯಕರ್ತ ಪ್ರಸಾದ್ (ಸೀಮಾ ಪಟ್ಟಿ– ಮೈಸೂರು ಮಹಾನಗರಪಾಲಿಕೆಯ ಮಾಜಿ ಸದಸ್ಯರು), ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಚಾಮುಂಡಿ ಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್.ಬಸವರಾಜ್



ಮೈಸೂರು, ನ.11–ಮೈಸೂರಿನ ಎನ್.ಆರ್.ಮೊಹಲ್ಲಾದ ಲೇಟ್ ಗಾರೆ ರಾಮಯ್ಯ ಅವರ ಪುತ್ರ ಆರ್.ಬಸವರಾಜ್(78) ಅವರು ಸೋಮವಾರ ನಿಧನರಾದರು.

ಇವರು ಪತ್ನಿ ಜಯಮ್ಮ, ಪುತ್ರ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮಂಗಳವಾರ ಮಧ್ಯಾಹ್ನ 1ಕ್ಕೆ ಎನ್.ಆರ್.ಮೊಹಲ್ಲಾ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ನ.17ರವರೆಗೆ ನೆಕ್ಸಸ್ ಸೆಂಟರ್ ಸಿಟಿಯಲ್ಲಿ ಪುಸ್ತಕ ಮೇಳ

ಮೈಸೂರು, ನ. 11– ಪುಸ್ತಕಗಳನ್ನು ಕಡಿಮೆ ದರದಲ್ಲಿ ಸುಲಭವಾಗಿ ಲಭ್ಯವಾಗಿಸುವ ಕಿತಾಬ್ ಲವರ್ಸ್, ನವೆಂಬರ್ 9 ರಿಂದ 17 ರವರೆಗೆ ನೆಕ್ಸಸ್ ಸೆಂಟರ್ ಸಿಟಿಯಲ್ಲಿ 9 ದಿನಗಳ ಕಾಲ ಪುಸ್ತಕ ಮೇಳವನ್ನು ಆಯೋಜಿಸಿದೆ. 20ಕ್ಕೂ ಹೆಚ್ಚು ಪ್ರಕಾರಗಳ 10 ಲಕ್ಷಕ್ಕೂ ಅಧಿಕ ಹೊಸ ಮತ್ತು ಹಳೆಯ ಪುಸ್ತಕಗಳನ್ನು ಒಳಗೊಂಡಿರುವ ಈ ಮೇಳವು ಪುಸ್ತಕ ಪ್ರಿಯರನ್ನು ಆಕರ್ಷಿಸಲು ಸಜ್ಜಾಗಿದೆ.

ಈ ಮೇಳದ ವಿಶಿಷ್ಟತೆಯೆ 'ಲೋಡ್ ದ ಬಾಕ್ಸ್' ಪರಿಕಲ್ಪನೆ. ಪುಸ್ತಕ ಪ್ರಿಯರು ತಮ್ಮ ಓದುವ ಒತ್ತಾಸೆ ತಣಿಸಲು ಪ್ರೇರಿತವಾಗಲು ಈ ಪರಿಕಲ್ಪನೆಯನ್ನು ವಿನ್ಯಾಸಗೊಳಿಸಲಾಗಿದೆ. ಭೇಟಿ ನೀಡುವವರು ನಿಗದಿತ ದರದಲ್ಲಿ ಬಾಕ್ಸ್‌ಗಳನ್ನು (ರೂ. 1200ರಿಂದ ರೂ.3000 ರವರೆಗೆ) ಖರೀದಿಸಿ. ಅದು ತುಂಬುವಷ್ಟು ಪುಸ್ತಕಗಳನ್ನು ತೆಗೆದುಕೊಳ್ಳಬಹುದಾಗಿದೆ.

ಈ ಕುರಿತು ಕಿತಾಬ್ ಲವರ್ಸ್‌ನ ಸಹ ಸ್ಥಾಪಕ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಹುಲ್ ಪಾಂಡೆ ಮಾತನಾಡಿ, ಮೈಸೂರಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದಕ್ಕೆ ಅತ್ಯಂತ ಸಂತೋಷವಾಗುತ್ತಿದೆ. ಇದು ಮೈಸೂರಿನಲ್ಲಿ ನಮ್ಮ ಐದನೇ ಮೇಳವಾಗಿದ್ದು, ಪ್ರತಿದಿನವೂ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ನಮ್ಮ ಮೇಳವು ಎಲ್ಲ ವಯೋಮಾನದ, ಆಸಕ್ತಿಯ ಓದುಗರಿಗೆ ತಕ್ಕಂತೆ ಅತ್ಯಂತ ಕಡಿಮೆ ದರದಲ್ಲಿ ಪುಸ್ತಕಗಳನ್ನು ಒದಗಿಸುತ್ತದೆ. ಮಿಸ್ಟರಿ, ಸ್ವಯಂ ಸಹಾಯ, ಪ್ರೀತಿ ಕಥೆಗಳು, ಕಾಲ್ಪನಿಕ ಕಥೆಗಳು ಅಥವಾ ಅಕಾಲ್ಪನಿಕ ವಿಷಯಗಳು ಇತ್ಯಾದಿ ಪುಸ್ತಕಗಳು ಇವೆ ಎಂದು ಹೇಳಿದರು.

ಬೆಂಗಳೂರು–ಮಂಗಳೂರು ಹೈ–ಸ್ಪೀಡ್ ರೋಡ್

ಎಲ್ಲಾ ಕಾಲಕ್ಕೂ ಸಲ್ಲುವ ರಸ್ತೆ ನಿರ್ಮಾಣಕ್ಕೆ ಒಂಭತ್ತು ಸಂಸ್ಥೆಗಳಿಂದ ತಾಂತ್ರಿಕ ಬಿಡ್ ಸಲ್ಲಿಕೆ; 2028ರಲ್ಲಿ ಕಾಮಗಾರಿ ಆರಂಭ ನಿರೀಕ್ಷೆ



ಬೆಂಗಳೂರು, ನ.11– ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ದಕ್ಷಿಣ ಮತ್ತು ಕರಾವಳಿ ಕರ್ನಾಟಕದ ನಡುವೆ ತಡೆರಹಿತ, ಎಲ್ಲಾ ಹವಾಮಾನ ಕಾಲದಲ್ಲೂ ರಸ್ತೆ ಸಂಪರ್ಕವನ್ನು ಒದಗಿಸುವ ಮಹತ್ವಾಕಾಂಕ್ಷೆಯ ಯೋಜನೆಗೆ ಮುಂದಾಗಿದೆ. ಬೆಂಗಳೂರು ಮತ್ತು ಮಂಗಳೂರನ್ನು ಸಂಪರ್ಕಿಸಲು ಎಕ್ಸ್‌ಪ್ರೆಸ್‌ವೇ (ಹೈ–ಸ್ಪೀಡ್ ಕಾರಿಡಾರ್) ನಿರ್ಮಿಸಲು ಯೋಜಿಸಲಿದೆ.

ಈ ಯೋಜನೆ ರಿಯಾಲಿಟಿ ಆಗುವ ಮುನ್ನ ಅದಕ್ಕಾಗಿ ಕಾಂಕ್ರೀಟ್ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಜುಲೈನಲ್ಲಿ ಸಚಿವಾಲಯವು ವಿವರವಾದ ಯೋಜನಾ ವರದಿಯನ್ನು (ಡಿಪಿಆರ್) ತಯಾರಿಸಲು ಸಲಹಾ ಸಂಸ್ಥೆಯನ್ನು ಆಯ್ಕೆ ಮಾಡಲು ಬಿಡ್‌ಗಳನ್ನು ಆಹ್ವಾನಿಸಿತು. ನ.4ರಂದು, ಗಡುವು ಮುಗಿದಾಗ, ಒಂಬತ್ತು ಸಂಸ್ಥೆಗಳು ತಾಂತ್ರಿಕ ಬಿಡ್‌ಗಳನ್ನು ಸಲ್ಲಿಸಿದವು. ಸಚಿವಾಲಯವು ಮುಂದಿನ ವರ್ಷ ಗುತ್ತಿಗೆ ನೀಡುವ ನಿರೀಕ್ಷೆಯಿದೆ. ವಿಜೇತ ಗುತ್ತಿಗೆದಾರರು ಡಿಪಿಆರ್ ತಯಾರಿಸಲು 540 ದಿನಗಳನ್ನು ಹೊಂದಿರುತ್ತಾರೆ ಮತ್ತು ನಿರ್ಮಾಣವು 2028ರಲ್ಲಿ ಪ್ರಾರಂಭವಾಗುವ ನಿರೀಕ್ಷೆಯಿದೆ.

335 ಕಿಲೋಮೀಟರ್ ದೂರದ ರಸ್ತೆಯು ಚತುಷ್ಪಥ ಅಥವಾ ಷಟ್ಪಥ ಆಗಿರುವ ಸಾಧ್ಯತೆ ಇದೆ. ಇದು ಹಾಸನದ ಮೂಲಕ ಹಾದುಹೋಗುತ್ತದೆ ಮತ್ತು ಪಶ್ಚಿಮ ಘಟ್ಟಗಳ ಕಠಿಣ ಭೂಪ್ರದೇಶದ ಸುತ್ತಲೂ ಹಲವಾರು ಬೈಪಾಸ್‌ಗಳನ್ನು ಹೊಂದಿರುತ್ತದೆ. ಈ ಎಕ್ಸ್‌ಪ್ರೆಸ್‌ವೇ ನಿರ್ಮಾಣವಾದರೆ ಬೆಂಗಳೂರು ಮತ್ತು ಮಂಗಳೂರು ನಡುವಿನ ಪ್ರಯಾಣದ ಸಮಯವು ಪ್ರಸ್ತುತ 7–8 ಗಂಟೆಗಳಿಂದ ಗಮನಾರ್ಹವಾಗಿ ಕಡಿಮೆಯಾಗುವ ನಿರೀಕ್ಷೆಯಿದೆ.

ಈ ಯೋಜನೆಗೆ ಒತ್ತಾಯಿಸಿದವರಲ್ಲಿ ದಕ್ಷಿಣ ಕನ್ನಡದ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಕೂಡ ಸೇರಿದ್ದು, ಈ ಹೈಸ್ಪೀಡ್ ಕಾರಿಡಾರ್ ಮಂಗಳೂರಿಗೆ ದೊಡ್ಡ ಅವಶ್ಯಕತೆಯಾಗಿದೆ ಎಂದಿದ್ದಾರೆ. ಯೋಜನೆಯು ಇನ್ನೂ ಪರಿಕಲ್ಪನಾ ಹಂತದಲ್ಲಿದೆ ಮತ್ತು ಅದಕ್ಕಾಗಿ ನಾವು ಒತ್ತಾಯಿಸುತ್ತಿದ್ದೇವೆ ಎಂದಿದ್ದಾರೆ.

ಈ ಎಕ್ಸ್‌ಪ್ರೆಸ್‌ವೇ ಯೋಜನೆಗೆ ಸಂಬಂಧಿಸಿದ ಪರಿಸರ ಮತ್ತು ಆರ್ಥಿಕ ಸವಾಲು ಇರುವುದನ್ನು ಒಪ್ಪಿಕೊಂಡ ಅವರು, ಮಾರ್ಗ ಜೋಡಣೆಯನ್ನು ಸರಿಪಡಿಸಬೇಕಾಗಿದೆ. ನಮಗೆ ಹಲವಾರು ಬೈಪಾಸ್‌ಗಳು ಬೇಕಾಗುತ್ತವೆ. ಹಣಕಾಸು ಮಾದರಿಯನ್ನು ನಿರ್ಧರಿಸುವುದು ಮುಂದಿನ ಸವಾಲಾಗಿದೆ. ನಾವು ಟೋಲ್ ಶುಲ್ಕದ ಬಗ್ಗೆಯೂ ಚರ್ಚಿಸಬೇಕಾಗಿದೆ. ಅದನ್ನು ಆರ್ಥಿಕವಾಗಿ ಸಕ್ರಗೊಳಿಸಲು, ನಾವು ಟೌನ್‌ಶಿಪ್‌ಗಳನ್ನು ನಿರ್ಮಿಸಬಹುದು ಎಂದು ವಿವರಿಸಿದ್ದಾರೆ.

ಡಿಪಿಆರ್ ಸಿದ್ಧಪಡಿಸಿದ ಬಳಿಕವಷ್ಟೇ ಮಾರ್ಗ ಜೋಡಣೆ ಬಗ್ಗೆ ತಿಳಿಯಲಿದೆ ಎಂದು ಬೆಂಗಳೂರಿನ ಎನ್‌ಎಚ್‌ಎಐ ಪ್ರಾದೇಶಿಕ ಅಧಿಕಾರಿ ವಿಲಾಸ್ ಪಿ ಬ್ರಹ್ಮಂಕರ್ ಹೇಳಿದ್ದಾರೆ. ಅಸ್ತಿತ್ವದಲ್ಲಿರುವ ಬೆಂಗಳೂರು–ಮಂಗಳೂರು ರಸ್ತೆ (ರಾಷ್ಟ್ರೀಯ ಹೆದ್ದಾರಿ 75) ಭೂಕುಸಿತಕ್ಕೆ ಗುರಿಯಾಗುತ್ತದೆ ಮತ್ತು ಮಳೆಯ ಸಮಯದಲ್ಲಿ ಆಗಾಗ್ಗೆ ಮುಚ್ಚಲ್ಪಡುತ್ತದೆ. ಇದು ಬೆಂಗಳೂರು ಮತ್ತು ಹಾಸನ ನಡುವೆ 6 ಲೇನ್‌ಗಳನ್ನು ಹೊಂದಿದ್ದರೆ, ನಂತರ ಅದು ಕಿರಿದಾಗುತ್ತದೆ. ಪ್ರಸ್ತುತ ಹಾಸನ–ಸಕಲೇಶಪುರ–ಮಾರನಹಳ್ಳಿ ವಿಭಾಗವನ್ನು (45 ಕಿಮೀ) ಚತುಷ್ಪಥಗೊಳಿಸುತ್ತಿದೆ. ನಾವು ಚತುಷ್ಪಥ 35 ಕಿಮೀ ಹೊಂದಿದ್ದೇವೆ ಮತ್ತು ಉಳಿದ 10 ಕಿಮೀ ಕಾಮಗಾರಿ ಪ್ರಗತಿಯಲ್ಲಿದೆ. ಜೂನ್ 2025ರೊಳಗೆ ಇದು ಪೂರ್ಣಗೊಳ್ಳಲಿದೆ ಎಂದು ಹೇಳಿದ್ದಾರೆ.

ಬಂಟ್ವಾಳ–ಮಂಗಳೂರು ವಿಭಾಗವೂ ನಾಲ್ಕು ಪಥಗಳನ್ನು ಹೊಂದಿದೆ. ಶಿರಾಡಿ ಘಾಟ್ ವಿಭಾಗವು ಏಕೈಕ ಅಡಚಣೆಯಾಗಲಿದೆ, ಅಲ್ಲಿ ಫ್ಲೈಓವರ್‌ಗಳು ಮತ್ತು ಸುರಂಗಗಳ ಹೈಬ್ರಿಡ್ ಅನ್ನು ನಿರ್ಮಿಸುವ ಮೂಲಕ ಇನ್ನೂ ಎರಡು ಲೇನ್‌ಗಳನ್ನು ಸೇರಿಸಲು ಎನ್‌ಎಚ್‌ಎಐ ಯೋಜಿಸಿದೆ ಎಂದು ವಿಲಾಸ್ ಪಿ ಬ್ರಹ್ಮಂಕರ್ ವಿವರಿಸಿದರು.

ರಂಗಬೆಳಕು ಕುರಿತ ಪ್ರಾತ್ಯಕ್ಷಿಕೆ ಕಾರ್ಯಕ್ರಮ



ಮೈಸೂರಿನ ಲಲಿತ ಕಲಾ ಕಾಲೇಜಲ್ಲಿ 'ರಂಗಬೆಳಕು' ಕುರಿತ ಪ್ರಾತ್ಯಕ್ಷಿಕೆಗೆ ಅಂತರ ರಾಷ್ಟ್ರೀಯ ಖ್ಯಾತಿಯ ಪ್ರಸಿದ್ಧ ವಯೋಲಿನ್ ವಾದಕ ಮೈಸೂರು ಮಂಜುನಾಥ್ ಚಾಲನೆ ನೀಡಿದರು.

ಮೈಸೂರು, ನ. 11–ಮೈಸೂರಿನ ಲಲಿತ ಕಲಾ ಕಾಲೇಜು ಸಭಾಂಗಣದಲ್ಲಿ 'ರಂಗ ಬೆಳಕು' ಕುರಿತ ಪ್ರಾತ್ಯಕ್ಷಿಕೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅಂತರ ರಾಷ್ಟ್ರೀಯ ಖ್ಯಾತಿಯ ಪ್ರಸಿದ್ಧ ವಯೋಲಿನ್ ವಾದಕ ಮೈಸೂರು ಮಂಜುನಾಥ್ ಸ್ವಿಚ್‌ನ್ನು ಒತ್ತುವ ಮೂಲಕ ಪ್ರಾತ್ಯಕ್ಷಿಕೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಕತ್ತಲೆಯನ್ನು ಓಡಿಸುವ ಬೆಳಕು, ತಾನು ದೃಷ್ಟಿ ಹರಿಸಿದ ಎಲ್ಲಾ ಚರಾಚರ ವಸ್ತುಗಳನ್ನು ಬೆಳಗುವಂತೆ ಮಾಡುತ್ತದೆ. ಬೆಳಕು ನಮ್ಮ ಮನಸ್ಸಿನ ಮೇಲೆ ಬೀರುವ ಪ್ರಭಾವ ಅಪಾರ. ಯಾವುದೇ ಕಲಾ ಪ್ರಕಾರದಲ್ಲಿ ಬೆಳಕಿನ ವಿನ್ಯಾಸ ಬಹಳ ಮುಖ್ಯಪಾತ್ರ ವಹಿಸುತ್ತದೆ. ಒಂದು ದೃಶ್ಯವನ್ನು, ಇಡೀ ಪರಿಸರವನ್ನು ಕಟ್ಟಿಕೊಡಲು ಬೆಳಕು ಬೇಕೇ ಬೇಕು. ಸಂಗೀತ ಕಛೇರಿಗಳಲ್ಲಿಯೂ ಹಾಡಿನ ಭಾವವನ್ನು ತೋರಿಸಲು ಸಂಗೀತಗಾರರ ಮೂಡನ್ನು ಕಟ್ಟಿಕೊಡಲು ಬೆಳಕಿನ ವಿನ್ಯಾಸ ಅತೀ ಮುಖ್ಯ ಎಂದು ತಿಳಿಸಿದರು.

ಬೆಳಕಿನ ವಿನ್ಯಾಸಕಾರ ಮಹೇಶ್ ಕಲ್ಲತ್ತಿ ಅವರು ರಂಗಭೂಮಿಯಲ್ಲಿ ಹಿಂದಿನಿಂದ ಹಿಡಿದು ಇಂದಿನ ಆಧುನಿಕ ಯುಗದಲ್ಲಿ ಬಳಸುವ ಬೆಳಕಿನ ಸಾಧನಗಳನ್ನು ವಿದ್ಯಾರ್ಥಿಗಳಿಗೆ ಸ್ಲೈಡ್‌ಶೋ ಮೂಲಕ ತೋರಿಸುತ್ತಾ ವಿವರಣೆ ನೀಡಿದರು. ನಂತರ ರಂಗಮಂದಿರದಲ್ಲಿ ಕಟ್ಟಿರುವ ಲೈಟ್‌ಗಳು ಹೇಗೆ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ಖುದ್ದಾಗಿ ಪ್ರಾತ್ಯಕ್ಷಿಕೆ ಮೂಲಕ ತೋರಿಸಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ರಂಗತಜ್ಞ ಅರಸೀಕೆರೆ ಯೋಗಾನಂದ, ಇಂತಹ ಪ್ರಾತ್ಯಕ್ಷಿಕೆಗಳಿಂದ ವಿದಾರ್ಥಿಗಳು ನೇರವಾಗಿ ಕಲಿಯಲು ಸಾಧ್ಯವಾಗುವುದರಿಂದ ಮುಂದಿನ ದಿನಗಳಲ್ಲಿ ಇನ್ನು ಹಲವಾರು ವಿಷಯಗಳಲ್ಲಿ ಕಾರ್ಯಕ್ರಮ ನಡೆಸಲಾಗುವುದು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಅನಿತಾ ವಿಮ್ಲ ಬ್ರಾಗ್ಗ್ಸ್‌ವರು ವಿದ್ಯಾರ್ಥಿಗಳು ಬೆಳಕಿನ ವಿನ್ಯಾಸಕಾರರಾಗಿ ರೂಪುಗೊಂಡು ರಂಗಭೂಮಿಗೆ ಅಗತ್ಯವಿರುವ ತಂತ್ರಜ್ಞರ ಸ್ಥಾನವನ್ನು ತುಂಬಲಿ ಎಂದು ಆಶಿಸಿದರು. ನಾಟಕ ಶಿಕ್ಷಕರಾದ ಶ್ರೀ ಮೇಘ ಸಮೀರ್ ಸ್ವಾಗತಿಸಿ, ಕಾರ್ಯಕ್ರಮದ ನಿರೂಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಅಧ್ಯಾಪಕರಾದ ಸುಬ್ಬಲಕ್ಷ್ಮಿ, ಗೀತಾ, ಸೂರ್ಯಪ್ರಭಾ, ನಟರಾಜ ಹಾಗೂ ಕಲಾವಿದರಾದ ಶ್ರೀಕಾಂತ್, ಮಂಜುನಾಥ್ ಸೇರಿದಂತೆ ಸುಮಾರು 80 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಇಂದು ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ನ.11–ಎನ್‌ಜಿಎಸ್ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ವೀರಶೈವ ಸಜ್ಜನ ಸಂಘದ ಸಂಯುಕ್ತ ಆಶ್ರಯದಲ್ಲಿ ನ.12ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಮಂಡಿ ಪೊಲೀಸ್ ಸ್ಟೇಷನ್ ಹತ್ತಿರ, ಮಂಡಿ ಮೊಹಲ್ಲಾದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂಟಪದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ. ಮಾಹಿತಿಗೆ ಎಂ.ಎನ್.ಜೈಪ್ರಕಾಶ್, ಮೊ.99161 55453, 94487 38657, ಹೆಚ್.ಎಸ್.ಬಸವರಾಜ್, ಮೊ. 9448753597 ಸಂಪರ್ಕಿಸಿ.

ಡೊನಾಲ್ಡ್ ಟ್ರಂಪ್ ಹತ್ಯೆ ಸಂಚಿನಲ್ಲಿ ತನ್ನ ಪಾತ್ರ ನಿರಾಕರಿಸಿದ ಇರಾನ್

ಇರಾನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಕೊಲ್ಲುವ ಸಂಚಿನಲ್ಲಿ ಇರಾನ್ ವ್ಯಕ್ತಿಯೊಬ್ಬನ ಮೇಲೆ ಅಮೆರಿಕ ಆರೋಪ ಹೊರಿಸಿದ ಬೆನ್ನಲ್ಲೇ ಇರಾನ್ ಇಂದು ತನ್ನ ಮೇಲಿನ ಆರೋಪಗಳನ್ನು ತಳ್ಳಿಹಾಕಿದೆ. ಇದು ಯುಎಸ್ ಮತ್ತು ಇರಾನ್ ನಡುವಿನ ಸಮಸ್ಯೆಗಳನ್ನು ಸಂಕೀರ್ಣಗೊಳಿಸುವ ಪಿತೂರಿ ಎಂದು ಹೇಳಿದೆ.

ಇರಾನ್‌ನ ವಿದೇಶಾಂಗ ಸಚಿವಾಲಯದ ವಕ್ತಾರ ಎಸ್ಮೈಲ್ ಬಘೈ ಆಪಾದಿತ ಕೊಲೆಯ ಸಂಚಿನಲ್ಲಿ ಭಾಗಿಯಾಗಿರುವುದನ್ನು ನಿರಾಕರಿಸಿದ್ದಾರೆ. ಯುಎಸ್ ನ್ಯಾಯಾಂಗ ಇಲಾಖೆಯ ವರದಿಯನ್ನು ಇರಾನ್ ಸಂಪೂರ್ಣವಾಗಿ ಆಧಾರರಹಿತ ಎಂದು ಹೇಳಿದೆ.

ಈ ರೀತಿಯ ಹಕ್ಕುಗಳನ್ನು ಪುನರಾವರ್ತಿಸುವುದು ಯುಎಸ್ ಮತ್ತು ಇರಾನ್ ನಡುವಿನ ಸಮಸ್ಯೆಗಳನ್ನು ಇನ್ನಷ್ಟು ಜಟಿಲಗೊಳಿಸಲು ಜಿಯೋನಿಸ್ಟ್ ಮತ್ತು ಇರಾನಿಯನ್ ವಿರೋಧಿ ವಲಯಗಳಿಂದ ಆಯೋಜಿಸಲಾದ ದುರುದ್ದೇಶಪೂರಿತ ಪಿತೂರಿ ಎಂದು ಇರಾನ್ ಸರ್ಕಾರ ಹೇಳಿದೆ.

ಪೊಲೀಸ್ ಇಲಾಖೆ ಮೂಲಕ ವಿರೋಧ ಪಕ್ಷದ ನಾಯಕರ ಹತ್ತಿಕ್ಕುವ ಪ್ರಯತ್ನ

- ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಿಡಿನುಡಿ
- ನನ್ನ ಮೇಲಾಯಿತು ಈಗ ಯಡಿಯೂರಪ್ಪ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡುತ್ತಿದ್ದಾರೆ



ಚನ್ನಪಟ್ಟಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತಯಾಚಿಸಿದರು.

ಬೆಂಗಳೂರು, ನ.11(ಕೆಎಂಶಿ)– ವಿರೋಧ ಪಕ್ಷದ ನಾಯಕರನ್ನು ಹತ್ತಿಕ್ಕಲು ಪೊಲೀಸ್ ಇಲಾಖೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಇಂದಿಲ್ಲಿ ಆರೋಪಿಸಿದ್ದಾರೆ.

ನನ್ನ ವಿರುದ್ಧ ಇಲ್ಲಸಲ್ಲದ ಆರೋಪ ಹೊರಿಸಿ ಎಫ್‌ಐಆರ್‌ಗಳನ್ನು ಹಾಕಿಸಿದ ಬೆನ್ನಲ್ಲೇ ಬಿಜೆಪಿ ಹಿರಿಯ ಮುಖಂಡ ಹಾಗೂ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮೇಲೆ ಭ್ರಷ್ಟಾಚಾರ ಆರೋಪ ಹೊರಿಸಿ ಕ್ರಿಮಿನಲ್ ದಾವೆ ಹೂಡಲು ಹೊರಟಿದ್ದಾರೆ ಎಂದು ಗುಡುಗಿದರು.

ನನ್ನ ಸಹೋದ್ಯೋಗಿ ಸಚಿವ ವಿ.ಸೋಮಣ್ಣ ನುಡಿದಿರುವ ಭವಿಷ್ಯದಂತೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರ ಕಳೆದುಕೊಳ್ಳುವ ಕಾಲ ಸನ್ನಿಹಿತವಾಗಿದೆ ಎಂಬುದು ನಿಜ ಎಂದು ಹೇಳಿದರು.

ಅಧಿಕಾರ ಕಳೆದುಕೊಳ್ಳುವ ಮುನ್ನ ತಮ್ಮ ವಿರೋಧಿಗಳ ಮೇಲೆ ಸುಳ್ಳು ಮೊಕದ್ದಮೆಗಳನ್ನು ಹೂಡುವ ಮೂಲಕ ಸೇಡಿನ ರಾಜಕೀಯ ಮಾಡುತ್ತಿದ್ದಾರೆ.

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ನಡೆದ ಸಾರ್ವಜನಿಕ ಸಮಾವೇಶದಲ್ಲಿ ಮಾತನಾಡಿದ ಅವರು, ನಾನಾಗಲೀ, ಯಡಿಯೂರಪ್ಪ ಆಗಲೀ ಅಧಿಕಾರದಲ್ಲಿ ಇದ್ದ ವೇಳೆ ವಿರೋಧಿಗಳ ಮೇಲೆ ಸುಳ್ಳು ಮೊಕದ್ದಮೆಗಳನ್ನು ದಾಖಲಿಸುವ ಕೆಲಸ ಮಾಡಿರಲಿಲ್ಲ. ಆದರೆ, ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ದಿನದಿಂದಲೂ ನಮ್ಮ ಎರಡೂ ಕುಟುಂಬಗಳನ್ನು ರಾಜಕೀಯವಾಗಿ ಮುಗಿಸಲು ಸುಳ್ಳು ಮೊಕದ್ದಮೆಗಳನ್ನು ಹಾಕಿಸುತ್ತಿದ್ದಾರೆ.


ಇವರ ಆಟ ಬಹಳ ದಿನ ನಡೆಯುವುದಿಲ್ಲ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡ ರಾಜ್ಯದ ಜನತೆಗೆ ಕಳುಹಿಸಿರುವ ಸಂದೇಶದಲ್ಲಿ, ಭ್ರಷ್ಟಾಚಾರದಲ್ಲಿ ಮುಳುಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಉಪಚುನಾವಣೆಯಲ್ಲಿ ಬುದ್ಧಿ ಕಲಿಸಲು ಎನ್‌ಡಿಎ ಅಭ್ಯರ್ಥಿಗಳಿಗೆ ಮತ ಹಾಕಿ ಎಂದು ಮತದಾರರಲ್ಲಿ ಮನವಿ ಮಾಡಿದ್ದಾರೆ.

ಇವರದೇ ಆಡಳಿತ ಮುಂದುವರೆದರೆ, ರಾಜ್ಯದ ಜನತೆ ಸಾಲದ ಸುಳಿಗೆ ಸಿಲುಕಬೇಕಾಗುತ್ತದೆ. ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೂ ಸಾಲ ತರುತ್ತಿರುವ ಸಿದ್ದರಾಮಯ್ಯ, ಅಭಿವೃದ್ಧಿಗೆ ಎಲ್ಲಿಂದ ಹಣ ಕ್ರೋಡೀಕರಿಸುತ್ತಾರೆ ಎಂದರು. ಪ್ರಸಕ್ತ ಹಣಕಾಸು ಸಾಲಿನಲ್ಲಿ ಒಂದು ಲಕ್ಷ ಕೋಟಿ ರೂ.ಗಳಿಗೂ ಹೆಚ್ಚು ಸಾಲ ತಂದಿದ್ದಾರೆ, ಮುಂಬರುವ ಫೆಬ್ರವರಿ ವೇಳೆ ಈ ಮೊತ್ತ ದ್ವಿಗುಣಗೊಳ್ಳಲಿದೆ. ಅಭಿವೃದ್ಧಿಗೆ ಗಮನ ಕೊಡದೆ ದ್ವೇಷದ ವಿಷ ಬೀಜ ಬಿತ್ತುವ ಈ ಸರ್ಕಾರ ಬಹಳ ದಿನ ಉಳಿಯುವುದು ಅನುಮಾನ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರವನ್ನು ತೆಗೆಯುವ ಉದ್ದೇಶದಿಂದಲೇ ನಾನು ಮತ್ತು ಯಡಿಯೂರಪ್ಪ ಒಂದಾಗಿದ್ದೇವೆ ಎಂದರು.

ರಾಜ್ಯ ಸರ್ಕಾರ ದಿವಾಳಿಯಾಗಿದೆ

ಯೋಜನೆಗಳಿಗೆ ಹಣ ಇಲ್ಲ; ರಸ್ತೆ ಗುಂಡಿ ಮುಚ್ಚುವ ಯೋಗ್ಯತೆಯೂ ಇಲ್ಲ



ಬೆಂಗಳೂರು, ನ.11(ಕೆಎಂಶಿ)–ಕರ್ನಾಟಕದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದೆ. ಅನೇಕ ಜನಪರ ಯೋಜನೆಗಳನ್ನು ನಿಲ್ಲಿಸಿದ್ದಾರೆ. ಯೋಜನೆಗಳಿಗೆ ಹಣ ಕೊಡುವ ಯೋಗ್ಯತೆ ಇಲ್ಲ. ಸರ್ಕಾರ ದಿವಾಳಿಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಟೀಕಿಸಿದ್ದಾರೆ.

ಚನ್ನಪಟ್ಟಣ ಉಪಚುನಾವಣಾ ಪ್ರಚಾರದಲ್ಲಿ ಮಾತನಾಡಿದ ಅವರು, ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಭಾಗ್ಯಲಕ್ಷ್ಮಿ ಯೋಜನೆ ನಿಲ್ಲಿಸಿದ್ದಾರೆ. ಒಂದು ರಸ್ತೆ ಗುಂಡಿ ಮುಚ್ಚುವ ಯೋಗ್ಯತೆಯೂ ಈ ಸರ್ಕಾರಕ್ಕೆ ಇಲ್ಲ ಎಂದರು.

ಕ್ಷೇತ್ರದಲ್ಲಿ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರನ್ನು ಗೆಲ್ಲಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ತಕ್ಕಪಾಠ ಕಲಿಸಬೇಕು. ಬೊಂಬೆಗಳ ನಾಡಲ್ಲಿ ಕಾಂಗ್ರೆಸ್ ಕೈಗೊಂಬೆಯಾಗಿರುವ ಸಿ.ಪಿ. ಯೋಗೇಶ್ವರ್ ಗೆಲ್ಲುವುದರಿಂದ ಪ್ರಯೋಜನವಿಲ್ಲ. ಕಾಲ ಬದಲಾಗಿದೆ, ಜನ ಎಲ್ಲವನ್ನು ಯೋಚನೆ ಮಾಡುತ್ತಾರೆ. ಕೇಂದ್ರದಲ್ಲಿ ದೇವೇಗೌಡರು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ನಡುವಿನ ಸ್ನೇಹ ಯಾವ ರೀತಿ ಇದೆ ಎಂಬುದು ಎಲ್ಲರಿಗೂ ಗೊತ್ತಿದೆ.

ನಿಖಿಲ್ ಗೆಲುವಿಗೆ ಮನೆ–ಮನೆಗೆ ಹೋಗಿ ಪ್ರಚಾರ ಮಾಡಿ, ಪ್ರಾಮಾಣಿಕ ಕೆಲಸ ಮಾಡಿದರೆ 25 ಸಾವಿರಕ್ಕೂ ಹೆಚ್ಚಿನ ಮತಗಳಿಂದ ಗೆಲ್ಲುತ್ತಾರೆ. ನಿಮ್ಮ ಸೇವೆ ಮಾಡುವುದಕ್ಕೆ ಅವಕಾಶ ಮಾಡಿ ಎಂದು ಮನವಿ ಮಾಡಿದರು.

ಗ್ಯಾರಂಟಿ ನಿಲ್ಲಿಸುವ ಛಾನ್ಸೇ ಇಲ್ಲ



ಬೆಂಗಳೂರು,ನ.11(ಕೆಎಂಶಿ)–ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸಲು ಬಿಜೆಪಿ–ಜೆಡಿಎಸ್ ಹಣೆಯಲ್ಲಿ ಬರೆದಿಲ್ಲ. ಇಂತಹ ಹೇಳಿಕೆಗಳಿಂದ ಜನ ಹುಷಾರಾಗಿರಬೇಕು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇಂದಿಲ್ಲಿ ತಿಳಿಸಿದ್ದಾರೆ.

ನಮ್ಮ ತಾಯಂದಿರ ಬದುಕು ಹಾಗೂ ಸಂಸಾರ ಉತ್ತಮವಾಗಿ ಸಾಗಲಿ ಎಂಬ ಕಾರಣಕ್ಕೆ ನಾವು ಗೃಹಲಕ್ಷ್ಮಿ ಹಣ ನೀಡುತ್ತಿದ್ದೇವೆ. ಇದನ್ನು ತಪ್ಪಿಸಲು ಪ್ರತಿಪಕ್ಷಗಳು ಹೊರಟಿವೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಜನ ನಮ್ಮ ಗ್ಯಾರಂಟಿಗಳು ಹಾಗೂ ಆಡಳಿತವನ್ನು ಒಪ್ಪಿದ್ದು, ಈ ಬಾರಿ ಉಪಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಲಿದೆ ಎಂದರು.

ಬಿಜೆಪಿ ಏನೇ ತಂತ್ರ ಪ್ರಯೋಗಿಸಿದರೂ ವಿಧಾನಸಭೆ ಚುನಾವಣೆಯಲ್ಲಿ ಮತದಾರರು ಬೆಂಬಲ ನೀಡಿದಂತೆ ಈ ಮೂರು ಕ್ಷೇತ್ರಗಳ ಉಪಚುನಾವಣೆಯಲ್ಲೂ ಕಾಂಗ್ರೆಸ್‌ಗೆ ಮತ ಹಾಕಲಿದ್ದಾರೆ. ರಾಜ್ಯ ಅಬಕಾರಿ ಇಲಾಖೆಯಲ್ಲಿ 700 ಕೋಟಿ ರೂ. ವಸೂಲಿ ಮಾಡಲಾಗಿದೆ ಎಂಬ ಪ್ರಧಾನಿ ನರೇಂದ್ರ ಮೋದಿ ಆರೋಪ ಸುಳ್ಳು, ಅವರನ್ನು ಯಾರೋ ದಾರಿ ತಪ್ಪಿಸಿದ್ದಾರೆ. ಆರೋಪ ಸಾಬೀತುಪಡಿಸಿದರೆ ರಾಜಕೀಯ ತ್ಯಜಿಸುವುದಾಗಿ ಮುಖ್ಯಮಂತ್ರಿಗಳು ಬಹಿರಂಗ ಸವಾಲು ಹಾಕಿದ್ದಾರೆ. ಇದಕ್ಕಿಂತ ಬೇರೇನು ಬೇಕು.

ಕೋವಿಡ್ ಕಿಟ್ ಖರೀದಿ ಅಕ್ರಮ ವಿಚಾರದಲ್ಲಿ ನ್ಯಾಯಮೂರ್ತಿ ಮೈಕೆಲ್ ಡಿ.ಕುನ್ಹಾ ಸಮಿತಿ ಸರ್ಕಾರದ ಏಜೆಂಟರಂತೆ ನಡೆದುಕೊಳ್ಳುತ್ತಿದೆ ಎಂಬ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಟೀಕೆಗೆ ಪ್ರತಿಕ್ರಿಯಿಸಿ, ಅವರ ಪರವಾಗಿ ವರದಿ ಕೊಟ್ಟರೆ ಎಲ್ಲವೂ ನ್ಯಾಯಬದ್ಧವಾಗಿರುತ್ತವೆ. ಅವರ ವಿರುದ್ಧವಾಗಿ ನೀಡುವ ವರದಿಗೆ ಆರೋಪ ಮಾಡುತ್ತಾರೆ. ದ್ವೇಷ ರಾಜಕಾರಣ ಮಾಡುತ್ತಿರುವವರು ಬಿಜೆಪಿ, ಅವರು ಯಾವುದೇ ಆರೋಪ ಮಾಡಿಕೊಳ್ಳಲಿ ಎಂದರು.

ಕೇರಳದ ವಯನಾಡು ಲೋಕಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಗೆಲ್ಲುವುದು ನಿಶ್ಚಿತ. ಅಲ್ಲಿ ಇತರೆ ಪಕ್ಷಗಳ ನಾಯಕರೂ ಬೆಂಬಲ ವ್ಯಕ್ತಪಡಿಸಿದ್ದು, ಪ್ರಿಯಾಂಕಾ ಅವರನ್ನು ಸಂಸತ್ ಸದಸ್ಯೆಯಾಗಿ ನೋಡಲು ಬಯಸಿದ್ದಾರೆ. ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಕ್ಷೇತ್ರದ ಅಭಿವೃದ್ಧಿ ಮಾಡಲಿದ್ದಾರೆ, ಅಲ್ಲಿನ ಉಪಚುನಾವಣೆ ಏಕಪಕ್ಷೀಯ ಸ್ಪರ್ಧೆಯಾಗಿದೆ ಎಂದರು.

ದಿ ಕಾಸ್ಮೋಪಾಲಿಟನ್ ಕ್ಲಬ್‌ನ 2024–25ನೇ ಸಾಲಿನ ಪದಾಧಿಕಾರಿಗಳ ಆಯ್ಕೆ



ಮೈಸೂರಿನ ಪ್ರತಿಷ್ಠಿತ ದಿ ಕಾಸ್ಮೋಪಾಲಿಟನ್ ಕ್ಲಬ್‌ನ 122ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ನೆರವೇರಿತು. ಇದೇ ವೇಳೆ 2024–25ನೇ ಸಾಲಿನ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಶ್ರೀನಿವಾಸ್ ಎಂ.ವಿ., ಉಪಾಧ್ಯಕ್ಷರಾಗಿ ನಾಗೇಂದ್ರ ಕೆ.ಬಿ., ಕಾರ್ಯದರ್ಶಿ ನಂದೀಶ್ ಎಂ.ಎನ್., ಖಜಾಂಚಿಯಾಗಿ ಶೇಷಾದ್ರಿ ಬಿ.ಎನ್., ಆಡಳಿತ ಮಂಡಳಿ ಸದಸ್ಯರಾಗಿ ಆನಂದ್ ಆರ್., ಕುಮಾರ್ ಜೆ.ಎ., ಮಹೇಶ್ ಕೆ., ರಾಜೀವ್ ಎಂ., ರಾಜೇಂದ್ರಕುಮಾರ್ ಎಚ್., ವೆಂಕಟೇಶ್ ಆರ್. ಅವಿರೋಧವಾಗಿ ಆಯ್ಕೆಯಾದರು. ನೂತನ ಅಧ್ಯಕ್ಷ ಶ್ರೀನಿವಾಸ್ ಅವರನ್ನು ಸದಸ್ಯರಾದ ಜಿ.ಲೋಕೇಶ್, ಸಿ.ಮೋಹನ್‌ಕುಮಾರ್, ಮಳಲಿ ನಟರಾಜ್, ವಿಕ್ರಾಂತ್ ದೇವೇಗೌಡ, ಘನವಂತ ನಟರಾಜ ಕುಮಾರ್ ಅಭಿನಂದಿಸಿದರು

ಹಿಂದೂಸ್ಥಾನ್ ಕಾಲೇಜಲ್ಲಿ 69ನೇ ಕನ್ನಡ ರಾಜ್ಯೋತ್ಸವ



ಮೈಸೂರಿನ ಹಿಂದೂಸ್ಥಾನ್ ಕಾಲೇಜಿನಲ್ಲಿ 69ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಕುವೆಂಪುನಗರದ ಸರ್ಕಾರಿ ಪಪೂ ಕಾಲೇಜಿನ ಕನ್ನಡ ಉಪನ್ಯಾಸಕ ಎಂ.ಮಹೇಶ, ಪ್ರಾಂಶುಪಾಲರಾದ ಡಾ. ಸಿ.ಜೆ. ಪ್ರಿಯ, ಕನ್ನಡ ಸಹಾಯಕ ಪ್ರಾಧ್ಯಾಪಕ ಡಾ.ಶಿವಕುಮಾರ್.ಆರ್., ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕ ಕೆ. ಪರಮೇಶ ಇನ್ನಿತರರಿದ್ದರು.

ದೇಶ - ವಿದೇಶ

ಟ್ರಂಪ್–ಪುಟಿನ್ ಮಾತುಕತೆ: ಉಕ್ರೇನ್ ಯುದ್ಧ ಕೊನೆಗಾಣಿಸುವ ಬಗ್ಗೆ ಚರ್ಚೆ




ವಾಷಿಂಗ್ಟನ್: ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ರಷ್ಯಾದ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ. ಈ ವೇಳೆ ಉಕ್ರೇನ್‌ನಲ್ಲಿ ಯುದ್ಧವನ್ನು ಕೊನೆಗೊಳಿಸುವ ಕುರಿತು ಹಲವು ಪ್ರಮುಖ ವಿಷಯಗಳ ನಡುವೆ ಚರ್ಚಿಸಿದ್ದಾರೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಟ್ರಂಪ್ ಅವರು ಫ್ಲೋರಿಡಾದ ತಮ್ಮ ರೆಸಾರ್ಟ್‌ನಿಂದ ಪುಟಿನ್ ಅವರನ್ನು ಸಂಪರ್ಕಿಸಿ, ಉಕ್ರೇನ್‌ನಲ್ಲಿ ಯುದ್ಧವನ್ನು ಉಲ್ಬಣಗೊಳಿಸದಂತೆ ಸಲಹೆ ನೀಡಿದ್ದಾರೆ. ಯುರೋಪ್‌ನಲ್ಲಿ ವಾಷಿಂಗ್ಟನ್‌ನ ಮಿಲಿಟರಿ ಇರುವಿಕೆ ಬಗ್ಗೆ ನೆನಪಿಸಿದರು ಎಂದು ವಾಷಿಂಗ್ಟನ್ ಪೋಸ್ಟ್ ವರದಿ ಮಾಡಿದೆ. ಈ ಮಧ್ಯೆ, ಚುನಾಯಿತ ಅಧ್ಯಕ್ಷ ಟ್ರಂಪ್ ಮತ್ತು ಇತರ ವಿಶ್ವ ನಾಯಕರ ನಡುವಿನ ಖಾಸಗಿ ಕರೆಗಳ ಬಗ್ಗೆ ಅವರು ಪ್ರತಿಕ್ರಿಯಿಸುವುದಿಲ್ಲ ಎಂದು ಟ್ರಂಪ್ ಸಂವಹನ ನಿರ್ದೇಶಕ ಸ್ಟೀವನ್ ಚೆಯುಂಗ್ ಪಿಟಿಐ ಸುದ್ದಿ ಸಂಸ್ಥೆಗೆ ತಿಳಿಸಿದ್ದಾರೆ. ಅಧ್ಯಕ್ಷ ಟ್ರಂಪ್ ಐತಿಹಾಸಿಕ ಚುನಾವಣೆಯನ್ನು ನಿರ್ಣಾಯಕವಾಗಿ ಗೆದ್ದಿದ್ದಾರೆ ಮತ್ತು ಪ್ರಪಂಚದಾದ್ಯಂತದ ನಾಯಕರಿಗೆ ಅಮೆರಿಕವು ವಿಶ್ವ ವೇದಿಕೆಯಲ್ಲಿ ಪ್ರಾಮುಖ್ಯತೆ ನೀಡುತ್ತದೆ.

ರಾಮಮಂದಿರದ ಮೇಲೆ ದಾಳಿ: ಖಲಿಸ್ತಾನಿ ಉಗ್ರ ಪನ್ನೂನ್ ಬೆದರಿಕೆ

ನವದೆಹಲಿ: ಖಲಿಸ್ತಾನಿ ಭಯೋತ್ಪಾದಕ ಗುರುಪತ್ವಂತ್ ಸಿಂಗ್ ಪನ್ನೂನ್ ಅಯೋಧ್ಯೆಯ ರಾಮಮಂದಿರ ಸೇರಿದಂತೆ ಹಿಂದೂ ದೇವಾಲಯಗಳನ್ನು ಗುರಿಯಾಗಿಸಿಕೊಂಡು ಬೆದರಿಕೆ ಹಾಕಿದ್ದಾನೆ. ನಿಷೇಧಿತ ಸಿಖ್ಸ್ ಫಾರ್ ಜಸ್ಟಿಸ್ ಸಂಘಟನೆಯು ಬಿಡುಗಡೆ ಮಾಡಿದ ವಿಡಿಯೋದಲ್ಲಿ ಪನ್ನೂನ್ ನ.16 ಮತ್ತು 17ರಂದು ಈ ದಾಳಿಯ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ಕೆನಡಾದ ಬ್ರಾಂಪ್ಟನ್‌ನಲ್ಲಿ ರೆಕಾರ್ಡ್ ಮಾಡಲಾದ ವಿಡಿಯೋ ಹಿಂದೂ ಪೂಜಾ ಮಂದಿರಗಳ ವಿರುದ್ಧ ಹಿಂಸಾಚಾರವನ್ನು ಪ್ರಚೋದಿಸುವ ಗುರಿಯನ್ನು ಹೊಂದಿದೆ.



ಗುರುಪತ್ವಂತ್ ಪನ್ನೂನ್ ತನ್ನ ಹೇಳಿಕೆಯಲ್ಲಿ, ಹಿಂಸಾತ್ಮಕ ಹಿಂದುತ್ವ ಸಿದ್ಧಾಂತದ ಜನ್ಮಸ್ಥಳವಾದ ಅಯೋಧ್ಯೆಯ ಅಡಿಪಾಯವನ್ನು ನಾವು ಅಲುಗಾಡಿಸುತ್ತೇವೆ ಎಂದು ಭಾರತದ ಅತ್ಯಂತ ಪವಿತ್ರ ತಾಣಗಳಲ್ಲಿ ಒಂದಕ್ಕೆ ನೇರ ಬೆದರಿಕೆ ಹಾಕಿದ್ದಾನೆ. ಹಿಂದೂ ದೇವಾಲಯಗಳ ಮೇಲಿನ ಖಲಿಸ್ತಾನಿ ದಾಳಿಯಿಂದ ದೂರವಿರುವಂತೆ ಕೆನಡಾದಲ್ಲಿರುವ ಭಾರತೀಯರಿಗೆ ಪನ್ನೂನ್ ಎಚ್ಚರಿಕೆ ನೀಡಿದ್ದಾರೆ. ಕಳೆದ ತಿಂಗಳು ನ.1 ಮತ್ತು 19ರ ನಡುವೆ ಏರ್ ಇಂಡಿಯಾ ವಿಮಾನಗಳಲ್ಲಿ ಹಾರಾಟ ಮಾಡದಂತೆ ಪನ್ನೂನ್ ಪ್ರಯಾಣಿಕರಿಗೆ ಎಚ್ಚರಿಕೆ ನೀಡಿದ. ಪನ್ನೂನ್ ಭಾರತೀಯ ರಾಜತಾಂತ್ರಿಕರ ವಿರುದ್ಧ ಹಿಂಸಾಚಾರಕ್ಕೆ ಕರೆ ನೀಡಿದ್ದಾರೆ.

ಲೆಬನಾನ್ ಮೇಲೆ ಪೇಜರ್ ದಾಳಿಗೆ ಆದೇಶ ನೀಡಿದ್ದೆ



ಲೆಬನಾನ್: ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಭಾನುವಾರ ಮಹತ್ವದ ವಿಚಾರವನ್ನು ಬಹಿರಂಗಪಡಿಸಿದ್ದು, ಲೆಬನಾನ್‌ನಾದ್ಯಂತ ನೂರಾರು ಸಂವಹನ ಸಾಧನಗಳು ಸ್ಫೋಟಗೊಂಡ ಹೆಜ್ಬುಲ್ಲಾ ಮೇಲೆ ಸೆಪ್ಟೆಂಬರ್ ತಿಂಗಳು ನಡೆದ ದಾಳಿಗೆ ತಾನು ಒಪ್ಪಿಗೆ ನೀಡಿದ್ದೆ ಎಂಬ ವಿಚಾರ ಹೇಳಿದ್ದಾರೆ. ನೆತನ್ಯಾಹು ಅವರು ಲೆಬನಾನ್‌ನಲ್ಲಿ ಪೇಜರ್ ಕಾರ್ಯಾಚರಣೆಗೆ ಸೂಚನೆ ನೀಡಿದರು ಎಂದು ದೃಢಪಡಿಸಿದ್ದಾರೆ ಎಂದು ಅವರ ವಕ್ತಾರ ಒಮರ್ ದೋಸ್ತ್ರಿ ಅವರು ದಾಳಿಯ ಬಗ್ಗೆ ಪತ್ರಕರ್ತರಿಗೆ ತಿಳಿಸಿದರು.

ಇರಾನ್ ಬೆಂಬಲಿತ ಉಗ್ರಗಾಮಿ ಗುಂಪಿಗೆ ದೊಡ್ಡ ಹೊಡೆತವನ್ನು ನೀಡಿದ ಮತ್ತು ಸೇಡು ತೀರಿಸಿಕೊಳ್ಳುವ ಪ್ರತಿಜ್ಞೆ ಮಾಡಿದ ಸ್ಫೋಟಗಳಿಗೆ ಲೆಬನಾನಿನ ಸರ್ಕಾರಿ ಅಧಿಕಾರಿಗಳು ಮತ್ತು ಹೆಜ್ಬುಲ್ಲಾ ಈ ಹಿಂದೆ ಇಸ್ರೇಲ್‌ನ್ನು ದೂಷಿಸಿತ್ತು. ಸೆಪ್ಟೆಂಬರ್ ಮಧ್ಯ ಭಾಗದಲ್ಲಿ ಸೂಪರ್ ಮಾರ್ಕೆಟ್‌ಗಳಲ್ಲಿ, ಬೀದಿಗಳಲ್ಲಿ ಮತ್ತು ಅಂತ್ಯಕ್ರಿಯೆಗಳಲ್ಲಿ ಹೆಜ್ಬೊಲ್ಲಾ ಕಾರ್ಯಕರ್ತರು ಬಳಸಿದ ಕೈಯಲ್ಲಿ ಹಿಡಿದ ಸಾಧನಗಳು ಸತತವಾಗಿ ಎರಡು ದಿನ ಸ್ಫೋಟಗೊಂಡವು. ಘಟನೆಯಲ್ಲಿ ಸುಮಾರು 40 ಜನರು ಮೃತಪಟ್ಟಿದ್ದರು. ಸುಮಾರು 3,000 ಜನರು ಗಾಯಗೊಂಡಿದ್ದರು.

ಮದುವೆ ಸಂಭ್ರಮದಲ್ಲಿ ವಧುವಿನ ಹಣೆಗೆ ಬಂದೂಕಿನ ಗುಂಡು ಹೊಕ್ಕಿ ದುರಂತ


ಅಮೃತಸರ: ಪಂಜಾಬ್‌ನಲ್ಲಿ ಮದುವೆ ಸಂಭ್ರಮವೊಂದು ದುರಂತದಲ್ಲಿ ಅಂತ್ಯವಾಗಿದ್ದು, ಸಂಭ್ರಮಾಚರಣೆ ವೇಳೆ ಸಂಬಂಧಿಕರು ಸಿಡಿಸಿದ ಬಂದೂಕಿನ ಗುಂಡು ನೇರವಾಗಿ ವಧುವಿನ ಹಣೆಗೆ ಹೊಕ್ಕಿದೆ.

ಪಂಜಾಬ್‌ನ ಫಿರೋಜ್‌ಪುರದ ಖೈ ಫೇಮೆ ಕಿ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಅರಮನೆಯಲ್ಲಿ ಮದುವೆ ಸಂಭ್ರಮಾಚರಣೆ ವೇಳೆ ವಧು ಗುಂಡು ತಗುಲಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಹಶಮ್ ಟೂಟ್ ಗ್ರಾಮದ ಬಾಜ್ ಸಿಂಗ್ ಅವರ ಪುತ್ರಿ ಬಲ್ಜಿಂದರ್ ಕೌರ್ (23) ಮತ್ತು ತರ್ನ್ ತರಣ್ ಜಿಲ್ಲೆಯ ಸರ್ಹಾಲಿ ಕಲನ್‌ನ ಗುರುಪ್ರೀತ್ ಸಿಂಗ್ ಅವರ ಮದುವೆ ಖೈ ಫೇಮೆ ಕಿ ಗ್ರಾಮದ ಬಳಿಯ ಅರಮನೆಯಲ್ಲಿ ನೆರವೇರುತ್ತಿತ್ತು. ಈ ವೇಳೆ ಸಂಬಂಧಿಕರು ಗುಂಡು ಹಾರಿಸಿದ್ದು, ಗುಂಡು ನೇರವಾಗಿ ವಧುವಿನ ಹಣೆಗೆ ಹೊಕ್ಕಿದೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ವಧುವನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಆಕೆಯ ಸ್ಥಿತಿ ಚಿಂತಾಜನಕವಾಗಿದೆ ಎಂದು ತಿಳಿದುಬಂದಿದೆ.

ಪ್ರಸ್ತುತ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸಿದ್ದಾರೆ. ಅಂತೆಯೇ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಸುಖ್ವಿಂದರ್ ಸಿಂಗ್ ಹೇಳಿದ್ದಾರೆ.

ರ್‍ಯಾಶ್ ಡ್ರೈವಿಂಗ್ ಪ್ರಶ್ನಿಸಿದ ವಿದ್ಯಾರ್ಥಿ ಕೊಂದ ಕಾರು ಚಾಲಕ



ಅಹಮದಾಬಾದ್: ದಿನೇ ದಿನೆ ರೋಡ್ ರೇಜ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅಹಮದಾಬಾದ್‌ನ ಪ್ರಮುಖ ಬ್ಯುಸಿನೆಸ್ ಸ್ಕೂಲ್‌ನ 23 ವರ್ಷದ ವಿದ್ಯಾರ್ಥಿಯೊಬ್ಬನನ್ನು ಅಪರಿಚಿತ ಕಾರು ಚಾಲಕನೊಬ್ಬ ಇರಿದು ಕೊಲೆ ಮಾಡಿದ್ದಾನೆ ಎಂದು ಸೋಮವಾರ ಪೊಲೀಸರು ತಿಳಿಸಿದ್ದಾರೆ. ಭಾನುವಾರ ರಾತ್ರಿ 11.30ರ ಸುಮಾರಿಗೆ ಇಲ್ಲಿನ ಮುದ್ರಾ ಇನ್‌ಸ್ಟಿಟ್ಯೂಟ್ ಆಫ್ ಕಮ್ಯುನಿಕೇಷನ್ಸ್ (ಎಂಐಸಿಎ)ನ ಇಬ್ಬರು ವಿದ್ಯಾರ್ಥಿಗಳು ಬೇಕರಿ ಅಂಗಡಿಯಲ್ಲಿ ಕೇಕ್ ಖರೀದಿಸಿ ತಮ್ಮ ಸಂಸ್ಥೆಯ ಹಾಸ್ಟೆಲ್‌ಗೆ ಬೈಕ್‌ನಲ್ಲಿ ಹಿಂತಿರುಗುತ್ತಿದ್ದಾಗ ಈ ಘಟನೆ ನಡೆದಿದೆ.

ವಿದ್ಯಾರ್ಥಿಗಳು ಬೋಪಾಲ್ ಪ್ರದೇಶದ ಕ್ರಾಸ್‌ರೋಡ್‌ನಲ್ಲಿ ಅತೀ ವೇಗವಾಗಿ ರ್‍ಯಾಶ್ ಡ್ರೈವಿಂಗ್ ಮಾಡುತ್ತಿದ್ದ ಕಾರು ಚಾಲಕನೊಂದಿಗೆ ತೀವ್ರ ವಾಗ್ವಾದ ನಡೆಸಿದ್ದಾರೆ. ಕಾರ್ ಡ್ರೈವರ್ ಸುಮಾರು 200 ಮೀಟರ್ ವಿದ್ಯಾರ್ಥಿಗಳನ್ನು ಹಿಂಬಾಲಿಸಿ, ತನ್ನ ವಾಹನದಿಂದ ಚಾಕು ತೆಗೆದುಕೊಂಡು ಅವರಲ್ಲಿ ಒಬ್ಬ ವಿದ್ಯಾರ್ಥಿಗೆ ಇರಿದಿದ್ದಾನೆ. ಇರಿತದಿಂದ ಗಂಭೀರವಾಗಿ ಗಾಯಗೊಂಡಿದ್ದ ವಿದ್ಯಾರ್ಥಿ ಪ್ರಿಯಾಂಶು ಜೈನ್ ಅವರನ್ನು ತಕ್ಷಣ ಆಸ್ಪತ್ರೆಗೆ ಸಾಗಿಸಲಾಗಿದ್ದು, ತೀವ್ರ ರಕ್ತಸ್ರಾವದಿಂದಾಗಿ ಸಾವನ್ನಪ್ಪಿದ್ದಾನೆ.

18 ವರ್ಷದ ಬಳಿಕ ಬಾಲಕಿ ಅಸ್ಥಿಪಂಜರ ಅಂತ್ಯಕ್ರಿಯೆ

● ಗೋವಾದಲ್ಲಿ ಹತ್ಯೆಯಾಗಿದ್ದ ಬಾಲಕಿ ಸಫಿಯಾ ● ಕೊಡಗಿನ ಅಯ್ಯಂಗೇರಿಯಲ್ಲಿ ಅಂತಿಮ ವಿಧಿವಿಧಾನ

ಮಡಿಕೇರಿ, ನ.11–ಕಳೆದ 18 ವರ್ಷಗಳ ಹಿಂದೆ ಗೋವಾದಲ್ಲಿ ಬರ್ಬರವಾಗಿ ಹತ್ಯೆಯಾಗಿದ್ದ ಕೊಡಗಿನ ಬಾಲಕಿ ಸಫಿಯಾಳ(14) ಅಸ್ಥಿ ಪಂಜರವನ್ನು ಸೋಮವಾರ ಇಸ್ಲಾಂ ಪದ್ಧತಿಯಂತೆ ಆಕೆಯ ಹುಟ್ಟೂರು ಅಯ್ಯಂಗೇರಿಯಲ್ಲಿ ಅಂತ್ಯಕ್ರಿಯೆ ನಡೆಸಲಾಯಿತು.

ಸಫಿಯಾ ಕೊಲೆ ಪ್ರಕರಣ ಸಂಬಂಧಿಸಿದಂತೆ ಕೇರಳದ ಕಾಸರಗೋಡು ಜಿಲ್ಲಾ ನ್ಯಾಯಾಲಯ ನ.6ರಂದು ಸಫಿಯಾಳ ಅಸ್ಥಿ ಪಂಜರಗಳನ್ನು ಆಕೆಯ ಪೋಷಕರಿಗೆ ಹಸ್ತಾಂತರಿಸುವಂತೆ ಅತ್ಯಂತ ಮಹತ್ವದ ಆದೇಶ ನೀಡಿತ್ತು. ಈ ಹಿನ್ನೆಲೆಯಲ್ಲಿ ಕೊಚ್ಚಿ ವಿಧಿವಿಜ್ಞಾನ ಪ್ರಯೋಗಾಲಯದಿಂದ ಅಸ್ಥಿ ಪಂಜರ ಪಡೆದು ಸಂಜೆ ವೇಳೆಗೆ ಗ್ರಾಮಕ್ಕೆ ತರಲಾಯಿತು.

ಅಯ್ಯಂಗೇರಿ ಹಳೇ ಮಸೀದಿಯಲ್ಲಿ ಸಫಿಯಾ ಅಸ್ಥಿ ಪಂಜರವನ್ನಿಟ್ಟು ಧರ್ಮ ಗುರು ಉಸ್ಮಾನ್ ಮರ್ಝೂಕಿ ಪ್ರಾರ್ಥನೆ ನೆರವೇರಿಸಿದರು. ಬಳಿಕ ಅಯ್ಯಂಗೇರಿ ಮಸೀದಿಯ ಖಬರಸ್ಥಾನದಲ್ಲಿ ಅಸ್ಥಿ ಪಂಜರವನ್ನು ಹೂಳಲಾಯಿತು. ಇದರಿಂದ ಸುದೀರ್ಘ 18 ವರ್ಷಗಳ ಬಳಿಕ ಸಫಿಯಾಳ ಪೋಷಕರು ಮಗಳ ಅಂತಿಮ ವಿಧಿವಿಧಾನ ನಡೆಸಿದಂತಾಯಿತು. ಈ ಸಂದರ್ಭ ಸಫಿಯಾಳ ತಂದೆ ಮೊಯ್ದು ಮತ್ತು ಇಬ್ಬರು ಸಹೋದರರು, ಅಯ್ಯಂಗೇರಿ ಜಮಾತ್ ಅಧ್ಯಕ್ಷರಾದ ಅಬ್ದುಲ್ ಖಾದರ್, ಗ್ರಾಪಂ ಸದಸ್ಯ ರಶೀದ್ ಅಯ್ಯಂಗೇರಿ, ಪ್ರಮುಖರಾದ ಉಸ್ಮಾನ್, ಮೊಹಮದ್ ಹಾಗೂ ಹತ್ತಾರು ಗ್ರಾಮಸ್ಥರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಪ್ರಕರಣ ಹಿನ್ನೆಲೆ: ನಾಪೋಕ್ಲು ಅಯ್ಯಂಗೇರಿ ನಿವಾಸಿ ಮೊಯ್ದು ಆಯಿಷಾ ದಂಪತಿ ಪುತ್ರಿ ಸಫಿಯಾಳನ್ನು ಮನೆ ಕೆಲಸಕ್ಕಾಗಿ 2006ರಲ್ಲಿ ಕಾಸರಗೋಡು ಮುಳಿಯಾರ್ ನಿವಾಸಿ ಗೋವಾದಲ್ಲಿ ಖಾಸಗಿ ಗುತ್ತಿಗೆದಾರನಾಗಿದ್ದ ಕೆ.ಎ.ಹಂಸ ಕರೆದುಕೊಂಡು ಹೋಗಿದ್ದ. ಸಫಿಯಾಳಿಗೆ ಹಂಸ ಮತ್ತವನ ಪತ್ನಿ ಮೈಮೂನಾ ಅವರು ದಿನನಿತ್ಯ ದೈಹಿಕ ಹಿಂಸೆ ನೀಡಲು ಆರಂಭಿಸಿದ್ದರು.

ಮೈಮೂನಾ ಗೋವಾದಲ್ಲಿ ಮನೆ ಹೊಂದಿದ್ದು, ಸಫಿಯಾ ಅಡುಗೆ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಬಿಸಿ ನೀರು ಬಿದ್ದು, ತೀವ್ರ ಸ್ವರೂಪದ ಸುಟ್ಟ ಗಾಯಗಳಾಗಿ ಜೀವನ್ಮರಣ ಸ್ಥಿಯಲ್ಲಿದ್ದಳು. ಈ ವೇಳೆ ಸಫಿಯಾಳನ್ನು ಆಸ್ಪತ್ರೆಗೆ ಕರದೊಯ್ದರೆ ಬಾಲ ಕಾರ್ಮಿಕ ಕಾನೂನಿನ ಅಡಿಯಲ್ಲಿ ಸಿಲುಕಿಕೊಳ್ಳುವುದಾಗಿ ತಿಳಿದು ಹಂಸ, ಮೈಮೂನಾ ಮತ್ತು ಆಕೆಯ ಸಹೋದರ ಎಂ.ಅಬ್ದುಲ್ಲಾ ಅವರು ಸಫಿಯಾಳನ್ನು 3 ಭಾಗಗಳಾಗಿ ಕತ್ತರಿಸಿ ಗೋವಾದಲ್ಲಿ ನಿರ್ಮಾಣ ಹಂತದಲ್ಲಿದ್ದ ಸೇತುವೆ ಬಳಿ ಹೂತು ಹಾಕಿದ್ದರು. ದಿನಗಳು ಕಳೆದ ಬಳಿಕ ಸಫಿಯಾ ಕಾಣೆಯಾಗಿರುವ ಕುರಿತು ಕಾಸರಗೋಡುವಿನ ಅಡೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಸಫಿಯಾ ಕಾಣೆಯಾಗಿರುವ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದ ಅಲ್ಲಿನ ನಿವಾಸಿಗಳು ಮತ್ತು ವಿವಿಧ ಸಂಘ–ಸಂಸ್ಥೆಗಳು ಪ್ರಕರಣವನ್ನು ಉನ್ನತ ತನಿಖೆಗೆ ಒಳಪಡಿಸಬೇಕೆಂದು 'ಸಫಿಯಾ ಹೋರಾಟ ಸಮಿತಿ' ಮೂಲಕ ಭಾರಿ ಅಭಿಯಾನ ಆರಂಭಿಸಿದ್ದವು. ಸಾರ್ವಜನಿಕರ ಒತ್ತಡ ತೀವ್ರವಾದ ಪರಿಣಾಮ ಅಲ್ಲಿನ ಸರ್ಕಾರ 2 ವರ್ಷ ಬಳಿಕ ಪ್ರಕರಣವನ್ನು ಕಾಸರಗೋಡು ಜಿಲ್ಲಾ ಕ್ರೈಂ ಬ್ರಾಂಚ್‌ಗೆ ಹಸ್ತಾಂತರಿಸಿತ್ತು.

ತನಿಖೆ ನಡೆಸಿದ ಕ್ರೈಂ ಬ್ರಾಂಚ್ ಪೊಲೀಸರು ಕೆ.ಎ.ಹಂಸ, ಆತನ ಪತ್ನಿ ಮೈಮೂನಾ ಮತ್ತು ಆಕೆಯ ಸಹೋದರ ಎಂ.ಅಬ್ದುಲ್ಲಾ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ಸಫಿಯಾ ಕೊಲೆಯಾಗಿರುವುದು ಪತ್ತೆಯಾಗಿತ್ತು. 2008ರ ಜೂ.5ರಂದು ಗೋವಾದ ನಿರ್ಮಾಣ ಹಂತದ ಸೇತುವೆ ಕಳೆ ಭಾಗ ಹೂತು ಹಾಕಲಾಗಿದ್ದ ಮೃತದೇಹದ ಕಳೇಬರವನ್ನು ಹೊರತೆಗೆದ ಪೊಲೀಸರು, ಅದನ್ನು ಡಿಎನ್‌ಎ ಪರೀಕ್ಷೆಗೆ ಒಳಪಡಿಸಿ ಕಳೇಬರ ಸಫಿಯಾಳದ್ದೇ ಎಂದು ದೃಢಪಡಿಸಿದ್ದರು. ಪ್ರಕರಣದ ಆರೋಪಿಗಳಾದ ಕೆ.ಎ.ಹಂಸ, ಆತನ ಪತ್ನಿ ಮೈಮೂನಾ ಮತ್ತು ಆಕೆಯ ಸಹೋದರ ಅಬ್ದುಲ್ಲಾ, ಇವರಿಗೆ ಸಹಕರಿಸಿದ ಮೊಯ್ದು ಹಾಜಿ, ಅಡೂರು ಠಾಣೆ ಎಎಸ್‌ಐ ಗೋಪಾಲಕೃಷ್ಣರನ್ನು ಜೈಲಿಗೆ ಅಟ್ಟಿದ್ದರು. ಆ ಮೂಲಕ ಪೊಲೀಸರು ಸಫಿಯಾ ಕೊಲೆ ಪ್ರಕರಣವನ್ನು ಯಶಸ್ವಿಯಾಗಿ ಭೇದಿಸಿದ್ದರು.



ಕೊಚ್ಚಿ ವಿಧಿವಿಜ್ಞಾನ ಪ್ರಯೋಗಾಲಯದಿಂದ ಸಫಿಯಾಳ ಅಸ್ಥಿಪಂಜರವನ್ನು ಅಯ್ಯಂಗೇರಿಗೆ ತರಲಾಯಿತು.

ನ್ಯಾಯಾಲಯದಿಂದ ಶಿಕ್ಷೆ ಪ್ರಕಟ

ಪ್ರಕರಣದ ವಿಚಾರಣೆ ನಡೆಸಿದ ಕಾಸರಗೋಡು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ 2015 ಜು.16ರಂದು ಪ್ರಕರಣದ ಪ್ರಮುಖ ಆರೋಪಿ ಹಂಸನಿಗೆ ಮರಣ ದಂಡನೆ ಹಾಗೂ 10 ಲಕ್ಷ ರೂ. ದಂಡ ವಿಧಿಸಿ ಆದೇಶಿಸಿತ್ತು. ಇನ್ನುಳಿದ ಆರೋಪಿಗಳಾದ ಮೈಮೂನಾ, ಆಕೆಯ ಸಹೋದರ ಎಂ.ಅಬ್ದುಲ್ಲಾನಿಗೆ ತಲಾ 6 ವರ್ಷ ಸಜೆ, 1 ಲಕ್ಷ ರೂ. ದಂಡ ವಿಧಿಸಿತ್ತು. ಇನ್ನಿಬ್ಬರು ಆರೋಪಿಗಳ ವಿರುದ್ಧ ಸೂಕ್ತ ಸಾಕ್ಷ್ಯಾಧಾರ ಕೊರತೆ ಕಾರಣ ಅವರನ್ನು ಪ್ರಕರಣದಿಂದ ನ್ಯಾಯಾಲಯ ಖುಲಾಸೆಗೊಳಿಸಿತ್ತು. ನಂತರ ನಡೆದ ಬೆಳವಣಿಗೆಯಲ್ಲಿ ಕೊಲೆ ಪ್ರಕರಣದ ಪ್ರಮುಖ ಆರೋಪಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಕೇರಳ ಹೈಕೋರ್ಟ್ ಮರಣ ದಂಡನೆ ಶಿಕ್ಷೆ ರದ್ದು ಮಾಡಿ, ಅದನ್ನು ಆಜೀವ ಕಾರಾಗೃಹ ವಾಸದ ಶಿಕ್ಷೆಯಾಗಿ ಮಾರ್ಪಡಿಸಿತ್ತು.

ಕುಶಾಲನಗರದಲ್ಲಿ ಕನ್ನಡ ಕಂಠ ಗಾಯನ...


ಕುಶಾಲನಗರದ ರಥಬೀದಿಯ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ವೃತ್ತದಲ್ಲಿ ಕರ್ನಾಟಕ ಸುವರ್ಣ ಸಂಭ್ರಮ ಹಾಗೂ ರಾಜ್ಯೋತ್ಸವ ಅಂಗವಾಗಿ ಸೋಮವಾರ ತಾಲೂಕು ಕಸಾಪ ವತಿಯಿಂದ ಏರ್ಪಡಿಸಿದ್ದ ಸಹಸ್ರಾರು ಮಂದಿಯ ಕನ್ನಡ ಕಂಠ ಗಾಯನ ನಡೆಯಿತು.

8 ಲಕ್ಷ ಮೌಲ್ಯದ ಬೀಟೆ ನಾಟಾ ವಶ

ಮಡಿಕೇರಿ, ನ.11–ಅಕ್ರಮವಾಗಿ ಬೀಟೆ ಮರ ಸಾಗಿಸುತ್ತಿದ್ದ ಪ್ರಕರಣ ಪತ್ತೆ ಹಚ್ಚಿರುವ ಮಡಿಕೇರಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಒಟ್ಟು 8 ಲಕ್ಷ ರೂ. ಮೌಲ್ಯದ 27 ಬೀಟೆ ಮರದ ನಾಟಾಗಳನ್ನು ವಶಕ್ಕೆ ಪಡೆದಿದ್ದಾರೆ.

ಭಾನುವಾರ ರಾತ್ರಿ ತಾಲೂಕಿನ ಕಗ್ಗೋಡ್ಲು ಬಳಿ ಪಿಕ್‌ಅಪ್ ವಾಹನವನ್ನು ಅರಣ್ಯಾಧಿಕಾರಿಗಳು ಮತ್ತು ಸಿಬ್ಬಂದಿ ಪರಿಶೀಲಿಸಿದಾಗ 38 ಚೀಲಗಳಲ್ಲಿ ಶುಂಠಿ ತುಂಬಿರುವುದು ಕಂಡು ಬಂದಿದೆ. ಸಂಶಯಗೊಂಡು ಮತ್ತಷ್ಟು ಪರಿಶೀಲಿಸಿದಾಗ ವಾಹನದೊಳಗೆ ಒಟ್ಟು 27 ಬೀಟೆ ಮರದ ನಾಟಾಗಳು ಪತ್ತೆಯಾಗಿವೆ. ನಂತರ ವಾಹನ ಚಾಲಕ ಹೆಚ್.ಡಿ. ಕೋಟೆಯ ಆದಿತ್ಯನನ್ನು ವಶಕ್ಕೆ ಪಡೆಯಲಾಗಿದೆ.

ಆರೋಪಿಯನ್ನು ವಿಚಾರಣೆ ನಡೆಸಿದಾಗ ವಿರಾಜಪೇಟೆಯಿಂದ ಹೊಳೆನರಸೀಪುರದ ಕಡೆಗೆ ಬೀಟೆ ನಾಟಾಗಳನ್ನು ಸಾಗಿಸುತ್ತಿರುವುದಾಗಿ ಹೇಳಿದ್ದಾನೆ. ಮತ್ತಷ್ಟು ಆರೋಪಿಗಳು ಶಾಮೀಲಾಗಿದ್ದು, ಅವರ ಪತ್ತೆಗಾಗಿ ಕ್ರಮ ಕೈಗೊಳ್ಳಲಾಗಿದೆ. ಆರೋಪಿ ಆದಿತ್ಯನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಮಡಿಕೇರಿ ವಲಯ ಅರಣ್ಯ ಸಂರಕ್ಷಣಾಧಿಕಾರಿ ಡಿನ್ನಿ ದೇಚಮ್ಮ ಮಾಹಿತಿ ತಿಳಿಸಿದ್ದಾರೆ.

ಮಡಿಕೇರಿ ವಿಭಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್ ಮಾರ್ಗದರ್ಶನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಮೊಹಸೀನ್ ಭಾಷಾ ಮುಂದಾಳತ್ವದಲ್ಲಿ ವಲಯ ಅರಣ್ಯಾಧಿಕಾರಿ ಡಿನ್ನಿ ದೇಚಮ್ಮ, ಉಪ ವಲಯ ಅರಣ್ಯಾಧಿಕಾರಿ ಸಿ.ಉಮೇಶ್, ಮಲ್ಲಯ್ಯ ಹಿರೇಮಠ್, ಸಿಬ್ಬಂದಿ ಸಿ.ಸಿ.ರತೀಶ್, ಯು.ಸಿ.ವಾಸುದೇವ, ಪಿ.ಬಿ.ಸಂತೋಷ್, ನಿಖಿಲ್, ಮೋಹನ್, ವಚನ್, ತಿಮ್ಮಯ್ಯ, ಸುಧಾ ಮತ್ತಿತರರು ಪಾಲ್ಗೊಂಡಿದ್ದರು.


ಮಡಿಕೇರಿ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಬೀಟೆ ಮರದ ನಾಟಾ ಹಾಗೂ ಪಿಕ್‌ಅಪ್ ವಾಹನ ವಶಪಡಿಸಿಕೊಂಡಿರುವುದು.

ಚೇರಳ ಗೌಡ ಸಂಘದ ವಾರ್ಷಿಕ ಸಭೆ


ಚೆಟ್ಟಳ್ಳಿಯ ಚೇರಳ ಗೌಡ ಸಂಘದ ವಾರ್ಷಿಕ ಸಭೆ ಅಧ್ಯಕ್ಷ ಅಯ್ಯಂಡ್ರ ರಾಘವಯ್ಯ ಅಧ್ಯಕ್ಷತೆಯಲ್ಲಿ ನಡೆಯಿತು.

ಮಡಿಕೇರಿ, ನ.11–ಚೆಟ್ಟಳ್ಳಿಯ ಚೇರಳ ಗೌಡ ಸಂಘದ 16ನೇ ವಾರ್ಷಿಕ ಮಹಾಸಭೆ ಸಂಘದ ಅಧ್ಯಕ್ಷ ಅಯ್ಯಂಡ್ರ ರಾಘವಯ್ಯ ಅಧ್ಯಕ್ಷತೆಯಲ್ಲಿ ನಡೆಯಿತು.

ಅಪೂರ್ಣಗೊಂಡಿರುವ ಸಮಾಜದ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಸಭೆ ನಿರ್ಣಯ ಕೈಗೊಂಡಿತು. ಇದೇ ವೇಳೆ ಮೃತಪಟ್ಟ ಸಂಘದ ಸದಸ್ಯರಿಗೆ ಸಂತಾಪ ಸೂಚಿಸಲಾಯಿತು.

ಅಯ್ಯಂಡ್ರ ರಾಘವಯ್ಯ ಮಾತನಾಡಿ, 10 ಕುಟುಂಬ 18 ಗೋತ್ರದ ಅಪೂರ್ಣಗೊಂಡಿರುವ ಸಂಘದ ಕಟ್ಟಡವನ್ನು ಸರ್ಕಾರದ ಅನುದಾನ ಮತ್ತು ಸಂಘದ ಸದಸ್ಯರ ಸಹಕಾರ ಪಡೆದು ಮುಂದಿನ 1 ವರ್ಷದೊಳಗೆ ಪೂರ್ಣಗೊಳಿಸಲಾಗುವುದು. ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರ ದೊಂದಿಗೆ ಹಿಂದೆ ನಡೆಸಿದಂತೆ ಕಾಲ್ಚೆಂಡು ಪಂದ್ಯಾವಳಿ ಆಯೋಜಿಸಲಾಗುವುದು ಎಂದರು.

2023–24ನೇ ವಾರ್ಷಿಕ ವರದಿಯನ್ನು ಸಂಘದ ಕಾರ್ಯದರ್ಶಿ ಆಜೀರ ಧನಂಜಯ ಹಾಗೂ ಲೆಕ್ಕಪರಿಶೋಧನೆಯನ್ನು ಸಮಾಜದ ಉಪಖಜಾಂಚಿ ಪೇರಿಯನ ಉದಯ ಮಂಡಿಸಿದರು. ಉಪಾಧ್ಯಕ್ಷ ಹೊಸಮನೆ ಪೂವಯ್ಯ, ಆಡಳಿತ ಮಂಡಳಿಯ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ಪ್ರತಿಯೊಂದು ಪಕ್ಷಿಗಳಿಗೆ ತನ್ನದೆ ವಿಶಿಷ್ಟತೆ

ವಿರಾಜಪೇಟೆ, ನ.11–ಪ್ರತಿಯೊಂದು ಪಕ್ಷಿಗಳಿಗೆ ತನ್ನದೆ ವಿಶಿಷ್ಟತೆಗಳಿದ್ದು, ದಿನಕ್ಕೆ ಸಾವಿರಾರು ಕಿ.ಮೀ. ದೂರು ಮತ್ತು ಎತ್ತರಕ್ಕೆ ಹಾರುವ ಸಾಮರ್ಥ್ಯವನ್ನು ಪಕ್ಷಿಗಳು ಹೊಂದಿವೆ ಎಂದು ಪಟ್ಟಣದ ರಾಜ್‌ಕವಾಲ್ ಸ್ಟುಡಿಯೋ ಪಕ್ಷಿ ವೀಕ್ಷಕ ಶ್ರೀಕಾಂತ್ ರಾವ್ ತಿಳಿಸಿದರು.

ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗರಾಜೇಂದ್ರ ಭವನದಲ್ಲಿ ನಡೆದ ಹೊಂಬೆಳಕು ಮಾಸಿಕ ತತ್ತ್ವ ಚಿಂತನಾ ಗೋಷ್ಠಿಯಲ್ಲಿ 'ಬಾನಾಡಿಗಳ ವಿಸ್ಮಯ ಜಗತ್ತು' ಕುರಿತು ಮಾತನಾಡಿದ ಅವರು, ಕೆಲ ಪಕ್ಷಿಗಳು ಉತ್ತರದಿಂದ ದಕ್ಷಿಣಕ್ಕೆ ಅತೀ ವೇಗವಾಗಿ ಹಾರುತ್ತವೆ. ಪಕ್ಷಿಯ ಮೂಳೆ ಬಹಳ ತೆಳು ಹಾಗೂ ಹಗುರವಾಗಿರುತ್ತದೆ ಇದರಿಂದ ಎತ್ತರಕ್ಕೆ ಹಾರಲು ಸಾಧ್ಯ. ಹದ್ದುಗಳು ಅತೀ ಎತ್ತರಕ್ಕೆ ಏರುತ್ತವೆ. ವಿವಿಧ ಪಕ್ಷಿಗಳು ಕೆಲ ಸಮುದ್ರದಲ್ಲಿ ಮೀನುಗಳನ್ನು ಹಿಡಿದು ತಿನ್ನುತ್ತವೆ. ಇನ್ನೂ ಕೆಲವು ಪಕ್ಷಿಗಳು ಕ್ರಿಮಿಕೀಟವು ಹಣ್ಣು–ಹಂಪಲು ಹಾಗೂ ಮಣ್ಣು ತಿನ್ನುತ್ತವೆ ಎಂದರು.

ಗಿಳಿ ಸೇರಿದಂತೆ ಕೆಲ ಪಕ್ಷಿಗಳು ಮನುಷ್ಯನನ್ನು ಗುರುತಿಸುತ್ತವೆ. ಹಾಗೆ ಕಾಗೆಗಳು ಆಹಾರ ಸಿಕ್ಕಿದಾಗ ಮತ್ತೊಂದನ್ನು ಕರೆದು ಹಂಚಿ ತಿನ್ನುತ್ತವೆ. ಭೂಮಿ ಮೇಲೆ ಮಾನವನಿಗಿಂತ ಐದು ಪಟ್ಟು ಜಾಸ್ತಿ ಪಕ್ಷಗಳಿವೆ. ಪರಿಸರದಲ್ಲಿ ಕಂಡುಬರುವ ವಿವಿಧ ಪಕ್ಷಿಗಳು ಹಣ್ಣುಗಳನ್ನು ತಿಂದು ಬೀಜಗಳನ್ನು ಹರಡುವುದರಿಂದ ಹೆಚ್ಚು ಗಿಡ–ಮರಗಳು ಬೆಳೆಯಲಿವೆ. ಜೊತೆಗೆ ಪಕ್ಷಿಗಳಿಂದ ಮಣ್ಣು ಫಲವತ್ತಾಗಲಿದೆ ಎಂದು ಜಗತ್ತಿನ ಬಾನಾಡಿಗಳ ಬಗ್ಗೆ ಮಾಹಿತಿ ನೀಡಿದರು.

ಮೈಸೂರಿನ ವಿದ್ಯಾಶ್ರಮ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಸಹಾಯಕ ಪ್ರಾಧ್ಯಾಪಕಿ ಸಣ್ಣುವಂಡ ಬಿ.ತೇಜ ಮಾತನಾಡಿ, ವಿದ್ಯಾರ್ಥಿಗಳಿಗೆ ಪಕ್ಷಿಗಳ ಕಲರವ ಕೇಳುವ ಆಸಕ್ತಿ ಇರಬೇಕು. ಇಂತಹ ಕಾರ್ಯಕ್ರಮದಲ್ಲಿ ಹೆಚ್ಚು ಜನರು ಭಾಗವಹಿಸಬೇಕು. ಗಿಡ ಮರಗಳನ್ನು ಬೆಳೆಸುವ ಮೂಲಕ ಪರಿಸರ ಉಳಿಸಿ ಬೆಳೆಸುವಂತಾಗಬೇಕು ಎಂದರು.

ಕಾರ್ಯಕ್ರಮ ಸಾನಿಧ್ಯ ವಹಿಸಿದ್ದ ಅರಮೇರಿ ಕಳಂಚೇರಿ ಮಠಾಧ್ಯಕ್ಷರಾದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿದರು. ವಿದ್ಯಾರ್ಥಿಗಳಾದ ವರ್ಧಿನಿ, ಕೆ.ಬಿ.ಇಂಪನಾ, ಸುಶ್ಮಿತಾ ಮತ್ತಿತರರು ಇದ್ದರು.



ಹೊಂಬೆಳಕು ಮಾಸಿಕ ತತ್ತ್ವ ಚಿಂತನಾ ಗೋಷ್ಠಿಯನ್ನು ಪ್ರಾಧ್ಯಾಪಕಿ ಸಣ್ಣುವಂಡ ಬಿ.ತೇಜ ಉದ್ಘಾಟಿಸಿದರು.

ಪೊದಕೋಟೆಯಲ್ಲಿ ಹುಲಿ ಹೆಜ್ಜೆ ಗುರುತು ಪತ್ತೆ

ಮಡಿಕೇರಿ, ನ.11–ವಿರಾಜಪೇಟೆ ತಾಲೂಕಿನ ಚಂಬೆಬೆಳ್ಳೂರು ಗ್ರಾಮದ ಪೊದಕೋಟೆಯಲ್ಲಿ ಹುಲಿ ಹೆಜ್ಜೆ ಗುರುತುಗಳು ಪತ್ತೆಯಾಗಿದ್ದು, ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿದೆ.

ಸ್ಥಳೀಯ ನಿವಾಸಿ ಮಂಡೆಪಂಡ ಜಾಲಿ ಗಣಪತಿ ಅವರ ಗದ್ದೆಯಲ್ಲಿ ಹುಲಿ ಹೆಜ್ಜೆಗಳು ಕಂಡು ಬಂದಿದ್ದು, ಭಯ ಭೀತರಾದ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದರು. ನಂತರ ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಅ.10ರಂದು ಇದೇ ಗ್ರಾಮದಲ್ಲಿ ಹಸು ಮತ್ತು ಕರುವೊಂದನ್ನು ಹುಲಿ ಬಲಿ ಪಡೆದಿದ್ದು, ಇದೀಗ ಗ್ರಾಮದಲ್ಲಿ ಮತ್ತೆ ಹುಲಿ ಹೆಜ್ಜೆ ಕಂಡು ಬಂದಿರುವುದು ಗ್ರಾಮಸ್ಥರನ್ನು ಮತ್ತಷ್ಟು ಆತಂಕಕ್ಕೆ ದೂಡಿದೆ.


ಚಂಬೆಬೆಳ್ಳೂರು ಗ್ರಾಮದ ಪೊದಕೋಟೆಯಲ್ಲಿ ಮತ್ತೆಯಾದ ಹುಲಿ ಹೆಜ್ಜೆ ಗುರುತು.

ಹೋರಾಟದಿಂದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ


ಚಾ.ನಗರದ ಜಿಲ್ಲಾ ಕಸಾಪ ಕಚೇರಿಯಲ್ಲಿ 10ನೇ ದಿನದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮ ನಡೆಯಿತು.

ಚಾಮರಾಜನಗರ, ನ.11–ಹೋರಾಟದಿಂದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕಾಣಬಹುದು ಎಂದು ದಲಿತ ಮುಖಂಡ ಸಿ.ಎಂ.ಕೃಷ್ಣಮೂರ್ತಿ ಹೇಳಿದರು.

ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಕಚೇರಿಯಲ್ಲಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾ, ಜಿಲ್ಲಾ ಮತ್ತು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಶ್ರಯದಲ್ಲಿ 50 ದಿನ ಆಯೋಜಿಸಿರುವ ಕನ್ನಡ ರಾಜ್ಯೋತ್ಸವದ 10ನೇ ದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರಗಳು ಸಮಸ್ಯೆಗಳನ್ನು ಬಗೆಹರಿಸಲು ಮುಂದಾಗುವುದಿಲ್ಲ. ತಮ್ಮಿಂದ ಮತಗಳನ್ನು ಪಡೆದು ಚುನಾಯಿತರಾದ ಜನಪ್ರತಿನಿಧಿಗಳು ನಮ್ಮ ಮಾತು ಕೇಳುವುದಿಲ್ಲ. ಹೋರಾಟಗಾರರು ಬೀದಿಗಿಳಿದು ಹೋರಾಟ ಮಾಡಿದಾಗಲೇ ಸರ್ಕಾರ, ಜನಪ್ರತಿನಿಧಿಗಳು, ಅಧಿಕಾರಿಗಳು ಎಚ್ಚೆತ್ತುಕೊಳ್ಳುತ್ತಾರೆ. ನಾಡು, ನುಡಿ, ಭಾಷೆ ವಿಚಾರದಲ್ಲೇ ಹೋರಾಟಗಾರರು ಬೀದಿಗೆ ಬಂದಾಗಲೇ ಸರ್ಕಾರಗಳು ಕಣ್ಣು ತೆರೆಯುತ್ತವೆ. ಇಲ್ಲ ಅಂದರೆ ಯಾವುದೇ ಪಕ್ಷ ಇರಲಿ ಎಲ್ಲರೂ ಒಂದೇ. ಹಾಗಾಗಿ ಹೋರಾಟಗಾರರದ್ದೇ ಒಂದು ಪಕ್ಷ, ಒಂದು ಜಾತಿಯಾಗಿದೆ ಎಂದರು.

ಕನ್ನಡ ಹೋರಾಟಗಾರರನ್ನು ಸ್ಮರಣೆ ಮಾಡುವ ಕಾರ್ಯಕ್ರಮ ಬಹಳ ಅರ್ಥಪೂರ್ಣವಾದದ್ದು, ಕನ್ನಡ ಚಳುವಳಿಗಾರರಾದ ಹ.ವಿ.ನಟರಾಜು, ಗು.ಪುರುಷೋತ್ತಮ ಅವರು ಸಾವಿರಾರು ಕನ್ನಡ ಪರ ಹೋರಾಟ ಮಾಡಿದ್ದಾರೆ. ಹ.ವಿ.ನಟರಾಜು ಪ್ರತಿ ಹೋರಾಟದಲ್ಲೂ ಕೊಡುಗೈದಾನಿಯಾಗಿದ್ದರು. ನಾನು ಗು.ಪುರುಷೋತ್ತಮ ಒಡನಾಡಿಯಾಗಿದ್ದೇವೆ ಎಂದು ಹೇಳಿದರು.

ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಾಗಿತ್ತು: ಕನ್ನಡ ಪರ ಹೋರಾಟಗಾರ ಶಾ.ಮುರುಳಿ ಮಾತನಾಡಿ, ಸರ್ಕಾರ ಕನ್ನಡಪರ ಹೋರಾಟಗಾರರ ಹ.ವಿ.ನಟರಾಜು ಅವರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಾಗಿತ್ತು. ಪೊಲೀಸರು, ರಾಜ್ಯ ಹಾಗೂ ರಾಷ್ಟ್ರೀಯ ಗುಪ್ತಚರ ಇಲಾಖೆ ವರದಿ ಪಡೆದು ಅರ್ಹರಿಗೆ ರಾಜ್ಯೋತ್ಸವ ಪ್ರಶಸ್ತಿ ಕೊಡುವ ಕೆಲಸ ಆಗಬೇಕು. ಆದರೆ, ಅರ್ಜಿ ಹಾಕಿಕೊಂಡು ಪ್ರಶಸ್ತಿ ಪಡೆಯಬೇಕೆ? ಸರ್ಕಾರ ಸ್ವಇಚ್ಛೆಯಿಂದ ನೀಡಿದರೆ ಸ್ವೀಕರಿಸಬಹುದು. ಆಗ ಪ್ರಶಸ್ತಿ ಪಡೆದ ತೃಪ್ತಿ ಇರುತ್ತದೆ. ಸರ್ಕಾರ, ಸಚಿವರು, ಶಾಸಕರು, ಅಧಿಕಾರಿಗಳು ಚಮಚಗಿರಿ ಮಾಡುವವರಿಗೆ ಪ್ರಶಸ್ತಿ ನೀಡುತ್ತಿದ್ದಾರೆ ಎಂದು ಕಿಡಿಕಾಡಿದರು.

ಕನ್ನಡ ಮಹಾಸಭಾದ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ, ನಗರಸಭಾ ಮಾಜಿ ಅಧ್ಯಕ್ಷ ಮಹದೇವ ನಾಯಕ, ತಮಿಳು ಸಂಘದ ಜಗದೀಶ್, ಹ.ವಿ. ನಟರಾಜು ಅವರ ಪುತ್ರ ಮೋಹನ್ ಕುಮಾರ್, ವಿಶ್ವಕುಮಾರ್ ಮಾತನಾಡಿದರು.

ನಿಜಧ್ವನಿ ಗೋವಿಂದರಾಜು, ನಂಜುಂಡಶೆಟ್ಟಿ, ಪಣ್ಯದಹುಂಡಿ ರಾಜು, ರಾಚಪ್ಪ, ಶಿವಲಿಂಗಮೂರ್ತಿ, ಬಸವರಾಜು ನಾಯಕ, ಮುತ್ತುರಾಜು, ಆಟೋ ಲಿಂಗರಾಜು, ಆಟೋ ಶಂಕರ್, ಮಹೇಶ್, ಅಭಿ, ಗಡಿ ಯಜಮಾನ ಮಹದೇವಶೆಟ್ಟಿ, ಜಯಣ್ಣ, ಮಲ್ಲಿಕಾರ್ಜುನ, ನಾಗೇಶ್, ಪ್ರದೀಪ್, ಮೋಹನ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಟಿಪ್ಪು, ಆಜಾದ್ ಜಯಂತಿ ಆಚರಣೆ...



ಚಾಮರಾಜನಗರ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಟಿಪ್ಪು ಸುಲ್ತಾನ್, ಮೌಲಾನಾ ಅಬ್ದುಲ್ ಕಲಾಂ ಆಜಾದ್ ಜಯಂತಿ ಆಚರಿಸಲಾಯಿತು. ಶಾಸಕ ಸಿ.ಪುಟ್ಟರಂಗಶೆಟ್ಟಿ, ಚುಡಾ ಅಧ್ಯಕ್ಷ ಮಹಮ್ಮದ್, ಮಾಜಿ ಅಧ್ಯಕ್ಷ ಸೈಯದ್ ರಫೀ, ಅಸ್ಗರ್, ಅಲ್ಪ ಅಸಂಖ್ಯಾತ ಘಟಕ ಜಿಲ್ಲಾಧ್ಯಕ್ಷ ಅಫ್ಜಲ್ ಷರೀಫ್, ಉಪಾಧ್ಯಕ್ಷ ಇನಾಯತ್ ಪಾಷ, ಪ್ರಧಾನ ಕಾರ್ಯದರ್ಶಿ ಆಸೀಫ್ ಉಲ್ಲಾ, ಜಿಲ್ಲಾ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಜಿಲ್ಲಾ ವಕ್ತಾರ ಕೆರೆಹಳ್ಳಿ ನವೀನ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರಕಲವಾಡಿ ಗುರುಸ್ವಾಮಿ, ಎಪಿಎಂಸಿ ಅಧ್ಯಕ್ಷ ಎಚ್.ಎನ್.ಮಹದೇವಸ್ವಾಮಿ, ತಾಪಂ ಮಾಜಿ ಸದಸ್ಯರಾದ ಮಹದೇವ ಶೆಟ್ಟಿ, ಕುಮಾರ್ ನಾಯಕ್, ಎಚ್‌ಎನ್ ಖಾನ್, ಇಮ್ರಾನ್, ಎ.ಎ.ಅಬ್ಬಾಸ್, ನಗರಸಭಾ ಮಾಜಿ ಸದಸ್ಯ ಚೆಂಗುಮಣಿ, ಸಿದ್ಧಿಕ್ ಉಲ್ಲಾ, ಅಪ್ಸರ್ ಷರೀಫ್, ಎಂ.ಶಿವಮೂರ್ತಿ, ಕರಿನಂಜನಪುರ ಸ್ವಾಮಿ, ಸೈಯದ್ ಮುಸಾಯಿಬ್, ಗ್ರಾಪಂ ಅಧ್ಯಕ್ಷ ರೂಪೇಶ್, ಮರಿಯಾಲದಹುಂಡಿ ಕುಮಾರ್ ಇತರರಿದ್ದರು.

ಒನಕೆ ಓಬವ್ವ ದೇಶಪ್ರೇಮ ಮಾದರಿ

ಜಯಂತಿ ಆಚರಣೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ಸ್ಮರಣೆ

ಚಾಮರಾಜನಗರ, ನ.11–ನಾಡು–ನುಡಿಗಾಗಿ ಕೆಚ್ಚೆದೆಯಿಂದ ಹೋರಾಡಿ ಪ್ರಾಣತ್ಯಾಗ ಮಾಡಿದ ವೀರವನಿತೆ ಒನಕೆ ಓಬವ್ವ ಅವರ ದೇಶಪ್ರೇಮ ಹಾಗೂ ಆದರ್ಶ ಮೌಲ್ಯಗಳು ಎಲ್ಲರಿಗೂ ಮಾದರಿಯಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ಸ್ಮರಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸ್ತ್ರೀ ಅಬಲೆಯಲ್ಲ, ಸಬಲೆ ಎಂಬುದಕ್ಕೆ ಓಬವ್ವ ಸಾಕ್ಷಿಯಾಗಿದ್ದಾರೆ. ಚಿತ್ರದುರ್ಗದ ಮದಕರಿನಾಯಕ ಕೋಟೆ ಕಾಯುವ ಕಾಯಕ ನಿರ್ವಹಿಸುತ್ತಿದ್ದ ಹೆಂಡತಿಯಾಗಿದ್ದ ಓಬವ್ವ ಅವರು ಸತಿಧರ್ಮದ ಜೊತೆಗೆ ನಾಡು, ನುಡಿ, ಕೋಟೆ, ಜನರ ರಕ್ಷಣೆಗಾಗಿ ಟೊಂಕಕಟ್ಟಿ ಹೋರಾಡಿದರು. ಹೈದರಾಲಿ ಬಲಶಾಲಿ ಸೈನ್ಯಕ್ಕೆ ಭಯ ಹುಟ್ಟಿಸಿದ್ದ ಓಬವ್ವ ದೇಶಪ್ರೇಮಕ್ಕೆ ಹೆಸರುವಾಸಿಯಾಗಿದ್ದಾರೆ. ಅವರ ಧೈರ್ಯ, ಸಾಹಸ ನಮ್ಮೆಲ್ಲರಿಗೂ ಪ್ರೇರಣೆಯಾಗಿದೆ ಎಂದರು.

ದೇಶದಲ್ಲಿ ಮಹಾನ್ ನಾಯಕರು, ಸಾಧು, ಸಂತರು, ಹೋರಾಟಗಾರರು ಯಾವುದೇ ಸಮುದಾಯಕ್ಕೆ ಸೀಮಿತರಾದವರಲ್ಲ. ವಿದ್ಯಾರ್ಥಿಗಳು ಅವರ ಆದರ್ಶ ಹಾಗೂ ತತ್ವಗಳನ್ನು ಅರಿಯಲು ಅನುಕೂಲವಾಗುವಂತೆ ಓಬವ್ವರ ಚರಿತ್ರೆಯನ್ನು ಒಳಗೊಂಡ ಪುಸ್ತಕವನ್ನು ಎಲ್ಲಾ ಸರ್ಕಾರಿ ಶಾಲೆಗಳಿಗೆ ತಲುಪಿಸಲಾಗುವುದು. ಆ ಮೂಲಕ ಓಬವ್ವ ಅವರ ಚರಿತ್ರೆ ಎಲ್ಲೆಡೆ ಪಸರಿಸಲಿದೆ ಎಂದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ ಮಾತನಾಡಿ, ವೀರವನಿತೆ ಎಂದರೆ ಮೊದಲು ನೆನಪಿಗೆ ಬರುವ ಹೆಸರೇ ಓಬವ್ವ. ಪುರುಷ ಪ್ರಧಾನ ಸಮಾಜದಲ್ಲಿ ತಮ್ಮದೆ ಛಾಪು ಮೂಡಿಸಿ, ಶೌರ್ಯ ಸಾಹಸದಿಂದ ಮಹಿಳೆಯರಿಗೆ ವಿಶೇಷ ಸ್ಥಾನಮಾನ ಕಲ್ಪಿಸಿ ಸಮಾಜದ ಮುಂಚೂಣಿಗೆ ತರುವಲ್ಲಿ ಓಬವ್ವ ಕೊಡುಗೆ ಅಪಾರ. ಓಬವ್ವ ನಮ್ಮೆಲ್ಲರಿಗೂ ಸ್ಫೂರ್ತಿಯ ಚಿಲುಮೆಯಾಗಿದ್ದಾರೆ. ಹೆಣ್ಣು ಮಕ್ಕಳಿಗೆ ಎಲ್ಲರೂ ಗೌರವ ನೀಡಬೇಕು. ಅದು ಪ್ರತಿ ಮನೆಮನೆಯಿಂದಲೇ ಆರಂಭವಾಗಬೇಕು ಎಂದರು.

ಮುಖಂಡರಾದ ಸಿ.ಎಂ.ಕೃಷ್ಣಮೂರ್ತಿ, ಕೆ.ಎಂ. ನಾಗರಾಜು, ಚಾ.ರಂ.ಶ್ರೀನಿವಾಸಗೌಡ, ಡಾ.ರತ್ನಮ್ಮ ಹಾಗೂ ಜಾನಪದ ಗಾಯಕ ಸಿ.ಎಂ.ನರಸಿಂಹಮೂರ್ತಿ ಮಾತನಾಡಿ, ನಾಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಚರಿತ್ರೆಯಲ್ಲಿ ಇತಿಹಾಸ ಸೃಷ್ಟಿಸಿದ ಮಹಿಳೆಯರು ಅನೇಕರಿದ್ದಾರೆ. ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀ ಬಾಯಿ, ಬೆಳವಾಡಿ ಮಲ್ಲಮ್ಮರಂತೆ ಒನಕೆ ಓಬವ್ವ ಅವರು ಸಹ ಪ್ರಮುಖ ಸ್ಥಾನ ಪಡೆದಿದ್ದಾರೆ. ನಾಡಿಗೆ ಕೀರ್ತಿ ತಂದಿದ್ದಾರೆ. ಅವರೆಲ್ಲರ ಸ್ಮರಣೆ ಅವಶ್ಯವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಲಕ್ಷ್ಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್‌ಕುಮಾರ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ, ಮುಖಂಡರಾದ ಕೇತಮ್ಮ, ಮಹೇಶ್, ಸಿ.ಮಾದೇಗೌಡ ಇತರರಿದ್ದರು.


ಚಾಮರಾಜನಗರ ಡಿಸಿ ಕಚೇರಿಯಲ್ಲಿ ಆಯೋಜಿಸಿದ್ದ ಜಯಂತಿ ಕಾರ್ಯಕ್ರಮದಲ್ಲಿ ಒನಕೆ ಓಬವ್ವ ಭಾವಚಿತ್ರಕ್ಕೆ ಎಡಿಸಿ ಗೀತಾ ಹುಡೇದಾ, ಜಿಪಂ ಉಪ ಕಾರ್ಯದರ್ಶಿ ಪಿ.ಲಕ್ಷ್ಮೀ ಪುಷ್ಪಾರ್ಚನೆ ಮಾಡಿದರು.

ಅಂಬೇಡ್ಕರ್ ಸಂವಿಧಾನದಿಂದ ಸಮಾಜದ ಕಟ್ಟಕಡೆ ವ್ಯಕ್ತಿಗೂ ಸೌಲಭ್ಯ

ಚಾಮರಾಜನಗರ. ನ.11–ಅಂಬೇಡ್ಕರ್ ಇಡೀ ವಿಶ್ವವೇ ಮೆಚ್ಚುವ ಸಂವಿಧಾನ ಬರೆದಿದ್ದು, ಇದರಿಂದ ಸಮಾಜದ ಕಟ್ಟಕಡೆ ವ್ಯಕ್ತಿಯೂ ಉನ್ನತ ಸ್ಥಾನ ಪಡೆಯಲು ಸಾಧ್ಯವಾಗಿದೆ ಎಂದು ಚಾಮರಾಜನಗರ ಹಾಲು ಒಕ್ಕೂಟದ ಅಧ್ಯಕ್ಷ ವೈ.ಸಿ.ನಾಗೇಂದ್ರ ಅಭಿಪ್ರಾಯಪಟ್ಟರು.

ತಾಲೂಕಿನ ಕುದೇರು ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಜನಹಿತಾ ಶಕ್ತಿ ಹೋರಾಟ ವೇದಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ನಡೆದ ಸಂವಿಧಾನ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ಭಾರತದ ಅಭಿವೃದ್ಧಿಗೆ ಪೂರಕವಾದ ಸುಭದ್ರ ಸಂವಿಧಾನ ರಚಿಸಿ ದೇಶಕ್ಕೆ ಅರ್ಪಿಸಿದ್ದಾರೆ. ಶಾಲಾ–ಕಾಲೇಜು ವಿದ್ಯಾರ್ಥಿಗಳು ವಿದ್ಯಾರ್ಥಿ ದೆಸೆಯಲ್ಲೇ ಸಂವಿಧಾನ ಅಧ್ಯಯನ ಮಾಡಬೇಕು. ತಾವು ಇಂದು ಉನ್ನತ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದೇವೆ ಎಂದರೆ ಅದಕ್ಕೆ ಸಂವಿಧಾನ ಕಾರಣ ಎಂದರು.

ಸಾಹಿತಿ ಕೃಷ್ಣಕುಮಾರ್ ಮಾತನಾಡಿ, ಅಂಬೇಡ್ಕರ್ 60 ದೇಶಗಳಿಗೆ ಭೇಟಿ ನೀಡಿ ಅಲ್ಲಿನ ಸಂವಿಧಾನ ಓದಿ, ವಿವಿಧ ಭಾಷೆ, ಧರ್ಮ, ಜಾತಿ ಮತಗಳಿರುವ ಭಾರತದ ಮುಂದಿನ ಹಲವಾರು ವರ್ಷಗಳ ಗುರಿ ಇಟ್ಟುಕೊಂಡು ಸಂವಿಧಾನ ರಚಿಸಿದ್ದಾರೆ. ಇದರಿಂದ ಸಮಾಜದ ಎಲ್ಲಾ ವರ್ಗದವರು ಸಂವಿಧಾನಾತ್ಮಕ ಸೌಲಭ್ಯ ಪಡೆಯಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಕುದೇರು ಪೊಲೀಸ್ ಠಾಣೆ ಉಪನಿರೀಕ್ಷಕಿ ಎಸ್. ಕುಮುದಾ ಮಾತನಾಡಿ, ಅಮೂಲ್ಯವಾದ ಸಂವಿಧಾನ ಬರೆದು 1949ರ ನ.26ರಂದು ಅಂಬೇಡ್ಕರ್ ದೇಶಕ್ಕೆ ಸಮರ್ಪಣೆ ಮಾಡಿದರು. 1950 ಜ.26ರಂದು ಅದನ್ನು ಅಧಿಕೃತವಾಗಿ ಜಾರಿಗೆ ತರಲಾಯಿತು. ಮಾನವೀಯ ಮೌಲ್ಯಗಳ ಆಗರವಾಗಿರುವ ಸಂವಿಧಾನದ ಮೂಲ ಆಶಯಗಳನ್ನು ನಾವು ಪಾಲನೆ ಮಾಡುವ ಅಗತ್ಯವಿದೆ ಎಂದರು.

ಜನಹಿತಾ ಶಕ್ತಿ ಹೋರಾಟ ವೇದಿಕೆ ಜಿಲ್ಲಾಧ್ಯಕ್ಷ ರಾಮಸಮುದ್ರ ಸುರೇಶ್ ಮಾತನಾಡಿ, ವಿದ್ಯಾರ್ಥಿಗಳಿಗೆ ಸಂವಿಧಾನದ ಮಹತ್ವ ಮೂಡಿಸುವುದೇ ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು.

ಸಿಕ್ರಿಂ ಸಂಸ್ಥೆ ಜಿಲ್ಲಾಧ್ಯಕ್ಷ ಕೆ.ಸಿ.ರೇವಣ್ಣ, ಪ್ರಾಂಶುಪಾಲ ಥಿಯೋಡರ್ ಲೂಥಸ್, ಸಿದ್ಧಾರ್ಥ ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಸಿ.ರಂಗಸ್ವಾಮಿ, ಉಮ್ಮತ್ತೂರು ಸೋಮಣ್ಣ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.



ಕುದೇರು ಸರ್ಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ನಡೆದ ಸಂವಿಧಾನ ಅರಿವು ಕಾರ್ಯಕ್ರಮವನ್ನು ಚಾಮುಲ್ ಅಧ್ಯಕ್ಷ ವೈ.ಸಿ. ನಾಗೇಂದ್ರ ಉದ್ಘಾಟಿಸಿದರು.


ಕೊಳ್ಳೇಗಾಲದ ವಸಂತ ಕುಮಾರಿ ಕಾಲೇಜಿನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಕಾನೂನು ಸೇವೆಗಳ ದಿನಾಚರಣೆಯನ್ನು ನ್ಯಾಯಾಧೀಶೆ ಸುನೀತಾ ಉದ್ಘಾಟಿಸಿದರು.

ಕಾನೂನು ಸೇವೆಗಳ ದಿನಾಚರಣೆ ಮೂಲಕ ಜಾಗೃತಿ

ಕೊಳ್ಳೇಗಾಲ: ಎಲ್ಲಾ ನಾಗರಿಕರಿಗೆ ಸಮಂಜಸ ನ್ಯಾಯಯುತ ಮತ್ತು ನ್ಯಾಯಾಲಯದ ಕಾರ್ಯವಿಧಾನ ಜಾಗೃತಿ ಮೂಡಿಸುವ ಸಲುವಾಗಿ ರಾಷ್ಟ್ರೀಯ ಕಾನೂನು ಸೇವೆಗಳ ದಿನ ಆಚರಿಸಲಾಗುತ್ತಿದೆ ಎಂದು ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶೆ ಸುನೀತಾ ಹೇಳಿದರು.

ಪಟ್ಟಣದ ವಸಂತ ಕುಮಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿ ತಾಲೂಕು ಕಾನೂನು ಸೇವೆಗಳ ಸಮಿತಿ ತಾಲೂಕು ವಕೀಲರ ಸಂಘ, ಸರ್ಕಾರಿ ಎಸ್‌ವಿಕೆ ಬಾಲಕಿಯರ ಪದವಿಪೂರ್ವ ಕಾಲೇಜು ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಕಾನೂನು ಸೇವೆಗಳ ದಿನದ ಕಾನೂನು ಅರಿವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಶಾಲಾ–ಕಾಲೇಜುಗಳಲ್ಲಿ ಕಾನೂನು ಸಾಕ್ಷರತಾ ಕ್ಲಬ್‌ಗಳನ್ನು ಪ್ರಾರಂಭಿಸಿ, ಕಾನೂನು ಸೇವೆಗಳ ಸಮಿತಿ ಮೂಲಕ ವಿದ್ಯಾರ್ಥಿಗಳಲ್ಲಿ ಕಾನೂನು ಅರಿವು ಮೂಡಿಸಲಾಗುತ್ತಿದೆ. ಲೋಕ ಅದಾಲತ್ ಕಾರ್ಯಕ್ರಮ ಹಾಗೂ ಮಧ್ಯಸ್ಥಿಕೆ ಪ್ರಕ್ರಿಯೆ ಮೂಲಕವೂ ನ್ಯಾಯಾಲಯದ ವ್ಯಾಜ್ಯಗಳ ಅವಧಿ ಕಡಿಮೆ ಮಾಡಲು ನಿರಂತರ ಪ್ರಯತ್ನ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶರಾದ ನಂದಿನಿ, ವಸಂತ ಕುಮಾರಿ, ಪಪೂ ಕಾಲೇಜಿನ ಪ್ರಭಾರ ಪ್ರಾಂಶುಪಾಲ ಜೋಸೆಫ್ ಅಲೆಕ್ಸಾಂಡರ್, ವಕೀಲರ ಸಂಘದ ಕಾರ್ಯದರ್ಶಿ ಸಿ.ಬಿ.ಮಹೇಶ್‌ಕುಮಾರ್, ವಕೀಲ ವೆಂಕಟಾಚಲ ಇನ್ನಿತರಿದ್ದರು.

ಒಂದನೇ ಪುಟದಿಂದ

ಕ್ಯೂಆರ್ ಕೋಡ್ ಟಿಕೆಟ್ ವ್ಯವಸ್ಥೆ ಆರಂಭ

ಟಿಕೆಟ್ ಹೊರತುಪಡಿಸಿ ಸಾಮಾನ್ಯ (ಜನರಲ್) ಮತ್ತು ಪ್ಲಾಟ್‌ಫಾರಂ ಟಿಕೆಟ್ ಖರೀದಿಗೆ ಮೊದಲ ಹಂತ ದಲ್ಲಿ ಕ್ಯೂಆರ್ ಕೋಡ್ ವ್ಯವಸ್ಥೆ ಮಾಡಲಾಗಿದೆ. ಆದಾಗ್ಯೂ, ಪ್ರಯಾಣಿಕರು ನಗದು ರೂಪದಲ್ಲೇ ಪಾವತಿಸಿ ಟಿಕೆಟ್ ಖರೀದಿಸುತ್ತಿದ್ದಾರೆ. ಕ್ಯೂಆರ್ ಕೋಡ್ ಬಳಸುತ್ತಿರುವವರ ಸಂಖ್ಯೆ ತೀರಾ ಕಡಿಮೆ ಇರುವುದರಿಂದ ಈ ವ್ಯವಸ್ಥೆ ಜನಪ್ರಿಯಗೊಳಿಸಲು ಅರಿವು ಅಭಿಯಾನ ಮಾಡುತ್ತಿದ್ದೇವೆ ಎಂದು ತಿಳಿಸಿದರು. ನೈರುತ್ಯ ರೈಲ್ವೆ ವಿಭಾಗವು ಕಳೆದ ಆಗಸ್ಟ್ ಮಾಹೆಯಲ್ಲೇ ಈ ವ್ಯವಸ್ಥೆ ಪರಿಚಯಿಸಿದ್ದರೂ, ಶೇ. 2ರಿಂದ 3ರಷ್ಟು ಪ್ರಯಾಣಿಕರು ಮಾತ್ರ ಕ್ಯೂಆರ್ ಕೋಡ್ ಬಳಸುತ್ತಿದ್ದಾರೆ. 81 ರೈಲ್ವೆ ನಿಲ್ದಾಣಗಳ 94 ಅನ್‌ರಿಸರ್ವ್ಡ್ ಟಿಕೆಟಿಂಗ್ ಸಿಸ್ಟಂ ಕೌಂಟರ್‌ಗಳಲ್ಲಿ ಕ್ಯೂಆರ್ ಕೋಡ್ ಸೌಲಭ್ಯ ಒದಗಿಸಲಾಗಿದೆ ಎಂದು ಅವರು ತಿಳಿಸಿದರು.

ಮೊಬೈಲ್ ವಾಲೆಟ್ಸ್ ಅಥವಾ UPI ಬೇಸ್ಡ್ ಬ್ಯಾಂಕ್ ಅಕೌಂಟ್ ಮೂಲಕ ಸ್ಕ್ಯಾನಿಂಗ್ ಮಾಡಿ ಸುಲಭವಾಗಿ ರೈಲ್ವೆ ಟಿಕೆಟ್ ಖರೀದಿಸಬಹು ದಾಗಿದೆ. 12 ಸ್ಥಳಗಳಲ್ಲಿ 25 ಆಟೋಮ್ಯಾಟಿಕ್ ಟಿಕೆಟ್ ವೆಂಡಿಂಗ್ ಮೆಷಿನ್ (ಎಟಿವಿಎಂಎಸ್)ಗಳನ್ನು ಅಳವಡಿಸಲಾಗಿದೆ ಎಂದು ಗಿರೀಶ್ ಧರ್ಮರಾಜ್ ಕಳಗೊಂಡ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಸಾರಿಗೆ ಸಂಸ್ಥೆ: ಮೈಸೂರಿನಿಂದ ಬೆಂಗಳೂರು ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ನಡುವೆ ಸಂಚರಿಸುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಫ್ಲೈ ಬಸ್‌ಗಳಲ್ಲಿ ಕ್ಯೂಆರ್ ಕೋಡ್ ಟಿಕೆಟ್ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ಗ್ರಾಮಾಂತರ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದರು. ಬೆಂಗಳೂರಿನ ಕೆಲ ಮಾರ್ಗಗಳ ಬಸ್‌ಗಳಲ್ಲೂ ಈ ವ್ಯವಸ್ಥೆ ಕಲ್ಪಿಸಲಾಗಿದೆ. ಮೈಸೂರು ವಿಭಾಗದಲ್ಲಿ ಅತೀ ಶೀಘ್ರ ಪೂರ್ಣ ಪ್ರಮಾಣದಲ್ಲಿ ಕ್ಯೂಆರ್ ಕೋಡ್ ವ್ಯವಸ್ಥೆ ಮಾಡಲಾಗುವುದು ಎಂದ ಅವರು, ಪ್ರಯಾಣಿಕರು ನಗದು ಪಾವತಿಸಿ ಚಿಲ್ಲರೆ ಸಮಸ್ಯೆ ಎದುರಿಸುವ ಬದಲು, ತಮ್ಮ ಮೊಬೈಲ್ ಮೂಲಕ ಸ್ಕ್ಯಾನ್ ಮಾಡಿ ಬಸ್ ಟಿಕೆಟ್ ಪಡೆಯಬಹುದಾಗಿದೆ ಎಂದರು.

ಜಿ.ಟಿ.ದೇವೇಗೌಡರಿಗೆ ಎಚ್ಚರಿಸಿದ್ದೇನೆ...

ದೇವೇಗೌಡರು ಮತ್ತು ಕುಮಾರಸ್ವಾಮಿ ಅವರು ಒಬ್ಬ ಒಕ್ಕಲಿಗನನ್ನೂ ಬೆಳೆಯಲು ಬಿಟ್ಟಿಲ್ಲ, ನಾನು ಹಿಂದುಳಿದವನು ಅಂತ ನನ್ನನ್ನು ವಿರೋಧಿಸುತ್ತಾರೆ. ವೈ.ಕೆ. ರಾಮಯ್ಯ, ನಾಗೇಗೌಡ, ಬಚ್ಚೇಗೌಡ, ವರದೇಗೌಡ, ಭೈರೇಗೌಡ ಸೇರಿ ಸಾಲು–ಸಾಲು ಒಕ್ಕಲಿಗರ ರಾಜಕೀಯ ಬದುಕನ್ನು ಮುಗಿಸಿದರು. ಅಷ್ಟೇ ಅಲ್ಲ, ಬೇರೆಯವರು ಒಕ್ಕಲಿಗ ನಾಯಕರಾಗಿ ಬೆಳೆಯದಂತೆ ಮಾಡುತ್ತಿದ್ದಾರೆ ಎಂದರು. ಬುದ್ಧಿವಂತ, ರಾಜಕೀಯ ಪ್ರಜ್ಞೆ ಇರುವ ಒಕ್ಕಲಿಗರನ್ನು ದೇವೇಗೌಡರು ಬೆಳೆಯಲು ಬಿಡದೆ ಮುಗಿಸುತ್ತಾರೆ. ಈಗ ಡಿ.ಕೆ.ಶಿವಕುಮಾರ್, ಡಿ.ಕೆ.ಸುರೇಶ್ ಅವರನ್ನೂ ಮುಗಿಸುವ ಪ್ರಯತ್ನ ಮಾಡುತ್ತಿದ್ದಾರೆ.

ಮುಖ್ಯಮಂತ್ರಿ ಆಗಲು ಸಾಧ್ಯವೇ ಇರಲಿಲ್ಲ: ನಾನು, ಜಾಲಪ್ಪ ಅವರು ಇಲ್ಲದೇ ಹೋಗಿದ್ದರೆ 1994ರಲ್ಲಿ ದೇವೇಗೌಡರು ಮುಖ್ಯಮಂತ್ರಿ ಆಗಲು ಸಾಧ್ಯವೇ ಇರಲಿಲ್ಲ. ದೇವೇಗೌಡರನ್ನು ಜನತಾದಳದ ರಾಜ್ಯಾಧ್ಯಕ್ಷರನ್ನಾಗಿ ಮಾಡಲು ಅಂದಿನ ರಾಷ್ಟ್ರೀಯ ಅಧ್ಯಕ್ಷ ಎಸ್.ಆರ್. ಬೊಮ್ಮಾಯಿ ಸಿದ್ಧರಿರಲಿಲ್ಲ. ಏಕೆಂದರೆ ಇವರು ಬೊಮ್ಮಾಯಿ ಸರ್ಕಾರ ಬೀಳುವಂತೆ ಮಾಡಿದ್ದರು. ಆದರೂ ನಾವೆಲ್ಲಾ ಒಟ್ಟಾಗಿ ದೇವೇಗೌಡರ ಪರ ನಿಂತೆವು. ಈಗ ಸಿದ್ದರಾಮಯ್ಯ ಅವರಿಗೆ ಸೊಕ್ಕು, ಅಹಂ ಎನ್ನುತ್ತಿದ್ದಾರೆ. ಇದು ಪಾಳೇಗಾರಿಕೆ ಅಲ್ಲವೇ ದೇವೇಗೌಡರೇ ಎಂದು ಪ್ರಶ್ನಿಸಿದರು.

ಆಕಸ್ಮಿಕ ಪ್ರಧಾನಿ: ಆಕಸ್ಮಿಕವಾಗಿ ಪ್ರಧಾನಿ ಆದ ದೇವೇಗೌಡರು ಪಾಳೆಗಾರಿಕೆ ಮಾತ್ರ ಬಿಡಲ್ಲ. ದಲಿತರು, ಹಿಂದುಳಿದವರನ್ನು ಅವರಿಗೆ ಕಂಡರೆ ಆಗಲ್ಲ. ಒಕ್ಕಲಿಗರನ್ನು ಬೆಳೆಯಲು ಬಿಡಲ್ಲ, ಇದೆಲ್ಲಾ ಪಾಳೇಗಾರಿಕೆ ಅಲ್ಲವೇ. ಮೊಮ್ಮಗನಿಗಾಗಿ ಒಂದು ವಾರದಿಂದ ಚನ್ನಪಟ್ಟಣದಲ್ಲೇ ಬಿಡಾರ ಹೂಡಿದ್ದಾರೆ, ಜೆಡಿಎಸ್ ಅಥವಾ ಬಿಜೆಪಿಯಿಂದ ಬೇರೆ ಯಾರಾದರೂ ಸ್ಪರ್ಧಿಸಿದ್ದರೆ, ಎನ್‌ಡಿಎ ಅಭ್ಯರ್ಥಿಯಾಗಿ ಯೋಗೇಶ್ವರ್ ಸ್ಪರ್ಧಿಸಿದ್ದರೆ ದೇವೇಗೌಡರು ವಾರಗಟ್ಟಲೆ ಚನ್ನಪಟ್ಟಣದಲ್ಲಿ ಬೀಡುಬಿಟ್ಟು ಮತ ಕೇಳುತ್ತಿದ್ದರೆ ಎಂದು ಪ್ರಶ್ನಿಸಿದರು.

ಗೌಡರಿಗೆ ಹೊಟ್ಟೆಉರಿ: ನಾನು ಎರಡನೇ ಬಾರಿಗೆ ಮುಖ್ಯಮಂತ್ರಿಯಾದೆ ಎಂದು ದೇವೇಗೌಡರಿಗೆ ಹೊಟ್ಟೆಯುರಿ. ಅದಕ್ಕೇ ನಮ್ಮ ಸರ್ಕಾರ ಕಿತ್ತಾಕುತ್ತೇವೆ ಎನ್ನುತ್ತಿದ್ದಾರೆ. ರಾಜ್ಯದ ಜನತೆ ಆರಿಸಿರುವ ನಮ್ಮ ಸರ್ಕಾರವನ್ನು ಕುಮಾರಸ್ವಾಮಿ, ದೇವೇಗೌಡರಿಂದ ಕೀಳಲು ಸಾಧ್ಯವಿಲ್ಲ. ನಿಮ್ಮ ಹೊಟ್ಟೆಯುರಿ ನಿಮ್ಮನ್ನೇ ಸುಡುತ್ತದೆಯೇ ಹೊರತು ನಮ್ಮನ್ನು ಏನೂ ಮಾಡಲು ಸಾಧ್ಯವಿಲ್ಲ.

ಮೊದಲ ಬಾರಿ ಮುಖ್ಯಮಂತ್ರಿಯಾಗಿ ಹಲವು ಭಾಗ್ಯಗಳನ್ನು ನೀಡಿದೆ, ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಐದು ಗ್ಯಾರಂಟಿಗಳನ್ನು ಜಾರಿ ಮಾಡಿ ನಮ್ಮ ಸಾಧನೆಯ ಸಾಕ್ಷಿಯಾಗಿ ರಾಜ್ಯದ ಜನತೆಯ ಮುಂದೆ ಇಟ್ಟಿದ್ದೇವೆ.

ನೀವು ಏನು ಸಾಧನೆ ಮಾಡಿದ್ದೀರಿ ಅಂತ ಚನ್ನಪಟ್ಟಣ ಜನತೆಯ ಎದುರು ಯಾವ ಮುಖ ಇಟ್ಟುಕೊಂಡು ಮತ ಕೇಳುತ್ತಿದ್ದೀರಿ ಎಂದರು.

ಬರೀ ಸುಳ್ಳು ಹೇಳ್ತಾರೆ: ಚುನಾವಣೆ ಮುಗಿದ ಮೇಲೆ ಗೃಹಲಕ್ಷ್ಮಿ ಸೇರಿ ಗ್ಯಾರಂಟಿಗಳನ್ನು ಸರ್ಕಾರ ಬಂದ್ ಮಾಡುತ್ತದೆ ಎಂದು ದೇವೇಗೌಡರು ಪರಮ ಸುಳ್ಳು ಹೇಳಿದ್ದಾರೆ. ಆದರೆ, ಒಂದು ಮಾತು ಹೇಳುವೆ, ಸಿದ್ದರಾಮಯ್ಯ ಒಮ್ಮೆ ಮಾತು ಕೊಟ್ಟರೆ ಯಾವುದೇ ಕಾರಣಕ್ಕೂ ತಪ್ಪಲ್ಲ. ನಮ್ಮ ಸರ್ಕಾರ ಯಾವ ಗ್ಯಾರಂಟಿಗಳನ್ನೂ ನಿಲ್ಲಿಸುವುದಿಲ್ಲ ಎಂದು ಘೋಷಿಸಿದರು. ವಕ್ಫ್ ವಿಚಾರದಲ್ಲೂ ಬಿಜೆಪಿ ಜೊತೆ ಸೇರಿ ಸುಳ್ಳು ಹೇಳುತ್ತಿದ್ದಾರೆ. ಯಾವುದೇ ಕಾರಣಕ್ಕೂ ಒಬ್ಬ ರೈತರನ್ನೂ ಒಕ್ಕಲೆಬ್ಬಿಸುವುದಿಲ್ಲ ಎಂಬುದಾಗಿ ಅಧಿಕೃತ ಘೋಷಣೆ ಮಾಡಿದ್ದೇವೆ ಎಂದು ಪುನರುಚ್ಚರಿಸಿದರು.

ನರೇಂದ್ರ ಮೋದಿ ಅವರಂತಹ ಸುಳ್ಳು ಪ್ರಧಾನಿಯನ್ನು ನಾನು ಹಿಂದೆಂದೂ ನೋಡಿಲ್ಲ. ಮೋದಿ ಮತ್ತೆ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುವುದಾಗಿ ದೇವೇಗೌಡರು ಹೇಳಿದ್ದರು. ಈಗ ಮೋದಿ ಅವರನ್ನೇ ಯದ್ವಾತದ್ವಾ ಹೊಗಳುತ್ತಿದ್ದಾರೆ ಎಂದು ಮುಖ್ಯಮಂತ್ರಿ ಛೇಡಿಸಿದರು.

ನಾನು, ಯಡಿಯೂರಪ್ಪ ಒಂದಾಗಿದ್ದೇವೆ!

ಕೇಂದ್ರ ಸಚಿವ ವಿ. ಸೋಮಣ್ಣ ಅವರು ಜನವರಿಯೊಳಗೆ ಈ ಸರ್ಕಾರ ಪತನವಾಗುತ್ತದೆ ಎಂದು ಜ್ಯೋತಿಷ್ಯ ನುಡಿದಿದ್ದಾರೆ. ನನಗಂತೂ ಜ್ಯೋತಿಷ್ಯ ನೋಡುವ ಅಭ್ಯಾಸವಿದೆ. ಆದರೆ, ಸೋಮಣ್ಣನಿಗೂ ಈ ಅಭ್ಯಾಸ ಯಾವಾಗ ಬಂತು ಎಂದು ಹಾಸ್ಯ ಚಟಾಕಿ ಹಾರಿಸಿದ ದೇವೇಗೌಡರು, 3 ತಿಂಗಳೊಳಗೆ ಈ ಸರ್ಕಾರ ಪತನಗೊಳ್ಳುತ್ತದೆ ಎಂದು ಹೇಳಿದರು.

ದೇವೇಗೌಡರ ಕುಟುಂಬವನ್ನು ಮುಗಿಸಲೇಬೇಕೆಂದು ಷಡ್ಯಂತ್ರ ನಡೆಸುತ್ತಿದ್ದಾರೆ. ಹಾಸನದಲ್ಲಿ ನಡೆದ ಪ್ರಕರಣ ಎಲ್ಲರಿಗೂ ಗೊತ್ತಿದೆ. ಆ ಸಂಬಂಧ ವಿಧಾನಸಭೆಯಲ್ಲಿ ಎದೆ ಚಾಚಿ ವಿಪಕ್ಷ ನಾಯಕನ ಕರ್ತವ್ಯ ನಿರ್ವಹಿಸಿದ ಆರ್. ಅಶೋಕ್, ಮಾಜಿ ಉಪಮುಖ್ಯಮಂತ್ರಿ ಅಶ್ವತ್ಥ ನಾರಾಯಣ ಎಲ್ಲರೂ ಈಗ ನಿಖಿಲ್ ಪರವಾಗಿ ನಿಂತಿದ್ದಾರೆ ಎಂದರು.

ಪ್ರಧಾನಿ ಮೋದಿ ಅವರು ರಾಜ್ಯಕ್ಕೆ ಅನುದಾನ ನೀಡುವುದರಲ್ಲಿ ಅನ್ಯಾಯ ಮಾಡುತ್ತಿದ್ದಾರೆ ಎಂದು ಹೇಳುತ್ತಿರುವ ಸಿದ್ದರಾಮಯ್ಯನವರನ್ನು, ಹಣಕಾಸು ಮಂತ್ರಿ ಮಾಡಿದ್ದೇ ನಾನು ಎಂದ ಗೌಡರು, 14 ಬಜೆಟ್ ಮಂಡಿಸಿದ್ದೀನಿ ಎಂದು ಬೀಗುತ್ತಿರುವ ಅವರು, ಕುಮಾರಸ್ವಾಮಿ ಬಜೆಟ್ ಮಂಡಿಸಲು ಆರಂಭಿಸಿದಾಗ ಮೈತ್ರಿ ಪಕ್ಷದಲ್ಲಿದ್ದರೂ ಇವರ ಬಗ್ಗೆ ನಾನ್ಯಾಕೆ ಕೇಳಬೇಕು ಎಂದು ಹೊರ ಹೋಗಿದ್ದರು ಎಂದರು.

ಕುಮಾರಸ್ವಾಮಿಯನ್ನು ಬಂಧಿಸಬೇಕೆಂದು ಡಿ.ಕೆ. ಶಿವಕುಮಾರ್ ಹೇಳುತ್ತಿದ್ದಾರೆ. ಅವರೊಬ್ಬ ಒಕ್ಕಲಿಗ ಸಮಾಜದ ಮುಖಂಡ. ಡಿ.ಕೆ.ಶಿವಕುಮಾರ್‌ರ ಗರ್ವವನ್ನು ಮುರಿಯಲು ನರೇಂದ್ರ ಮೋದಿ, ಅಮಿತ್ ಶಾ, ನಡ್ಡಾ ಮತ್ತು ಯಡಿಯೂರಪ್ಪ ಅವರು ಚನ್ನಪಟ್ಟಣ ಜೆಡಿಎಸ್‌ನದೇ ಕ್ಷೇತ್ರ. ನೀವೇ ಅಭ್ಯರ್ಥಿ ಘೋಷಣೆ ಮಾಡಿ ಎಂದು ಹೇಳಿದರು. ಕಳೆದ 11 ದಿನದ ಹಿಂದೆ ನಿಖಿಲ್ ಕುಮಾರಸ್ವಾಮಿ ಹೆಸರು ನಾವು ಹೇಳಿರಲಿಲ್ಲ. 6 ತಿಂಗಳಿಂದ ನಾನೇ ಅಭ್ಯರ್ಥಿ ಎನ್ನುತ್ತಿದ್ದ ವ್ಯಕ್ತಿಯ ಸೊಕ್ಕು ಮುರಿಯಬೇಕಾಗಿದೆ. ಈಗ ನಿಖಿಲ್ ಕುಮಾರಸ್ವಾಮಿಯನ್ನು ಗೆಲ್ಲಿಸಬೇಕು ಎಂದು ಗೌಡರು ಮನವಿ ಮಾಡಿದ್ದಲ್ಲದೇ, ನವೆಂಬರ್ 24ರಂದು ಕ್ಷೇತ್ರದ ಜನತೆಗೆ ಅಭಿನಂದನೆ ಹೇಳಲು ನಾನು ಮತ್ತು ಯಡಿಯೂರಪ್ಪ ಚನ್ನಪಟ್ಟಣಕ್ಕೆ ಬರುತ್ತೇವೆ ಎನ್ನುವ ಮೂಲಕ ನಿಖಿಲ್ ಕುಮಾರಸ್ವಾಮಿ ಗೆಲುವು ಸಾಧಿಸುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು.

ಪ್ರಜ್ವಲ್ ಜಾಮೀನು ಅರ್ಜಿ ವಜಾ

ಅರ್ಜಿ ವಜಾಗೊಳಿಸಿದೆ. ಆದರೆ, ಇದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಹೋಗಿದ್ದರು.

ಈ ಹಿನ್ನೆಲೆಯಲ್ಲಿ ಭಾರತದ ಪ್ರಭಾವಿ ವಕೀಲರಲ್ಲಿ ಒಬ್ಬರಾದ ಮುಕುಲ್ ರೋಹಟಗಿ ಅವರ ನೇತೃತ್ವದಲ್ಲಿ ಪ್ರಜ್ವಲ್ ರೇವಣ್ಣ ಅವರಿಗೆ ಜಾಮೀನು ಮಂಜೂರು ಮಾಡುವಂತೆ ಅರ್ಜಿ ಸಲ್ಲಿಕೆ ಮಾಡಲಾಗಿತ್ತು. ಇಂದು ಅರ್ಜಿ ವಿಚಾರಣೆ ಕೈಗೆತ್ತಿಕೊಂಡ ನ್ಯಾಯಮೂರ್ತಿ ಬೇಲಾ ತ್ರಿವೇದಿ ಅವರು ಪ್ರಜ್ವಲ್ ಪರ ವಕೀಲರಿಗೆ ಹೆಚ್ಚಿನ ವಾದ ಮಂಡಿಸಲು ಅವಕಾಶವನ್ನೇ ನೀಡಲಿಲ್ಲ. ಅರ್ಜಿ ಕೈಗೆತ್ತಿಕೊಳ್ಳುತ್ತಿದ್ದಂತೆ ವಕೀಲ ಮುಕುಲ್ ರೋಹಟಗಿ ಅವರು ತಮ್ಮ ಕಕ್ಷಿದಾರರ ಪರ ಗಂಭೀರ ಆರೋಪದ ಬಗ್ಗೆ 2–3 ಅಂಶಗಳಿವೆ. ದೂರಿನಲ್ಲಿ 376 (ಅತ್ಯಾಚಾರ) ವಿಷಯದ ಬಗ್ಗೆ ಮಾತನಾಡುವುದಿಲ್ಲ ಎಂದರು. ಆಗ ನ್ಯಾಯಮೂರ್ತಿ ತ್ರಿವೇದಿ ಅವರು ಆರೋಪ ಪಟ್ಟಿ ಸಲ್ಲಿಕೆ ಆಗಿದೆಯೇ? ಎಂದು ಪ್ರಶ್ನಿಸಿದರು. ವಕೀಲ ರೋಹಟಗಿ ಹೌದು ಎಂದರು. ಇದಾದ ತಕ್ಷಣವೇ ನ್ಯಾಯಮೂರ್ತಿಗಳು ಆರೋಪಿ ತುಂಬಾ ಪ್ರಭಾವಶಾಲಿ ಆಗಿದ್ದಾರೆ. ಅರ್ಜಿ ವಜಾಗೊಳಿಸಲಾಗಿದೆ ಎಂದು ಹೇಳಿ ಆದೇಶ ನೀಡಿದರು.

ಇನ್ನು ಪ್ರಜ್ವಲ್ ರೇವಣ್ಣಗೆ ಜಾಮೀನು ನಿರಾಕರಣೆ ಖಚಿತ ಆಗುತ್ತಿದ್ದಂತೆ ಬೇರೆ ವಾದ ಮಂಡಿಸದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು, ನಾವು 6 ತಿಂಗಳ ನಂತರ ಮತ್ತೆ ಅರ್ಜಿ ಸಲ್ಲಿಸಬಹುದೇ? ಎಂದು ಪ್ರಶ್ನೆ ಮಾಡಿದ್ದಾರೆ. ಆದರೆ, ಇದಕ್ಕೆ ನ್ಯಾಯಮೂರ್ತಿಗಳು ನಾವು ಏನನ್ನೂ ಹೇಳುವುದಿಲ್ಲ ಎಂದು ಕಡ್ಡಿ ತುಂಡರಿಸಿದಂತೆ ಆದೇಶ ಹೊರಡಿಸಿದ್ದಾರೆ.

ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸವಕ್ಕೆ ಚಾಲನೆ

ರಂಗಾಯಣದ ಕಲಾವಿದರನ್ನು ಸಮಾಜ, ಸರ್ಕಾರ ಗೌರವದಿಂದ ನಡೆಸಿಕೊಳ್ಳಬೇಕು

ಚಿತ್ರ ಕಲಾವಿದ ಬಾದಲ್ ನಂಜುಂಡಸ್ವಾಮಿ

ಮೈಸೂರು,ನ.11(ಪಿಎಂ)– ರಂಗಾಯಣದ ಒಬ್ಬೊಬ್ಬ ಕಲಾವಿದರು ಒಂದೊಂದು ವಿಶ್ವಕೋಶ ಇದ್ದಂತೆ. ಅವರನ್ನು ಸಮಾಜ ಮತ್ತು ಸರ್ಕಾರ ಅತ್ಯಂತ ಗೌರವದಿಂದ ನಡೆಸಿಕೊಳ್ಳಬೇಕು ಎಂದು ಚಿತ್ರ ಕಲಾವಿದ ಹಾಗೂ ವಿನ್ಯಾಸಕ ಬಾದಲ್ ನಂಜುಂಡಸ್ವಾಮಿ ಹೇಳಿದರು.

ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ರಂಗಾಯಣದ ವತಿಯಿಂದ ಹಮ್ಮಿಕೊಂಡಿರುವ ರಂಗಭೀಷ್ಮ ಬಿ.ವಿ. ಕಾರಂತ ಕಾಲೇಜು ರಂಗೋತ್ಸವ–2024ಕ್ಕೆ (20ನೇ ವರ್ಷದ ರಂಗೋತ್ಸವ) ಸೋಮವಾರ ಕ್ಯಾನ್‌ವಾಸ್ ಮೇಲೆ ಆಲದಮರದ ಚಿತ್ರ ರಚಿಸುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ರಂಗಾಯಣದೊಂದಿಗೆ ಚಿಕ್ಕ ವಯಸ್ಸಿನಿಂದಲೂ ಅವಿನಾಭಾವ ಸಂಬಂಧ ಹೊಂದಿದ್ದೇನೆ. ಇಲ್ಲಿನ ಕಲಾವಿದರ ಕೊಡುಗೆ ಅಪಾರವಾದುದು. ಅವರು ರಂಗಾಯಣಕ್ಕೆ ಆಧಾರಸ್ತಂಭವಿದ್ದಂತೆ. ಅವರಿಂದಾಗಿ ಇನ್ನು ಅನೇಕ ರಂಗಾಯಣಗಳು ಸ್ಥಾಪನೆಯಾಗಿವೆ. ರಂಗಾಯಣದ ಕಲಾವಿದರನ್ನು ಸರ್ಕಾರಗಳು ಪರಿಗಣನೆಗೆ ತೆಗೆದುಕೊಳ್ಳಬೇಕು. ನಿವೃತ್ತಿ ಹೊಂದಿದ ನಂತರವೂ ಎಲ್ಲರನ್ನೂ ಒಟ್ಟುಗೂಡಿಸಿ ಬಹುಶಃ ಮಕ್ಕಳ ರಂಗಶಾಲೆ ತೆರೆದು ಅವರ ಅನುಭವ ಸದ್ಬಳಕೆ ಮಾಡಿಕೊಳ್ಳಬೇಕೆಂದು ಬಯಸುತ್ತೇನೆ ಎಂದರು.

ಈ ರೀತಿಯ ವ್ಯವಸ್ಥೆ ಮಾಡುವುದರಿಂದ ಹಿರಿಯ ಕಲಾವಿದರು ಮಕ್ಕಳಿಗೆ ದಾರಿದೀಪವಾಗಲಿದ್ದಾರೆ. ಬಹುಶಃ ರಂಗಾಯಣದ ಕಲಾವಿದರನ್ನು ಈವರೆಗೆ ಆಳುವವರು ಸರಿಯಾಗಿ ನಡೆಸಿಕೊಂಡಿಲ್ಲ. ದೊಡ್ಡ ಅನುಭವ ಹೊಂದಿರುವ ಈ ಕಲಾವಿದರನ್ನು ನಿರ್ಲಕ್ಷ್ಯ ಮಾಡದೇ ಅವರ ಕೆಲಸ ಕಾರ್ಯಗಳನ್ನು ಆದ್ಯತೆ ಮೇರೆಗೆ ಮಾಡಿಕೊಡಲು ಸರ್ಕಾರ, ಸಮಾಜ ಮುಂದಾಗಬೇಕು. ಆ ಮೂಲಕ ಅವರನ್ನು ಗೌರವದಿಂದ ನಡೆಸಿಕೊಳ್ಳಬೇಕು. ಕನಿಷ್ಠ ಅವರನ್ನು ರಂಗಸಮಾಜದ ಸದಸ್ಯರನ್ನಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರು.

ರಂಗಾಯಣದ ಕಲಾವಿದರನ್ನು ನಾನು, ನನ್ನ ಸಹಪಾಠಿಗಳು ನೋಡಿಕೊಂಡು ಬೆಳೆದಿದ್ದೇವೆ. ಅವರು ಪ್ರತ್ಯೇಕವಾಗಿ ಹೇಳಿಕೊಡದಿದ್ದರೂ ತಮ್ಮ ನಡೆ–ನುಡಿ ಮೂಲಕ ಸಾಕಷ್ಟು ಒಳ್ಳೆಯದ್ದನ್ನು ಕಲಿಸಿದ್ದಾರೆ. ರಂಗಾಯಣದ ಹೆಸರು ಉಳಿಸಿ ಬೆಳೆಸಲು ದೊಡ್ಡ ಕೊಡುಗೆ ನೀಡಿರುವ ಕಲಾವಿದರನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು. ರಂಗಾಯಣ ಬಿ.ವಿ.ಕಾರಂತರು ಹಾಕಿದ ಆಲದಮರ. ಅದರ ಸಂಕೇತವಾಗಿ ನಾನಿಂದು ಆಲದ ಮರದ ಚಿತ್ರ ರಚಿಸಿ ರಂಗೋತ್ಸವಕ್ಕೆ ಚಾಲನೆ ನೀಡಿದ್ದೇನೆ ಎಂದು ತಿಳಿಸಿದರು.

ವೃತ್ತಿಯಾಗಿ ಅಭಿನಯ ಆಯ್ಕೆಗೆ ಧೈರ್ಯ ಅಗತ್ಯ: ರಂಗೋತ್ಸವದ ಕೈಪಿಡಿ ಬಿಡುಗಡೆ ಮಾಡಿದ ರಂಗಭೂಮಿ ಹಾಗೂ ಕಿರುತೆರೆ ನಟಿ ಸುಷ್ಮಾ ನಾಣಯ್ಯ ಮಾತನಾಡಿ, ಅಭಿನಯವನ್ನೇ ವೃತ್ತಿಯಾಗಿ ಸ್ವೀಕರಿಸಲು ತುಂಬ ಧೈರ್ಯ ಬೇಕು. ತಾವೆಲ್ಲಾ ರಂಗೋತ್ಸವದಲ್ಲಿ ಪಾಲ್ಗೊಂಡಿದ್ದು, ಸಾಕಷ್ಟು ಮಂದಿ ಮುಂದೆ ಇದೇ ಕ್ಷೇತ್ರದಲ್ಲಿ ವೃತ್ತಿಜೀವನ ಆರಂಭಿಸಬೇಕು ಎಂದುಕೊಂಡಿರಬಹುದು. ಇದು ಒಳ್ಳೆಯ ಚಿಂತನೆಯೇ. ಆದರೆ ಹವ್ಯಾಸಿಯಾಗಿಯೇ ರಂಗಭೂಮಿ ತೆಗೆದುಕೊಂಡರೆ ಒಳ್ಳೆಯದು. ಏಕೆಂದರೆ ರಂಗಭೂಮಿಯಲ್ಲಿ ನಮ್ಮ ಬದುಕು ಕಟ್ಟಿಕೊಳ್ಳುವುದು ಕಷ್ಟವಿದೆ. ರಂಗಾಯಣ ರೆಪರ್ಟರಿ ಸರ್ಕಾರದ್ದು. ಇಲ್ಲಿ ಕಲಾವಿದರು ಉದ್ಯೋಗಿಗಳಾಗುತ್ತಾರೆ. ಆದರೆ ಈ ರೀತಿಯಲ್ಲಿ ಎಲ್ಲೆಡೆ ರೆಪರ್ಟರಿ ಇಲ್ಲ. ನೀವು ರಂಗಭೂಮಿಯಲ್ಲೇ ಇರಬೇಕೆಂದರೆ ಹವ್ಯಾಸಿ ರಂಗ ತಂಡಗಳಲ್ಲಿ ತೊಡಗಿಸಿಕೊಳ್ಳುವುದೇ ಉತ್ತಮ. ಇದನ್ನೇ ವೃತ್ತಿಯಾಗಿ ತೆಗೆದುಕೊಳ್ಳುತ್ತೇವೆ ಎಂದರೂ ಸರಿ. ಆದರೆ ತುಂಬ ಧೈರ್ಯ ಮಾಡಬೇಕಷ್ಟೆ ಎಂದು ಕಾಲೇಜು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರಲ್ಲದೆ, ಇದೇ ಕಾಲೇಜು ರಂಗೋತ್ಸವದಿಂದಲೇ ನನ್ನ ರಂಗಪಯಣ ಸಹ ಆರಂಭವಾಯಿತು ಎಂದು ಹೇಳಿದರು.

ರಂಗಸಮಾಜದ ಸದಸ್ಯ ಹೆಚ್.ಎಸ್. ಸುರೇಶ್‌ಬಾಬು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಉಪ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಕಾಲೇಜು ರಂಗೋತ್ಸವ ಸಂಚಾಲಕಿ ಕೆ.ಆರ್. ನಂದಿನಿ, ಸಂಯೋಜಕ ಅರಸೀಕೆರೆ ಯೋಗಾನಂದ ಮತ್ತಿತರರು ಹಾಜರಿದ್ದರು.



ಮೈಸೂರಿನ ರಂಗಾಯಣದ ಭೂಮಿಗೀತದಲ್ಲಿ ಸೋಮವಾರ ಕ್ಯಾನ್‌ವಾಸ್ ಮೇಲೆ ಆಲದ ಮರದ ಚಿತ್ರ ರಚಿಸುವ ಮೂಲಕ ಕಾಲೇಜು ರಂಗೋತ್ಸವಕ್ಕೆ ಚಿತ್ರಕಲಾವಿದ ಬಾದಲ್ ನಂಜುಂಡಸ್ವಾಮಿ ಚಾಲನೆ ನೀಡಿದರು.

ಪ್ರತಿದಿನ ಪ್ರದರ್ಶನದ ವಿವರ

ಸೋಮವಾರ ಭೂಮಿಗೀತದಲ್ಲಿ ಎಸ್.ಬಿ.ಆರ್.ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು 'ವಸಂತಯಾಮಿನೀ ಸ್ವಪ್ನ ಚಮತ್ಕಾರ' ನಾಟಕ ಪ್ರದರ್ಶಿಸಿದರು. ಅಂತೆಯೇ ನ.15ರವರೆಗೆ ಪ್ರತಿದಿನ ಸಂಜೆ 6.30ಕ್ಕೆ ವಿವಿಧ ಕಾಲೇಜು ವಿದ್ಯಾರ್ಥಿಗಳಿಂದ ನಾನಾ ನಾಟಕಗಳು ಪ್ರದರ್ಶನಗೊಳ್ಳಲಿವೆ. ನ.12ರಂದು ಹುಣಸೂರಿನ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳಿಂದ 'ಹೆಣ್ಮಕ್ಳು ಕಥೆ ಹೇಳ್ತಾರೆ' ನಾಟಕ, ನ.13ರಂದು ಎಂಎಂಕೆ ಮತ್ತು ಎಸ್‌ಡಿಎಂ ಮಹಿಳಾ ಕಾಲೇಜು ವಿದ್ಯಾರ್ಥಿಗಳಿಂದ 'ಮಾರನಾಯಕ', ನ.14ರಂದು ಹುಣಸೂರಿನ ಲಾ ಸಲೆಟ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ 'ನಾಗಿ–ಕರಿಸಿದ್ಧ', ನ.15ರಂದು ಅಮೃತಾ ವಿಶ್ವವಿದ್ಯಾಪೀಠಂ ವಿದ್ಯಾರ್ಥಿಗಳಿಂದ 'ಜತೆಗಿರುವನು ಚಂದಿರ' ನಾಟಕಗಳ ಪ್ರದರ್ಶನ ನಡೆಯಲಿದೆ. ಟಿಕೆಟ್ ದರ 50 ರೂ. ನಿಗದಿಪಡಿಸಲಾಗಿದೆ.

ಕೆಎಸ್‌ಆರ್‌ಟಿಸಿ ಮೈಸೂರು ನಗರ ಕುವೆಂಪುನಗರ ಘಟಕದಿಂದ ರಾಜ್ಯೋತ್ಸವ



ಮೈಸೂರಿನ ಕುವೆಂಪುನಗರ ಬಸ್ ಡಿಪೋ ಆವರಣದಲ್ಲಿ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವವನ್ನು ಶಾಸಕ ಕೆ.ಹರೀಶ್ ಗೌಡ ಹಾಗೂ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಉದ್ಘಾಟಿಸಿದರು.

ಮೈಸೂರು, ನ.11(ಎಸ್‌ಬಿಡಿ)– ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ(ಕೆಎಸ್‌ಆರ್‌ಟಿಸಿ) ಮೈಸೂರು ನಗರ ವಿಭಾಗದ ಕುವೆಂಪುನಗರ ಘಟಕದ ವತಿಯಿಂದ ಕನ್ನಡ ರಾಜ್ಯೋತ್ಸವವನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಕುವೆಂಪುನಗರ ಬಸ್ ನಿಲ್ದಾಣದಲ್ಲಿ ಭಾನುವಾರ ನಡೆದ ಕಾರ್ಯಕ್ರಮವನ್ನು ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಹಾಗೂ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ದೀಪ ಬೆಳಗಿ, ಕನ್ನಡಾಂಬೆ ಭುವನೇಶ್ವರಿ ಫೋಟೋಗೆ ಪುಷ್ಪ ನಮನ ಸಲ್ಲಿಸಿದರು.

ಬಳಿಕ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕನ್ನಡ ರಾಜ್ಯೋತ್ಸವವನ್ನು ನವೆಂಬರ್ ಮಾಸದಲ್ಲಿ ನಾಡಿನಾದ್ಯಂತ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ವಿಶ್ವದೆಲ್ಲೆಡೆ ಕನ್ನಡ ಭಾಷೆಗೆ ವಿಶೇಷ ಗೌರವವಿದೆ. ಕನ್ನಡ ಸಾಹಿತ್ಯಕ್ಕೆ ಅತೀ ಹೆಚ್ಚು ಜ್ಞಾನಪೀಠ ಪ್ರಶಸ್ತಿ ಸಂದಿರುವುದು ನಾಡಿನ ಹಿರಿಮೆಯ ಕೈಗನ್ನಡಿಯಾಗಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕನ್ನಡಿಗರು ಸ್ವಾಭಿಮಾನಿಗಳು. ಬದುಕು ಕಟ್ಟಿಕೊಳ್ಳಲು ಬರುವ ಹೊರರಾಜ್ಯದವರನ್ನೂ ಪ್ರೀತಿಯಿಂದಲೇ ಸ್ವಾಗತಿಸಿ, ಒಪ್ಪಿಕೊಳ್ಳುತ್ತಾರೆ. ಎಲ್ಲಾ ಭಾಷೆ, ಧರ್ಮ, ಜಾತಿಯವರಾದರೂ ಸಮಾನವಾಗಿ ಕಾಣುತ್ತಾರೆ. ಹಾಗೆಯೇ ಇಲ್ಲಿ ನೆಲೆಸಿದವರು ಕನ್ನಡವನ್ನು ಕಲಿಯಲೇಬೇಕು. ಅದನ್ನು ಬಿಟ್ಟು ತಮ್ಮ ಭಾಷೆಯನ್ನು ಕನ್ನಡಿಗರ ಮೇಲೆ ಹೇರುವುದು ಈ ನೆಲಕ್ಕೆ ಮಾಡುವ ಅಪಮಾನವಾಗುತ್ತದೆ ಎಂದರು.

ಕನ್ನಡ ಭಾಷೆ ಇಷ್ಟು ಉತ್ತುಂಗಕ್ಕೆ ಏರಿರುವುದರಲ್ಲಿ ಶ್ರಮಿಕರ ಪಾತ್ರ ಪ್ರಮುಖವಾಗಿದೆ ವಿಶೇಷವಾಗಿ ಕೆಎಸ್‌ಆರ್‌ಟಿಸಿ ನೌಕರರು ಕನ್ನಡದಲ್ಲೇ ವ್ಯವಹರಿಸುತ್ತಾರೆ. ಕನ್ನಡದ ಸಾಧಕರ ಬಗ್ಗೆ ಹಲವು ರೀತಿಯಲ್ಲಿ ಪ್ರಚುರಪಡಿಸುವ ಮೂಲಕ ಕನ್ನಡದ ಕಂಪನ್ನು ಪಸರಿಸುತ್ತಿರುವುದು ಅತ್ಯಂತ ಹೆಮ್ಮೆಯ ಸಂಗತಿ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಕೆಎಸ್‌ಆರ್‌ಟಿಸಿ ಮೈಸೂರು ನಗರ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್, ಗ್ರಾಮಾಂತರ ನಿಯಂತ್ರಣ ಅಧಿಕಾರಿ ಶ್ರೀನಿವಾಸ್, ಸಿಎಸ್‌ಆರ್ ಗ್ರೂಪ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಚಂದ್ರಹಾಸ್, ಘಟಕ ವ್ಯವಸ್ಥಾಪಕರಾದ ಶ್ರೀನಿವಾಸ್, ಜವರೇಗೌಡ, ಕಿರಣ್, ಆನಂದ್ ಮತ್ತಿತರರು ಉಪಸ್ಥಿತರಿದ್ದರು.

ಟ್ರಿಪಲ್ ರೈಡಿಂಗ್, ಡ್ರೈವಿಂಗ್ ವೇಳೆ ಮೊಬೈಲ್ ಬಳಕೆ ವಿರುದ್ಧ ಕಾರ್ಯಾಚರಣೆ

161 ಪ್ರಕರಣ ದಾಖಲು

ಮೈಸೂರು, ನ.11(ಎಸ್‌ಬಿಡಿ)– ವಾಹನ ಚಾಲನೆ ವೇಳೆ ಮೊಬೈಲ್ ಬಳಕೆ ಹಾಗೂ ಟ್ರಿಪಲ್ ರೈಡಿಂಗ್ ಸಂಬಂಧ ಮೈಸೂರಿನ ಸಂಚಾರ ಪೊಲೀಸರು 161 ಪ್ರಕರಣ ದಾಖಲಿಸಿದ್ದಾರೆ.

ನಗರದಲ್ಲಿ ಸಂಚಾರ ನಿಯಮ ಉಲ್ಲಂಘನೆ ಹಾಗೂ ಅಪಘಾತ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪೊಲೀಸರು ವಿಶೇಷ ತಪಾಸಣೆ ನಡೆಸುತ್ತಿದ್ದು, ನ.9ರಿಂದ 11ರವರೆಗೆ ಚಾಲನೆ ವೇಳೆ ಮೊಬೈಲ್ ಬಳಕೆ ಹಾಗೂ ಟ್ರಿಪಲ್ ರೈಡಿಂಗ್ ಮಾಡಿದ 161 ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಿ, ತಿಳುವಳಿಕೆ ನೀಡಿದ್ದಾರೆ.

ಅಪಘಾತಗಳನ್ನು ತಡೆಗಟ್ಟುವುದರ ಜೊತೆಗೆ ಸಂಚಾರ ನಿಯಮ ಪಾಲನೆ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ ನಗರ ಸಂಚಾರ ವಿಭಾಗದ ವತಿಯಿಂದ ಆರಂಭಿಸಲಾಗಿರುವ ಈ ವಿಶೇಷ ಕಾರ್ಯಾಚರಣೆ ಮುಂದುವರೆಯಲಿದ್ದು, ಸಂಚಾರ ನಿಯಮ ಉಲ್ಲಂಘಿಸುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು, ನ.11– 2024–25 ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗಾಗಿ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ನವೆಂಬರ್ 30 ಕೊನೆಯ ದಿನಾಂಕವಾಗಿದ್ದು, ಅರ್ಜಿಗಳನ್ನು ಇಲಾಖೆಯ ವೆಬ್‌ಸೈಟ್ www.swdhims.karnataka.gov.in ನಲ್ಲಿ ಪಡೆಯಬಹುದಾಗಿದೆ. ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ 25% ಮೀಸಲಾತಿ ಇದ್ದು, ಆ ವಿದ್ಯಾರ್ಥಿಗಳು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಅರ್ಜಿ ಪ್ರತಿಯೊಂದಿಗೆ ದೃಢೀಕೃತ ದಾಖಲೆಗಳನ್ನು ಆಯ್ಕೆ ಮಾಡಿರುವ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಆದಿಪಂಪ ರಸ್ತೆಯಲ್ಲಿರುವ ಡಾ|| ಬಾಬು ಜಗಜೀವನರಾಂ ಭವನ ಕಟ್ಟಡದ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರ ದೂ.ಸಂ: 0821–2520910 ಅನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾಷೆ ಸಮಸ್ಯೆ; ಕರ್ನಾಟಕದವರಿಗೆ ದೆಹಲಿ ರಾಜಕಾರಣ ಕಷ್ಟ.. ಕಷ್ಟ...

● ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಎಚ್.ಎಂ.ರಾಜಶೇಖರ್ ಅಭಿಮತ ● ಹಾಗಾಗಿ ಬಹುತೇಕರು ಕರ್ನಾಟಕಕ್ಕೆ ಸೀಮಿತಗೊಳ್ಳುತ್ತಿದ್ದಾರೆ

ಮೈಸೂರು, ನ.11(ಎಸ್‌ಪಿಎನ್)– ಕರ್ನಾಟಕದ ಜನಪ್ರತಿನಿಧಿಗಳಿಗೆ ಭಾಷಾ ಸಮಸ್ಯೆಯಿಂದ ದೆಹಲಿ ರಾಜಕಾರಣ ಕ್ಲಿಷ್ಟವಾಗುತ್ತಿದೆ ಎಂದು ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕ ಪ್ರೊ.ಹೆಚ್.ಎಂ. ರಾಜಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಲಕ್ಷ್ಮೀಪುರಂ ಸರ್ಕಾರಿ ಪ್ರೌಢಶಾಲೆ ಮತ್ತು ಪದವಿಪೂರ್ವ ಕಾಲೇಜು ಆವರಣದಲ್ಲಿ ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಎಸ್‌ಎಸ್‌ಸಿ, ಬ್ಯಾಂಕಿಂಗ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪದಲ್ಲಿ ಮಾತನಾಡಿದ ಅವರು, ರಾಜಕಾರಣಿಗಳ ಈ ಸಮಸ್ಯೆಯನ್ನು ಗಮನಿಸಿದರೆ ವಿವಿಧ ಕ್ಷೇತ್ರದ ಸರ್ಕಾರಿ ಹುದ್ದೆಯ ಆಕಾಂಕ್ಷಿಗಳು ಭಾಷಾ ಸಮಸ್ಯೆಯಿಂದ ಹೊರಬರಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ನಮ್ಮ ರಾಷ್ಟ್ರದಲ್ಲಿ ವೈವಿಧ್ಯಮಯ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಕನ್ನಡ, ಹಿಂದಿ ಸೇರಿದಂತೆ 14ಕ್ಕೂ ಹೆಚ್ಚು ಭಾಷೆಗಳು ನಮ್ಮ ಸಂವಿಧಾನದಲ್ಲಿ ಸ್ಥಾನ ಪಡೆದಿವೆ. ಅಲ್ಲದೆ, ರಾಜ್ಯದಿಂದ ರಾಜ್ಯಕ್ಕೆ ಬೇರೆಬೇರೆ ಭಾಷೆಗಳನ್ನು ಮಾತನಾಡುವ ಜನರಿದ್ದಾರೆ. ಹಾಗಾಗಿ ಬ್ಯಾಂಕಿಂಗ್ ಕ್ಷೇತ್ರದಲ್ಲಿ ವ್ಯವಹಾರ ನಡೆಸುವ ಸಂದರ್ಭದಲ್ಲಿ ಒಂದು ಭಾಷೆ ಕಲಿತ ವ್ಯಕ್ತಿಗೆ ಬೇರೆ ಭಾಷಿಗರ ಜೊತೆ ಸಂವಹನ ನಡೆಸಿ ವ್ಯವಹಾರ ನಡೆಸುವುದು ಬಹಳ ಕಷ್ಟವಾಗುತ್ತದೆ. ಅದರಲ್ಲೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುವ ನೌಕರರು ಇಂಗ್ಲಿಷ್, ಹಿಂದಿ ಜೊತೆಗೆ ಪ್ರಾದೇಶಿಕ ಭಾಷೆಗಳಲ್ಲಿ ಸಂವಹನ ನಡೆಸುವುದನ್ನು ಕಲಿಯಬೇಕು ಎಂದು ಕಿವಿಮಾತು ಹೇಳಿದರು.

ನಮ್ಮ ರಾಜಕಾರಣಿಗಳ ಭಾಷಾ ಸಾಮರ್ಥ್ಯ ಗಮನಿಸಿದರೆ ದೆಹಲಿ ರಾಜಕಾರಣ ಕಷ್ಟ ಅನಿಸುತ್ತಿದೆ. ಹಾಗಾಗಿ ಅವರು ದೆಹಲಿ ಬಿಟ್ಟು ಕರ್ನಾಟಕದಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ರಾಷ್ಟ್ರೀಯ ಆಂಗ್ಲ ಮಾಧ್ಯಮದ ಆ್ಯಂಕರ್‌ಗಳ ಭಾಷಾ ಉಚ್ಚಾರಣೆ ಹಾಗೂ ಬಿಬಿಸಿ ನ್ಯೂಸ್ ಆ್ಯಂಕರ್‌ಗಳ ಭಾಷಾ ಸಾಮರ್ಥ್ಯವನ್ನು ಗಮನಿಸಿದರೆ ದೋಷಗಳು ಕಂಡು ಬರುತ್ತವೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಅಭ್ಯರ್ಥಿಗಳು ಮುದ್ರಣ ಮತ್ತು ದೃಶ್ಯ ಮಾಧ್ಯಮಗಳಲ್ಲಿ ಬರುವ ಸುದ್ದಿಗಳನ್ನು ಗಮನಿಸಿ, ಪರೀಕ್ಷೆಗೆ ಬೇಕಾಗುವ ಅಂಶಗಳನ್ನು ನೋಟ್ಸ್ ಮಾಡಿಕೊಳ್ಳಬೇಕು. ಅಂತೆಯೇ ಭಾಷಾ ಕೌಶಲವನ್ನು ಕಲಿತುಕೊಳ್ಳಲು ಪ್ರಯತ್ನಿಸಬೇಕು ಎಂದು ಸಲಹೆ ನೀಡಿದರು.

ನಮ್ಮ ಜನರು ಒಂದು ಕಾಲಕ್ಕೆ ಆಯುರ್ವೇದ ಚಿಕಿತ್ಸೆ ಪಡೆಯಲು ಹಿಂಜರಿಯುತ್ತಿದ್ದರು. ಆದರೆ, ಪ್ರಸ್ತುತ ಆಯುರ್ವೇದ ಚಿಕಿತ್ಸಾ ಪದ್ಧತಿ ವಿಶ್ವಮಟ್ಟದಲ್ಲಿ ದಿನದಿಂದ ದಿನಕ್ಕೆ ಪ್ರಸಿದ್ಧಿ ಪಡೆಯುತ್ತಿದೆ. ಆಯುರ್ವೇದ ಚಿಕಿತ್ಸೆ ದುಬಾರಿಯಾದರೂ ನಿಧಾನವಾಗಿ ರೋಗ ವಾಸಿ ಮಾಡಬಲ್ಲದ್ದಾಗಿದೆ ಎಂದು ಕೆಲವು ಘಟನೆಗಳನ್ನು ಉಲ್ಲೇಖಿಸಿದರು. ಅಂತೆಯೇ ಇತ್ತೀಚಿನ ದಿನಗಳಲ್ಲಿ ತಂತ್ರಜ್ಞಾನ ಶರವೇಗದಲ್ಲಿ ಬೆಳೆಯುತ್ತಿದೆ. ಎಲ್ಲಾ ಮಾಹಿತಿಗಳು ನಮ್ಮ ಮೊಬೈಲ್‌ನಲ್ಲಿ ದೊರಕುತ್ತಿವೆ. ಇದರಿಂದ ಕೈ ಬರವಣಿಗೆ, ನೆನಪಿನ ಶಕ್ತಿ ಪ್ರತಿಯೊಬ್ಬರಲ್ಲೂ ಕುಂದುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎ.ದೇವರಾಜ್ ಮಾತನಾಡಿ, ಸ್ಪರ್ಧಾ ಆಕಾಂಕ್ಷಿಗಳು ಒಂದು ಸರ್ಕಾರಿ ಹುದ್ದೆಯಲ್ಲಿದ್ದುಕೊಂಡು ಮತ್ತೊಂದು ಹುದ್ದೆಗೆ ಪ್ರಯತ್ನಿಸಬೇಡಿ. ಏಕೆಂದರೆ, ಎಲ್ಲಾ ಹುದ್ದೆಗಳಿಗೂ ಅರ್ಜಿ ಹಾಕಿ ಆಯ್ಕೆಯಾದ ನಂತರ ಆ ಹುದ್ದೆ ಇಷ್ಟವಿಲ್ಲವೆಂದು ಬೇರೊಂದು ಹುದ್ದೆಗೆ ಆಯ್ಕೆಯಾದರೆ, ಉದ್ಯೋಗಕ್ಕಾಗಿ ಕಾಯುತ್ತಿರುವ ಓರ್ವ ನಿರುದ್ಯೋಗಿಗೆ ಸಿಗಬೇಕಾದ ಅವಕಾಶ ತಪ್ಪುತ್ತದೆ. ನೀವು ರಾಜೀನಾಮೆ ನೀಡಿದ ಹುದ್ದೆಗೆ ಸರ್ಕಾರ ಪರೀಕ್ಷೆ ನಡೆಸಿ ಆಯ್ಕೆ ಮಾಡಲು ಅನೇಕ ವರ್ಷಗಳೇ ಹಿಡಿಯುತ್ತವೆ. ಹಾಗಾಗಿ ಮೊದಲೇ ನೀವು ಸೇರಬೇಕಾದ ಇಲಾಖೆ ಬಗ್ಗೆ ಅಧ್ಯಯನ ನಡೆಸಿ, ಆ ಹುದ್ದೆಗೆ ಅರ್ಜಿ ಸಲ್ಲಿಸುವಂತೆ ಸಲಹೆ ನೀಡಿದರು.

ನಾನು 30 ವರ್ಷಗಳ ಹಿಂದೆ ಕೆಎಎಸ್ ಹುದ್ದೆಗೆ ಪರೀಕ್ಷೆ ಬರೆದಾಗ ಆಗಿನ ಪರೀಕ್ಷೆ ವ್ಯವಸ್ಥೆಯೇ ಬೇರೆ ಇತ್ತು. ಇದೀಗ ವಿಧಾನಗಳು ಬದಲಾಗಿವೆ. ಆಗ ಮಾಹಿತಿಗಳು ಅಷ್ಟೊಂದು ಸುಲಭವಾಗಿ ಸಿಗುತ್ತಿರಲಿಲ್ಲ. ಇಂದು ಎಲ್ಲಾ ಮಾಹಿತಿಗಳು ನಮ್ಮ ಮೊಬೈಲ್‌ನಲ್ಲಿ ಸಿಗುತ್ತವೆ. ಅದೇ ರೀತಿ ಆಕಾಂಕ್ಷಿಗಳು ನಮ್ಮ ಕಾಲದಲ್ಲಿ ಕೆಲವೇ ಮಂದಿ ಇರುತ್ತಿದ್ದರು. ಈಗ ಸಂಖ್ಯೆಯಲ್ಲೂ ಹೆಚ್ಚಾಗಿವೆ. ಸರ್ಕಾರಿ ಹುದ್ದೆ ಪಡೆಯಲು ಕಠಿಣ ಪರಿಶ್ರಮ ಮುಖ್ಯ ಎಂದರು.

ಇದಕ್ಕೂ ಮುನ್ನ ಆಯುರ್ವೇದ ವೈದ್ಯ ಡಾ.ಬಿ.ಗುರು ಬಸವರಾಜು ಮಾತನಾಡಿದರು. ಶಿಕ್ಷಣ ತಜ್ಞ ವೈ.ಎನ್.ಶಂಕರೇಗೌಡ, ಪ್ರೊ.ಕೃ.ಪ.ಗಣೇಶ್, ಎಚ್.ಬಾಲಕೃಷ್ಣ, ಪಿ.ಕೆ.ಕಿರಣ್ ಕೌಶಿಕ್, ಯು.ಎಂ.ಶರದ್ ರಾವ್, ಎಂ.ರಾಜೀವ್ ಶರ್ಮ, ಕೈ.ವೆ.ನಾಗೇಂದ್ರ, ಜ್ಞಾನಬುತ್ತಿಯ ಜೈನಹಳ್ಳಿ ಸತ್ಯನಾರಾಯಣಗೌಡ, ಎಸ್.ಬಾಲಕೃಷ್ಣ, ರಾ.ರಾಮಕೃಷ್ಣ ಸೇರಿದಂತೆ ಇತರರಿದ್ದರು.



ಜ್ಞಾನಬುತ್ತಿ ಸಂಸ್ಥೆ ವತಿಯಿಂದ ಎಸ್‌ಎಸ್‌ಸಿ, ಬ್ಯಾಂಕಿಂಗ್ ಪರೀಕ್ಷಾ ತರಬೇತಿ ಶಿಬಿರದ ಸಮಾರೋಪದಲ್ಲಿ ಸ್ಪರ್ಧಾ ಪರೀಕ್ಷೆಯ ಅಧ್ಯಯನ ಪುಸ್ತಕ ಬಿಡುಗಡೆಗೊಳಿಸಲಾಯಿತು.

ನಾಗರಹೊಳೆಯಲ್ಲಿ ಪ್ರಾಣಿಗಳನ್ನು ಕಣ್ತುಂಬಿಕೊಂಡ ಪ್ರವಾಸಿಗರು



ಹೆಚ್.ಡಿ.ಕೋಟೆ, ನ.11– ತಾಲೂಕಿನ ನಾಗರ ಹೊಳೆ ರಾಷ್ಟ್ರೀಯ ಉದ್ಯಾನವನ ದಮ್ಮನಕಟ್ಟೆ ಸಫಾರಿ ಕೇಂದ್ರದಿಂದ ಸಫಾರಿಗೆ ತೆರಳಿದ ಪ್ರವಾಸಿಗರು ಪ್ರಾಣಿಗಳನ್ನು ಕಣ್ತುಂಬಿಕೊಂಡಿದ್ದಾರೆ.

ದಮ್ಮನಕಟ್ಟೆ ಸಫಾರಿ ಕೇಂದ್ರದಿಂದ ಸಫಾರಿಗೆ ತೆರಳಿದ್ದ ಪ್ರವಾಸಿಗರಿಗೆ ಟೆಂಪಲ್ ಟ್ಯಾಂಕ್ ಬಳಿ ಒಂಟಿ ಕೆನ್ನಾಯಿ ಭಾರೀ ಗಾತ್ರದ ಜಿಂಕೆ ಬೇಟೆಯಾಡಿ ಎಳೆದೊಯ್ಯುತ್ತಿರುವುದು, ಹುಲಿ ರಸ್ತೆ ದಾಟುತ್ತಿರುವುದು ಹಾಗೂ ಎಂ.ಎಂ.ರೋಡ್ ಬಳಿ



ಭಾರೀ ಗಾತ್ರದ ಒಂಟಿ ಕಾಡೆಮ್ಮೆ(ಕಾಟಿ) ಪ್ರತ್ಯಕ್ಷವಾಗಿದ್ದು, ಅವುಗಳನ್ನು ಛಾಯಾಗ್ರಹಕ ನಾಗೇಶ್ ಆರ್.ಜೆ ಐಯರ್ ಅವರು ತಮ್ಮ ಕ್ಯಾಮೆರದಲ್ಲಿ ಸೆರೆ ಹಿಡಿದಿದ್ದಾರೆ.

ಇತ್ತೀಚಿನ ದಿನಗಳಲ್ಲಿ ದಮ್ಮನಕಟ್ಟೆ ಸಫಾರಿ ಕೇಂದ್ರಕ್ಕೆ ತೆರಳುತ್ತಿರುವ ಪ್ರವಾಸಿಗರಿಗೆ ಸಾಕಷ್ಟು ಹುಲಿ, ಆನೆ, ಕಾಡೆಮ್ಮೆ (ಕಾಟಿ) ಸೇರಿದಂತೆ ಸಾಕಷ್ಟು ಪ್ರಾಣಿಗಳು ಕಾಣಿಸಿಕೊಳ್ಳುತ್ತಿದ್ದು, ಪ್ರವಾಸಿಗರು ಅವುಗಳನ್ನು ನೋಡಿ ಖುಷಿ ಪಡುತ್ತಿದ್ದಾರೆ.



ವಿದ್ಯಾರ್ಥಿಗಳು ಕೀಳರಿಮೆ ಬಿಟ್ಟು ಸಾಧನೆ ಮಾಡಿ

ಪ್ರತಿಭಾ ಕಾರಂಜಿ, ಕಲೋತ್ಸವದಲ್ಲಿ ಶಾಸಕ ದರ್ಶನ್

ನಂಜನಗೂಡು, ನ.11– ಪ್ರತಿಭೆ ಎಲ್ಲರಲ್ಲೂ ಅಂತರ್ಗತವಾಗಿರುತ್ತದೆ. ಗ್ರಾಮೀಣ ಮಕ್ಕಳು ಕೀಳರಿಮೆ ಬಿಟ್ಟು ಪ್ರತಿಭೆ ಪ್ರದರ್ಶನ ಮಾಡುವ ಮೂಲಕ ಸಾಧನೆ ಮಾಡಬೇಕು ಎಂದು ಶಾಸಕ ದರ್ಶನ್ ಕಿವಿಮಾತು ಹೇಳಿದರು.

ನಗರದ ಕಾರ್ಮೆಲ್ ಶಾಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಯ ಪರಿಪೂರ್ಣ ವ್ಯಕ್ತಿತ್ವ ವಿಸನಕ್ಕೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳು ಸಹ ಅಗತ್ಯ ಆದ್ದರಿಂದ ವಿದ್ಯಾರ್ಥಿಗಳು ನಿಮ್ಮ ಆಸಕ್ತಿಗೆ ತಕ್ಕಂತೆ ರಂಗ ಕಲೆ, ಚಿತ್ರಕಲೆ, ನೃತ್ಯ, ನಾಟಕ, ಜಾನಪದ ಕಲೆಗಳಲ್ಲಿ ನಿಮ್ಮನ್ನು ನೀವು ತೊಡಗಿಸಿಕೊಳ್ಳಬೇಕು. ಜೊತೆಗೆ ಶಿಕ್ಷಣ ಇಲಾಖೆ ನಿಮ್ಮ ಪ್ರತಿಭೆ ಪ್ರದರ್ಶನಕ್ಕೆ ಉತ್ತಮ ವೇದಿಕೆ ಕಲ್ಪಿಸಿ ಕೊಟ್ಟಿದೆ. ಇದನ್ನು ಸದುಪಯೋಗಪಡಿಸಿಕೊಂಡು ನಿಮ್ಮ ಪ್ರತಿಭೆ ಪ್ರದರ್ಶಿಸಿ ಎಂದು ತಿಳಿಸಿದರು.

ಶಿಕ್ಷಕರು ವಿದ್ಯಾರ್ಥಿಗಳ ಪ್ರತಿಭೆ ಗುರುತಿಸಿ ಅವರಿಗೆ ವೇದಿಕೆ ಕಲ್ಪಿಸಿ ಕೊಡಬೇಕು. ಆಧುನಿಕ ಭರಾಟೆ ನಡುವೆ ಜಾನಪದ ಸಂಸ್ಕೃತಿ ನಶಿಸುತ್ತಿದೆ. ಆದ್ದರಿಂದ ಶಿಕ್ಷಕರು ನಮ್ಮ ದೇಶಿಯ ಕಲೆಗೆ ಒತ್ತು ನೀಡಿ ಅದನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಆಕ್ರೋಶ: ಸರ್ಕಾರಿ ಶಾಲೆಗಳು ಅಳಿವಿನ ಅಂಚಿಗೆ ಸಾಗುವ ಹೊತ್ತಿನಲ್ಲಿ ಸರ್ಕಾರಿ ಶಾಲೆಗಳನ್ನು ಉಳಿಸಬೇಕಾದ ಅಧಿಕಾರಿಗಳು ಸರ್ಕಾರಿ ಶಾಲೆಗಳಲ್ಲಿ ಪ್ರತಿಭಾ ಕಾರಂಜಿ ಸ್ಪರ್ಧೆ ಆಯೋಜಿಸುವ ಬದಲಾಗಿ ದುಬಾರಿ ಶುಲ್ಕ ಪಾವತಿಸುವ ಖಾಸಗಿ ಶಾಲೆಯಲ್ಲಿ ಆಯೋಜನೆ ಮಾಡಿರುವ ಕ್ರಮವನ್ನು ಖಂಡಿಸಿ ಕನ್ನಡ ಪರ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿದರು.



ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ 13 ಕೊಠಡಿಗಳ ಅವಶ್ಯಕತೆ ಇದೆ. ಅಲ್ಲದೇ ತಾಲೂಕಿನ ಮಧ್ಯ ಭಾಗದಲ್ಲಿ ಈ ಶಾಲೆ ಇರುವುದರಿಂದ ಸಕಲ ಸೌಲಭ್ಯದ ಜೊತೆಗೆ ತಾಲೂಕಿನ ಎಲ್ಲಾ ಶಾಲೆಯ ವಿದ್ಯಾರ್ಥಿಗಳು ಬಂದು ಹೋಗಲು ಅನುಕೂಲವಾಗುತ್ತದೆ ಎಂಬ ಹಿತದೃಷ್ಟಿಯಿಂದ ಕಾರ್ಮೆಲ್ ಶಾಲೆಯಲ್ಲಿ ಆಯೋಜನೆ ಮಾಡಲಾಗಿದೆ. ಕಳೆದ ಎರಡು ಮೂರು ವರ್ಷಗಳ ಹಿಂದೆಯೂ ಸಹ ಕಾರ್ಮೆಲ್ ಶಾಲೆಯಲ್ಲಿ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಆದ್ದರಿಂದ ಈ ವರ್ಷವೂ ಅದೇ ಶಾಲೆಯಲ್ಲಿ ಆಯೋಜನೆ ಮಾಡಲಾಗಿದೆ.

- ಮಹೇಶ್, ಕ್ಷೇತ್ರ ಶಿಕ್ಷಣಾಧಿಕಾರಿ.

ಸರ್ಕಾರಿ ಕನ್ನಡ ಶಾಲೆ ಮಕ್ಕಳು ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ಕೀಳರಿಮೆ ಬಿಟ್ಟು ತಮ್ಮ ಪ್ರತಿಭೆ ಪ್ರದರ್ಶನ ಮಾಡಲು ಹೇಗೆ ಸಾಧ್ಯವಾಗುತ್ತದೆ ಎಂದು ಆರೋಪಿಸಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳ ವಿರುದ್ಧ ಶಾಸಕರು ಕ್ರಮ

ಪ್ರತಿಭಾ ಕಾರಂಜಿಯನ್ನು ಸರ್ಕಾರಿ ಕನ್ನಡ ಶಾಲೆಗಳಲ್ಲಿ ಆಯೋಜಿಸಬೇಕೆಂಬ ಸರ್ಕಾರದ ನಿಯಮವಿದ್ದರೂ, ಸಾರ್ವಜನಿಕ ಶಿಕ್ಷಣ ಇಲಾಖೆ ಅಧಿಕಾರಿಗಳೇ ಖಾಸಗಿ ಶಿಕ್ಷಣ ಸಂಸ್ಥೆಗಳ ಮೊರೆ ಹೋಗುವ ಮೂಲಕ ಸರ್ಕಾರಿ ಶಾಲೆಗಳ ಅಳಿವಿಗೆ ಪಣತೊಟ್ಟಿ ನಿಂತಿದ್ದಾರೆ. ಅಲ್ಲದೇ ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಧರ್ಮ ರತ್ನಾಕರ, ಸತೀಶ್ ದಳವಾಯಿ, ರಂಗನಾಥ್, ರಮೇಶ್ ಸೇರಿದಂತೆ ಇತರರಿದ್ದರು.

ಮಾದಪ್ಪನಿಗೆ ಹೂವಿನ ಅಲಂಕಾರ ಸೇವೆ

ತಿ.ನರಸೀಪುರ, ನ.11– ಅನಾಥ ಶವಗಳ ಮುಕ್ತಿದಾತ ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ತಿ.ನರಸೀಪುರ ಪಟ್ಟಣದ ನಿವಾಸಿ ಡಾ.ಎಂ.ಮಾದೇಶ್ ತಮ್ಮ ತಂದೆ ಕೆ.ಮಹದೇವಪ್ಪನವರ ಸ್ಮರಣಾರ್ಥ ಶ್ರೀಮಲೆ ಮಹದೇಶ್ವರಬೆಟ್ಟದ ದೇವಸ್ಥಾನದಲ್ಲಿ 35ನೇ ವರ್ಷದ ಹೂವಿನ ಅಲಂಕಾರ ಸೇವೆ ನೆರವೇರಿಸಿದರು.

ಕಳೆದ 34 ವರ್ಷಗಳಿಂದ ಶ್ರೀಮಹದೇಶ್ವರಬೆಟ್ಟ ದೇವಸ್ಥಾನದ ಸನ್ನಿಧಿಯಲ್ಲಿ ಹೂವಿನ ಅಲಂಕಾರ ಸೇವೆ ನೆರವೇರಿಸುತ್ತಾ ಬಂದಿರುವ ಮಾದೇಶ್ ಎರಡನೇ ಕಾರ್ತಿಕ ಸೋಮವಾರವಾದ ಇಂದು ಸುಮಾರು 1000 ಕೆಜಿ ಹೂಗಳನ್ನು ಬಳಸಿ 35 ಮಂದಿ ಹೂಗಾರರ ಸಹಕಾರ ದೊಂದಿಗೆ ದೇವಸ್ಥಾನದ ಗರ್ಭಗುಡಿ, ಚಪ್ಪರ ಮಾಳಿಗೆ, ಪ್ರಾಂಗಣ, ಗಣೇಶನ ಗುಡಿ, ಹುಲಿ ವಾಹನ, ಬಸವವಾಹನ, ರುದ್ರಾಕ್ಷಿ ಮಂಟಪ ಹಾಗೂ ಚಿನ್ನದರಥ, ಸಾಲೂರು ಮಠ ಮೊದಲಾದ ಸ್ಥಳಗಳನ್ನು ಸೇವಂತಿಗೆ, ಚೆನ್ನಮಲ್ಲಿಗೆ, ಗಣಗಲೆ, ಸುಗಂಧರಾಜ, ಜಾಲ್ವೇರಾ, ಆಸ್ಪರಾಸ್, ಗುಲಾಬಿ ಸೇರಿದಂತೆ ಮೊದಲಾದ ಬಗೆ ಬಗೆಯ ಹೂಗಳಿಂದ ಸಿಂಗರಿಸಿ ಮಾದಪ್ಪನ ಸೇವೆ ಮಾಡಿದರು. ಬೆಳಗ್ಗೆಯಿಂದಲೇ ಸಾವಿರಾರು ಭಕ್ತರು ದೇವಾಲಯಕ್ಕೆ ಆಗಮಿಸಿ ಹೂವಿನ ಅಲಂಕಾರ ಕಣ್ತುಂಬಿಕೊಂಡು ದೇವರ ದರ್ಶನ ಪಡೆದರು.



ತಿ.ನರಸೀಪುರ ನಿವಾಸಿ ಡಾ.ಎಂ.ಮಾದೇಶ್ ತಮ್ಮ ತಂದೆ ಜ್ಞಾಪಕಾರ್ಥ ಮಲೆ ಮಹದೇಶ್ವರಬೆಟ್ಟದ ದೇವಸ್ಥಾನದಲ್ಲಿ ಹೂವಿನ ಅಲಂಕಾರ ಸೇವೆ ನೆರವೇರಿಸಿದರು.

ಈ ವೇಳೆ ಮಾತನಾಡಿದ ಡಾ.ಎಂ.ಮಾದೇಶ್, ನಮ್ಮ ತಂದೆ ಮಹದೇವಪ್ಪರವರ ಸ್ಮರನಾರ್ಥ ಕಳೆದ 35 ವರ್ಷಗಳಿಂದಲೂ ಹೂವಿನ ಅಲಂಕಾರ ಸೇವೆ ನೆರವೇರಿಸುತ್ತಾ ಬಂದಿದ್ದೇನೆ. ಸಮಾಜ ಸೇವೆಯೊಂದಿಗೆ ದೇವತಾ ಕಾರ್ಯ ಹಮ್ಮಿಕೊಂಡು ರಾಜ್ಯದ ಜನತೆಗೆ ಒಳ್ಳೆಯದಾಗಲಿ ಎಂಬ ಉದ್ದೇಶವೂ ಸಹ ಹೂವಿನ ಅಲಂಕಾರ ಸೇವೆಯೊಂದಿಗೆ ಅಡಕವಾಗಿದೆ. ಭಗವಂತ ಎಲ್ಲಿಯವರೆಗೆ ಸೇವೆ ಮಾಡಲು ಪ್ರೇರಣೆ ನೀಡುತ್ತಾನೋ ಅಲ್ಲಿಯವರೆಗೂ ನಿರಂತರವಾಗಿ ಸೇವೆ ಸಲ್ಲಿಸುತ್ತೇನೆ ಎಂದರು.

ಅಲಂಕಾರ ತಂಡದಲ್ಲಿ ಚಾಮರಾಜನಗರ, ಗುಂಡ್ಲುಪೇಟೆ, ತಿ.ನರಸೀಪುರದ ಸುರೇಶ್, ರಘು, ಹರೀಶ್, ಭೈರಾಪುರ ಬಾಲು, ಸಿದ್ದರಾಜು, ನಾಗ, ಮಹೇಶ್, ಶಿವು ಇತರರಿದ್ದರು.

ಇಂದು ರೈತರ ಸಮಸ್ಯೆಗಳ ಕುರಿತು ಸಭೆ

ಹಂಪಾಪುರ, ನ.11– ಗ್ರಾಮದ ಬಸ್ ನಿಲ್ದಾಣದ ಸಂತೇಮಾಳದ ಬಳಿ ಹೆಚ್.ಡಿ.ಕೋಟೆ ತಾಲೂಕಿನ ರೈತರ ಸಮಸ್ಯೆಗಳ ಕುರಿತು ಚರ್ಚಿಸುವ ಸಂಬಂಧ ನ.12 ರಂದು ಬೆಳಗ್ಗೆ 11 ಗಂಟೆಗೆ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ನೇತೃತ್ವದಲ್ಲಿ ಸಭೆ ಆಯೋಜಿಸಲಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ರೈತರು ಸಭೆಗೆ ಆಗಮಿಸುವಂತೆ ಪ್ರಕಟಣೆ ತಿಳಿಸಿದೆ.

ಕರ್ತವ್ಯ ಲೋಪ: ದೈಹಿಕ ಶಿಕ್ಷಕಿ ಅಮಾನತು

ಹುಣಸೂರು, ನ.11– ಮಕ್ಕಳು, ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರೊಂದಿಗೆ ಅನುಚಿತ ವರ್ತನೆ, ಕರ್ತವ್ಯ ಲೋಪ ಹಿನ್ನಲೆಯಲ್ಲಿ ತಾಲೂಕಿನ ಬಿಳಿಕೆರೆ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲೆ ವಿಭಾಗದ ದೈಹಿಕ ಶಿಕ್ಷಕಿಯನ್ನು ಅಮಾನತುಗೊಳಿಸಿ ಡಿಡಿಪಿಐ ಜವರೇಗೌಡ ಆದೇಶ ಹೊರಡಿಸಿದ್ದಾರೆ.

ಶಾಲೆಯ ದೈಹಿಕ ಶಿಕ್ಷಕಿ ರೂಪಾದೇವಿ ಅಮಾನತುಗೊಂಡವರು. ಈಕೆ ಶೈಕ್ಷಣಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳದಿರುವುದು. ಕರ್ತವ್ಯ ನಿರ್ವಹಿಸುವಲ್ಲಿ ಸಂಪೂರ್ಣ ವಿಫಲ. ಮಕ್ಕಳೊಂದಿಗೆ ಅನುಚಿತ ವರ್ತನೆ, ಶಾಲಾ ಎಸ್‌ಡಿಎಂಸಿ ಸದಸ್ಯರು ಹಾಗೂ ಉಪಪ್ರಾಚಾರ್ಯರೊಂದಿಗೆ ಜಗಳವಾಡಿ ಏಕವಚನದಲ್ಲಿ ನಿಂದಿಸಿರುವ ಬಗ್ಗೆ ಎಸಿಡಿಎಂಸಿ ಸದಸ್ಯರು ಹಾಗೂ ಶಾಲೆಯ ಶಿಕ್ಷಕರು, ಮಕ್ಕಳ ಹೇಳಿಕೆಯನ್ನು ಆಧರಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ವರದಿಯಂತೆ ರೂಪಾದೇವಿ ಅವರಿಗೆ ನೋಟಿಸ್ ನೀಡಲಾಗಿತ್ತು. ಈ ಎಲ್ಲಾ ಆರೋಪಗಳು ತನಿಖೆ ವೇಳೆ ಸಾಬೀತಾಗಿದ್ದರಿಂದ ಡಿಡಿಪಿಐ ಜವರೇಗೌಡ ಅವರನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ ಎಂದು ಬಿಇಓ ಎಸ್.ಪಿ.ಮಹದೇವ್ ತಿಳಿಸಿದ್ದಾರೆ.

ಪಪಂ ಉಪ ಚುನಾವಣೆ: ಚಂದ್ರಕಲಾ ನಾಮಪತ್ರ ಸಲ್ಲಿಕೆ

ಸರಗೂರು, ನ.11– ಪಟ್ಟಣ ಪಂಚಾಯಿತಿ 4ನೇ ವಾರ್ಡ್ ಸದಸ್ಯ ಎಸ್.ಎಲ್.ರಾಜಣ್ಣ ಅವರು ನಿಧನರಾದ ಹಿನ್ನಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ಉಪ ಚುನಾವಣೆ ನಡೆಯುತ್ತಿದ್ದು, ನಾಮಪತ್ರ ಸಲ್ಲಿಕೆಗೆ ಅಂತಿಮ ದಿನವಾದ ಸೋಮವಾರ ಕಾಂಗ್ರೆಸ್ ಅಭ್ಯರ್ಥಿಯಾಗಿ ಚಂದ್ರಕಲಾ ನಾಮಪತ್ರ ಸಲ್ಲಿಸಿದರು.



ಪರಿಶಿಷ್ಟ ಜಾತಿಗೆ ಮೀಸಲಾಗಿರುವ ಪಪಂ ವಾರ್ಡ್ ನಂ.4 ಸದಸ್ಯ ಸ್ಥಾನಕ್ಕೆ ದಿ.ಎಸ್.ಎಲ್.ರಾಜಣ್ಣ ಅವರ ಪತ್ನಿ ಚಂದ್ರಕಲಾ ಕಾಂಗ್ರೆಸ್ ಮುಖಂಡರೊಂದಿಗೆ ಆಗಮಿಸಿ ನಾಮಪತ್ರ ಸಲ್ಲಿಸಿದರು.

ನಾಮಪತ್ರ ಪರಿಶೀಲನೆ ನ.12ರಂದು ನಡೆಯಲಿದ್ದು, 14 ಹಿಂಪಡೆಯಲು ಕೊನೆ ದಿನವಾಗಿದೆ. ಸದಸ್ಯ ಸ್ಥಾನಕ್ಕೆ ಚಂದ್ರಕಲಾ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದಾರೆ ಎನ್ನಲಾಗಿದ್ದು, ಚುನಾವಣೆ ಪ್ರಕ್ರಿಯೆ ಮುಗಿದ ಬಳಿಕ ನ.23ರಂದು ಪಪಂನಲ್ಲಿ ಅವಿರೋಧ ಆಯ್ಕೆ ಘೋಷಿಸಲಾಗುವುದು ಎಂದು ಚುನಾವಣಾಧಿಕಾರಿ ಜಿ.ಪುರುಷೋತ್ತಮ್, ಸಹಾಯಕ ಚುನಾವಣಾಧಿಕಾರಿ ಮಂಜುನಾಥ್ ತಿಳಿಸಿದ್ದಾರೆ. ಈ ವೇಳೆ ಸರಗೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾದಪ್ಪ, ಟೌನ್ ಅಧ್ಯಕ್ಷ ಎಸ್.ಎನ್.ನಾಗರಾಜು, ಜಿಪಂ ಮಾಜಿ ಸದಸ್ಯ ಪಿ.ರವಿ, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವ ಶಂಕರ್, ಚಲುವರಾಜು, ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವಣ್ಣ, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಪಪಂ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ಆದಿಕರ್ನಾಟಕ ಸಮಾಜದ ಯಜಮಾನ ಭೋಗಯ್ಯ, ರಂಗಯ್ಯ, ಮಾಜಿ ಯಜಮಾನ ಭೈರಲಿಂಗಯ್ಯ, ಗೋಪಾಲ್, ಮುಖಂಡರಾದ ಭೀಮಯ್ಯ, ಭೋಗಪ್ಪ, ಮಾದೇವ್, ಲೋಡರ್ಸ್ ಸಂಘದ ಮಾಜಿ ಅಧ್ಯಕ್ಷ ಗೋಪಾಲಯ್ಯ, ಬಿಲ್ಲಯ್ಯ, ದೊಡ್ಡಭೈರ, ಚನ್ನಯ್ಯ, ಎಸ್.ಜಿ.ಕೃಷ್ಣಯ್ಯ, ರಾಜು, ಚಿಕ್ಕಚನ್ನ, ರಮೇಶ್, ರಾಘವೇಂದ್ರ, ಮಹೇಶ್, ಸಿದ್ದಲಿಂಗಪ್ಪ ಹಾಗೂ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು.

ಗಾಂಜಾ ಸಂಗ್ರಹಿಸಿದ್ದ ಆರೋಪಿ ಬಂಧನ

ಬೈಲಕುಪ್ಪೆ, ನ.11– ಅಕ್ರಮವಾಗಿ ಮಾರಾಟ ಮಾಡಲು ಸಂಗ್ರಹಿಸಿದ್ದ 12.750 ಕೆಜಿ ಗಾಂಜಾದೊಂದಿಗೆ ಆರೋಪಿಯನ್ನು ಬಂಧಿಸುವಲ್ಲಿ ಬೈಲಕುಪ್ಪೆ ಪೊಲೀಸರು ಯಶಸ್ವಿಯಾಗಿದ್ದಾರೆ.



ಇಲ್ಲಿನ ಆನಂದ ನಗರ ಗ್ರಾಮದ ನಿವಾಸಿ ಸೈಯದ್ ಮಾಫಿಜ್ ಬಂಧಿತ ಆರೋಪಿ. ಈತ ಪಿರಿಯಾಪಟ್ಟಣ ತಾಲೂಕಿನ ಆನಂದ ನಗರದ ಸೈಯದ್ ಅಪ್ಸರ್ ಎಂಬುವರ ಜಮೀನಿನಲ್ಲಿದ್ದ ಮನೆಯಲ್ಲಿ ಅಕ್ರಮವಾಗಿ ಗಾಂಜಾ ಸಂಗ್ರಹಿಸಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ವೃತ್ತ ನಿರೀಕ್ಷಕ ದೀಪಕ್ ಮಾರ್ಗದರ್ಶನದಲ್ಲಿ ಬೈಲಕುಪ್ಪೆ ಎಸ್‌ಐ ಅಜಯ್ ಕುಮಾರ್ ಮತ್ತು ಸಿಬ್ಬಂದಿ ದಾಳಿ ನಡೆಸಿ ಆರೋಪಿಯನ್ನು ಬಂಧಿಸಿ, ಗಾಂಜಾ ವಶಪಡಿಸಿಕೊಂಡು ಪ್ರಕರಣ ದಾಖಲಿಸಿದರು. ಬಳಿಕ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ದ್ದಾರೆ. ಕಾರ್ಯಾಚರಣೆಯಲ್ಲಿ ಅಪರಾಧ ವಿಭಾಗದ ಎಸ್‌ಐ ಮಹಾಲಿಂಗಯ್ಯ, ಸಿಬ್ಬಂದಿಗಳಾದ ಮುದ್ದುರಾಜ್, ಮಹದೇವಪ್ಪ, ಕುಮಾರಸ್ವಾಮಿ, ವೀರೇಂದ್ರ, ರುದ್ರೇಶ್, ರವಿ, ಚಾಲಕ ಪ್ರದೀಪ್ ಇದ್ದರು.

ಹುಲಿ ದಾಳಿಗೆ ಹಸು ಬಲಿ



ಹುಲಿ ದಾಳಿಯಿಂದ ಸಾವನ್ನಪ್ಪಿರುವ ಹಸು.

ಹನಗೋಡು, ನ.11– ಹುಲಿ ದಾಳಿಗೆ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಹಸು ಬಲಿಯಾಗಿರುವ ಘಟನೆ ಇಲ್ಲಿಗೆ ಸಮೀಪದ ಅಬ್ಬೂರು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ಮಹದೇವಶೆಟ್ಟಿ ಅವರಿಗೆ ಸೇರಿದ ಹಸು ಬಲಿಯಾಗಿರುವುದು. ಈತ ಎಂದಿನಂತೆ ಗ್ರಾಮದ ಹೊರವಲಯದಲ್ಲಿರುವ ತಮ್ಮ ತೋಟದ ಕೊಟ್ಟಿಗೆಯಲ್ಲಿ ಹಸುವನ್ನು ಕಟ್ಟಿ ಹಾಕಿ ಅಟ್ಟಣಿಯಲ್ಲಿ ಮಲಗಿದ್ದರು. ಆದರೆ ಭಾನುವಾರ ರಾತ್ರಿ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದ ಹಸು ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿದೆ. ಈ ವೇಳೆ ಹಸು ಚೀರಾಟದಿಂದ ಎಚ್ಚರಗೊಂಡ ಮಹದೇವಶೆಟ್ಟಿ ಮೇಲೂ ಹುಲಿ ದಾಳಿ ನಡೆಸಿದೆ. ಆದರೆ ಅವರು ಕೊಟ್ಟಿಗೆ ಬಾಗಿಲು ಹಾಕಿಕೊಂಡ ಪರಿಣಾಮ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನೆ ಸಂಬಂಧ ಮಹದೇವಶೆಟ್ಟಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು. ಮಧ್ಯರಾತ್ರಿಯೇ ಘಟನಾ ಸ್ಥಳಕ್ಕೆ ಭೇಟಿ ನೀಡಿದ ಅರಣ್ಯ ಇಲಾಖೆ ಸಿಬ್ಬಂದಿ ತೋಟದೊಳಗೆ ಪಟಾಕಿ ಹಾಗೂ ಬೆಚ್ಚುಗುಂಡು ಹಾರಿಸಿ ಹುಲಿಯನ್ನು ಸಮೀಪದ ಅರಣ್ಯಕ್ಕೆ ಓಡಿಸಿದ್ದಾರೆ ಎನ್ನಲಾಗಿದೆ.

ಕಳೆದೆರಡು ತಿಂಗಳಿಂದ ಶೆಟ್ಟಳ್ಳಿ ಮೀಸಲು ಅರಣ್ಯ ಪ್ರದೇಶದಲ್ಲಿ ಹುಲಿ ಬೀಡು ಬಿಟ್ಟಿದ್ದು, ಕಾಡಂಚಿನ ಗ್ರಾಮಗಳಲ್ಲಿ ಹುಲಿ ಕಾಣಿಸಿಕೊಳ್ಳುತ್ತಿದೆ. ಅಲ್ಲದೇ ಅಕ್ಕ ಪಕ್ಕದ ಗ್ರಾಮಗಳಲ್ಲಿ ಜಾನುವಾರುಗಳ ಮೇಲೆ ಆಗಾಗ್ಗೆ ಹುಲಿ ದಾಳಿ ಮಾಡುತ್ತಿದ್ದು, ಇದರಿಂದ ಈ ಭಾಗದ ಗ್ರಾಮಸ್ಥರು ಭಯಗೊಂಡಿದ್ದಾರೆ. ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಬೋನಿಟ್ಟು ಹುಲಿ ಸೆರೆ ಹಿಡಿಯಬೇಕೆಂದು ಗ್ರಾಪಂ ಅಧ್ಯಕ್ಷೆ ಗೀತಾ ಒತ್ತಾಯಿಸಿದ್ದಾರೆ.

ವೈನ್‌ಶಾಪ್ ಮಾಲೀಕನ ಪುತ್ರನಿಗೆ ಚಾಕುವಿನಿಂದ ಇರಿದ ಪ್ರಕರಣ

ತಿ.ನರಸೀಪುರ ಪೊಲೀಸರಿಂದ ಇಬ್ಬರ ಬಂಧನ

ತಿ.ನರಸೀಪುರ, ನ.11– ಪಟ್ಟಣದ ವೈನ್ಸ್ ಶಾಪ್ ಮಾಲೀಕನ ಪುತ್ರನಿಗೆ ಚಾಕುವಿನಿಂದ ಇರಿದು ಪರಾರಿಯಾಗಿದ್ದ ಆರೋಪಿಗಳನ್ನು ಪಟ್ಟಣ ಠಾಣೆ ಪೋಲೀಸರು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಮೂಲತಃ ಆಲಗೂಡು ಗ್ರಾಮದ ನಿವಾಸಿ, ಪ್ರಸ್ತುತ ಬೆಂಗಳೂರಿನಲ್ಲಿ ವಾಸವಾಗಿರುವ ದೇವರಾಜ್ ಅಲಿಯಾಸ್ ಅಭಯ್(29) ಹಾಗೂ ಆತನ ಸ್ನೇಹಿತ ಮೈಸೂರಿನ ಜೆ.ಪಿ.ನಗರದ ನಿವಾಸಿ ಗಣೇಶ್ ಅಲಿಯಾಸ್ ಗಣಪ(26) ಬಂಧಿತ ಆರೋಪಿಗಳು.

ಪಟ್ಟಣದ ಮುರುಗನ್ ಚಿತ್ರಮಂದಿರ ಬಳಿಯ ಶಿವಶಕ್ತಿ ವೈನ್ಸ್ ಮಾಲೀಕ ಆಲಗೂಡು ಸಿದ್ದಪ್ಪ ಎಂಬುವರ ಪುತ್ರ ದಿನಕರ್ ನಾಯಕ್ ಎಂಬಾತನಿಗೆ ಅ.23ರಂದು ಭಗವಾನ್ ಚಿತ್ರಮಂದಿರ ವೃತ್ತದಲ್ಲಿ ಮಾಸ್ಕ್ ಧರಿಸಿದ್ದ ವ್ಯಕ್ತಿ ಚಾಕುವಿನಿಂದ ಇರಿದು ಹಲ್ಲೆ ನಡೆಸಿ ಪರಾರಿಯಾಗಿದ್ದ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು ತನಿಖೆ ಕೈಗೊಂಡಿದ್ದ ಪೊಲೀಸರು ಆರೋಪಿಗಳ ಪತ್ತೆಗೆ ತೀವ್ರ ಹುಡುಕಾಟ ನಡೆಸಿದ್ದರು. ನ.8ರಂದು ಪಟ್ಟಣದ ಎಪಿಎಂಸಿ ಆವರಣದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಇಬ್ಬರು ಅಪರಿಚಿತರನ್ನು ಪೊಲೀಸರು ವಶಕ್ಕೆ ಪಡೆದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ.



ದೇವರಾಜು



ಗಣೇಶ

ಈ ಹಿಂದೆ ಆಲಗೂಡಿನಲ್ಲೇ ವಾಸವಿದ್ದ ಅಭಯ್ ಹಾಗೂ ದಿನಕರ್ ನಾಯಕ್ ನಡುವೆ ಹಣಕಾಸು ವ್ಯವಹಾರಕ್ಕೆ ಸಂಬಂಧಿಸಿದಂತೆ ಗಲಾಟೆ ನಡೆದಿತ್ತು. ನಂತರ ಬೆಂಗಳೂರಿಗೆ ಹೋಗಿ ಹೋಟೆಲ್ ವ್ಯಾಪಾರ ಮಾಡುತ್ತಿದ್ದ ಅಭಯ್, ದಿನಕರ್ ನಾಯಕ್‌ನನ್ನು ಕೊಲೆ ಮಾಡಲು ತಿ.ನರಸೀಪುರಕ್ಕೆ ಆಗಮಿಸಿದ್ದ ಎನ್ನಲಾಗಿದೆ. ಅದರಂತೆ ಭಗವಾನ್ ಚಿತ್ರ ಮಂದಿರದ ಬಳಿ ನಿಂತಿದ್ದ ದಿನಕರ್ ನಾಯಕನಿಗೆ ಚಾಕುವಿನಿಂದ ಇರಿದಿದ್ದ. ಘಟನೆಯಲ್ಲಿ ತೀವ್ರ ಗಾಯಗೊಂಡ ದಿನಕರ್‌ನನ್ನು ಮೈಸೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲು ಮಾಡಲಾಗಿತ್ತು.

ದೇವರಾಜ್ ಅಲಿಯಾಸ್ ಅಭಯ್ ರೌಡಿ ಶೀಟರ್ ಆಗಿದ್ದು, ಆತನ ವಿರುದ್ಧ ಮೈಸೂರಿನ ದೇವರಾಜ ಪೊಲೀಸ್ ಠಾಣೆ ಸೇರಿದಂತೆ ವಿವಿಧ ಠಾಣೆಗಳಲ್ಲಿ ಹಲವು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಆರೋಪಿ ಅಭಯ್‌ಗೆ ಸಹಕಾರ ನೀಡಿದ ಆರೋಪದ ಮೇರೆಗೆ ಗಣೇಶ್ ಅಲಿಯಾಸ್ ಗಣಪನ ಮೇಲೆ ಪ್ರಕರಣ ದಾಖಲಿಸಿರುವ ಪೊಲೀಸರು ಇಬ್ಬರನ್ನೂ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಡಿವೈಎಸ್‌ಪಿ ರಘು ಅವರ ಮಾರ್ಗದರ್ಶನದಲ್ಲಿ ವೃತ್ತ ನಿರೀಕ್ಷಕ ಧನಂಜಯ, ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ, ತಾಂತ್ರಿಕ ವಿಭಾಗದ ಎಎಸ್‌ಐ ವಸಂತ್ ಕುಮಾರ್, ಎಎಸ್‌ಐ ಚೆಲುವರಾಜು, ಸಿಬ್ಬಂದಿಗಳಾದ ಪ್ರಭಾಕರ್ ಗೋವಿಂದು, ಶಿವಸ್ವಾಮಿ ವಿನೋದ, ಸಂದೀಪ್, ರಶ್ಮಿ ಕವಿತಾ, ಪಾಷ ಮತ್ತು ಸಿಬ್ಬಂದಿ ವರ್ಗ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

13ನೇ ವರ್ಷದ ಲಕ್ಷ ದೀಪೋತ್ಸವ

ತಿ.ನರಸೀಪುರ, ನ.11– ಸ್ವಸ್ತಿಶ್ರೀ ಕ್ರೋಧಿ ನಾಮಸಂವತ್ಸರದ ಕಾರ್ತಿಕ ಶುದ್ಧ ತ್ರಯೋದಶಿ ಶುಭ ದಿನವಾದ ನ.14 ರಂದು ಸಂಜೆ 6 ಗಂಟೆಗೆ ಪಟ್ಟಣದ ಶ್ರೀಗುಂಜಾ ನರಸಿಂಹ ಸ್ವಾಮಿ ದೇವಾಲಯದಲ್ಲಿ 13ನೇ ವರ್ಷದ ಲಕ್ಷ ದೀಪೋತ್ಸವ ಮತ್ತು ತೆಪ್ಪೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಶ್ರೀಗುಂಜಾನರಸಿಂಹ ಸ್ವಾಮಿ ಸೇವಾ ಸಮಿತಿ ಹಾಗೂ ಪಾರುಪತ್ತೇದಾರ್ ತಿರುಮಕೂಡಲು ದೀಪು ತಿಳಿಸಿದ್ದಾರೆ.

ಅಂದು ದೇವಾಲಯದಲ್ಲಿ ಹೋಮ ಹವನದೊಂದಿಗೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಲಿದ್ದು, ಸಂಜೆ 6 ಗಂಟೆಗೆ ಲಕ್ಷ ದೀಪೋತ್ಸವಕ್ಕೆ ಚಾಲನೆ ನೀಡಲಾಗುವುದು. ಸಂಜೆ 6.30ಕ್ಕೆ ಕಪಿಲ ನದಿಯಲ್ಲಿ ವಿಜೃಂಭಣೆಯ ತೆಪ್ಪೋತ್ಸವ ನಡೆಯಲಿದೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮ ಯಶಸ್ವಿಗೆ ಸಹಕರಿಸುವ ಜೊತೆಗೆ ಶ್ರೀ ಗುಂಜಾನರಸಿಂಹಸ್ವಾಮಿಯವರ ಕೃಪೆಗೆ ಪಾತ್ರರಾಗಬೇಕಾಗಿ ಪ್ರಕಟಣೆ ತಿಳಿಸಿದೆ.

ಗ್ರಾಮದ ಅಭಿವೃದ್ಧಿಗೆ ಒಗ್ಗಟ್ಟಿರಲಿ: ಶಾಸಕ ದರ್ಶನ್



ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ಮಲ್ಕುಂಡಿ, ನ.11– ಜನರು ಒಗ್ಗಟ್ಟಿನಿಂದ ಗ್ರಾಮದ ಅಭಿವೃದ್ಧಿಗೆ ಮುಂದಾಗಬೇಕು ಎಂದು ಶಾಸಕ ದರ್ಶನ್ ತಿಳಿಸಿದರು.

ಇಲ್ಲಿಗೆ ಸಮೀಪದ ದೇವರಾಯಶೆಟ್ಟಿಪುರದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಸಿದ್ದಪ್ಪಾಜಿ ದೇವಸ್ಥಾನ ಹಾಗೂ ಧಾರ್ಮಿಕ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕೆಲವು ಹಳ್ಳಿಗಳಲ್ಲಿ ಎಲ್ಲಾ ಸಂಪನ್ಮೂಲಗಳಿದ್ದರೂ ಒಗ್ಗಟ್ಟು ಇಲ್ಲದೇ ಅಭಿವೃದ್ಧಿಯಲ್ಲಿ ಹಿನ್ನಡೆಯನ್ನು ಕಾಣಬಹುದು. ದಾನಿಗಳಿದ್ದರೂ ದೇವಾಲಯಗಳು ಸೌಲಭ್ಯ ಪಡೆಯಲು ಸಾಧ್ಯವಿರುವುದಿಲ್ಲ. ಗ್ರಾಮಸ್ಥರು ಪರಸ್ಪರ ವಿಶ್ವಾಸದಿಂದ ಇದ್ದರೇ ಆ ಗ್ರಾಮ ಅಭಿವೃದ್ಧಿ ಹೊಂದುತ್ತದೆ ಎಂದರು.

ಗ್ರಾಮಸ್ಥರ ಸಂಕಲ್ಪದೊಂದಿಗೆ ಶ್ರೀಸಿದ್ದಪ್ಪಾಜಿ ದೇವಸ್ಥಾನ ನಿರ್ಮಿಸಿರುವುದು ಭಕ್ತಿಗೆ ಹಿಡಿದ ಕನ್ನಡಿಯಾಗಿದೆ. ಗ್ರಾಮದ ಪ್ರತಿಯೊಬ್ಬರೂ ದೇವಸ್ಥಾನಕ್ಕೆ ಹೋಗುವುದರಿಂದ ಮನಸ್ಸಿಗೆ ನೆಮ್ಮದಿ ಸಿಗುತ್ತದೆ ಎಂದರು. ಹರಳಯ್ಯ ರುದ್ರ ಸ್ವಾಮೀಜಿ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಎಂಎಲ್‌ಸಿ ಡಾ.ತಿಮ್ಮಯ್ಯ, ಜಿಪಂ ಮಾಜಿ ಸದಸ್ಯ ಕೆ.ಮಾರುತಿ, ಮುಖಂಡರಾದ ಮಂಜು ಪಾಟೀಲ್, ಶಿವರಾಜಪ್ಪ ಸೇರಿದಂತೆ ಇತರರಿದ್ದರು.

ವಿದ್ಯಾರ್ಥಿಗಳು ಸೇವೆಯೊಂದಿಗೆ ಸಹಾಯ ಮಾಡುವ ಗುಣ ಬೆಳೆಸಿಕೊಳ್ಳಿ

ಗುರುವಂದನಾ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ನಂಜನಗೂಡು, ನ.11– ವಿದ್ಯಾರ್ಥಿಗಳು ಜೀವನದಲ್ಲಿ ಸೇವಾ ಮನೋಭಾವ ಹಾಗೂ ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಗುಣ ಬೆಳೆಸಿಕೊಳ್ಳಬೇಕು ಎಂದು ಸುತ್ತೂರು ಮಠಾಧ್ಯಕ್ಷ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಸುತ್ತೂರು ಜೆಎಸ್‌ಎಸ್ ಸಂಸ್ಥೆಯ ಅಲ್ಲಮಪ್ರಭು ಸಭಾಂಗಣದಲ್ಲಿ ಜೆಎಸ್‌ಎಸ್ ಶಿಕ್ಷಕರ ತರಬೇತಿ ಸಂಸ್ಥೆಯ 2009–11ನೇ ಸಾಲಿನಲ್ಲಿ ಶಿಕ್ಷಣ ಪಡೆದ ಹಿರಿಯ ವಿದ್ಯಾರ್ಥಿಗಳು ಆಯೋಜಿಸಿದ್ದ ಗುರುಭ್ಯೋನಮಃ ಗುರು ವಂದನಾ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು.

ಜೆಎಸ್‌ಎಸ್ ಶಿಕ್ಷಣ ಸಂಸ್ಥೆ ಕಾಲೇಜಿಗೆ 65 ವರ್ಷಗಳ ಇತಿಹಾಸವಿದ್ದು, 1960ರ ದಶಕದಲ್ಲಿ ರಾಷ್ಟ್ರಪತಿಗಳಾಗಿದ್ದ ಡಾ.ಸರ್ವಪಲ್ಲಿ ರಾಧಕೃಷ್ಣನ್ ಅವರು ಭೇಟಿ ನೀಡಿದ್ದರು. ಇನ್ನು 2009ರಲ್ಲಿ ಏರ್ಪಡಿಸಿದ್ದ ಕಾಲೇಜಿನ ಸುವರ್ಣ ಮಹೋತ್ಸವ ಆಚರಣೆಗೆ ಮಾಜಿ ರಾಷ್ಟ್ರಪತಿ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ಭಾಗವಹಿಸಿದ್ದರು ಎಂದು ಸ್ಮರಿಸಿದರು.



ಸುತ್ತೂರು ಜೆಎಸ್‌ಎಸ್ ಶಿಕ್ಷಕರ ತರಬೇತಿ ಸಂಸ್ಥೆಯಲ್ಲಿ ಗುರುವಂದನಾ ಕಾರ್ಯಕ್ರಮ ನಡೆಯಿತು.

ಸಮಾರಂಭದಲ್ಲಿ ಹಿರಿಯ ವಿದ್ಯಾರ್ಥಿಗಳು ಕಾಲೇಜು ನಡೆದು ಬಂದ ಹಾದಿ ಬಗ್ಗೆ ವಿಡಿಯೋ ಪ್ರದರ್ಶನ ಏರ್ಪಡಿಸಿ, ಸಂಸ್ಥೆ ತಮ್ಮ ಜೀವನಕ್ಕೆ ದಾರಿದೀಪವಾದ ಬಗೆಯನ್ನು ಸ್ಮರಿಸಿಕೊಂಡರು. ಇದೇ ಸಂದರ್ಭ ಜೆಎಸ್‌ಎಸ್ ಡಿ.ಇಡಿ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ದೊಡ್ಡಸಿದ್ದಯ್ಯ, ರಾಮಣ್ಣ ಮತ್ತು ದಾಕ್ಷಾಯಿಣಿ ಬಸವರಾಜು ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಸಕಲೇಶಪುರದ ಕಿತ್ತಲೆ ಮನೆ ಎಸ್ಟೇಟ್‌ನ ಮಾಲೀಕ ರೋಹಿತ್ ಹಿರಿಯ ವಿದ್ಯಾರ್ಥಿಗಳು ಪ್ರಾರಂಭಿಸಿರುವ ಅಭ್ಯುದಯ ಫೌಂಡೇಶನ್‌ಗೆ ಸುತ್ತೂರು ಶ್ರೀಗಳ ಸಮ್ಮುಖ ದೇಣಿಗೆ ನೀಡಿದರು. ಕಾರ್ಯಕ್ರಮದಲ್ಲಿ ನಿವೃತ್ತ ಪ್ರಾಂಶುಪಾಲ ಜಿ.ಎಂ.ಬಸವಣ್ಣ, ಹಿರಿಯ ಪ್ರಶಿಕ್ಷಣಾರ್ಥಿಗಳಾದ ಮಹದೇವಮ್ಮ, ತಸ್ಲೀಮ್, ಆಶಾರಾಣಿ, ಸೌಮ್ಯ ಮತ್ತಿತರರಿದ್ದರು.

ಕೇರಳ ಸರ್ಕಾರ, ಗಾಂಧಿ ಕುಟುಂಬದ ಲಾಬಿಗೆ ಮಣಿದ ಡಿ.ಕೆ.ಶಿವಕುಮಾರ್

ಬಂಡೀಪುರ ಅರಣ್ಯದಲ್ಲಿ ರಾತ್ರಿ ವಾಹನ ಸಂಚಾರ ನಿಷೇಧ ವಾಪಸ್?

ಬೆಂಗಳೂರು, ನ.11– 2009ರಿಂದ ಬಂಡೀಪುರ ಅರಣ್ಯ ಮಾರ್ಗವಾಗಿ ಊಟಿ ಕಡೆಗೆ ರಾಷ್ಟ್ರೀಯ ಹೆದ್ದಾರಿ 67 ಹಾಗೂ ಕೇರಳದ ಸುಲ್ತಾನ್ ಬತ್ತೇರಿ ಕಡೆಗೆ ರಾಷ್ಟ್ರೀಯ ಹೆದ್ದಾರಿ 766ನಲ್ಲಿ ರಾತ್ರಿ ವೇಳೆ ಸಂಚಾರ ನಿಷೇಧವಿದೆ. ಹುಲಿ ಸೇರಿ ಇತರ ವನ್ಯಜೀವಿಗಳ ರಕ್ಷಣೆ ಹಾಗೂ ಮಾನವ ವನ್ಯ ಜೀವಿ ಸಂಘರ್ಷ ಉದ್ದೇಶದಿಂದ ರಾಜ್ಯ ಸರ್ಕಾರ 2009ರಲ್ಲಿ ಎರಡೂ ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ 9ರಿಂದ ಬೆಳಗ್ಗೆ 6ರವರೆಗೆ ವಾಹನಗಳ ಸಂಚಾರ ನಿಷೇಧ ವಿಧಿಸಿತ್ತು. ಕೇರಳದಿಂದ ದೊಡ್ಡ ಮಟ್ಟದ ವಿರೋಧ ವ್ಯಕ್ತವಾದರೂ ಕರ್ನಾಟಕ ಮಾತ್ರ ತನ್ನ ನಿರ್ಧಾರಕ್ಕೆ ಅಚಲವಾಗಿ ಉಳಿದಿತ್ತು.

ಈಗ ಕೋಝಿಕ್ಕೋಡ್–ಕೊಳ್ಳೇಗಾಲ ರಾಷ್ಟ್ರೀಯ ಹೆದ್ದಾರಿ 766 ರ ರಾತ್ರಿ ಸಂಚಾರ ನಿಷೇಧವನ್ನು ಪರಿಹರಿಸಲು ಕರ್ನಾಟಕ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ. ಡಿಕೆ ಶಿವಕುಮಾರ್ ಮಾತಿಗೆ ಸ್ಥಳೀಯ ಜನರು ಹಾಗೂ ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್ ಅವರಿಂದ ಆಕ್ರೋಶ ವ್ಯಕ್ತವಾಗಿದೆ.

ಯುಡಿಎಫ್ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ಅವರ ಚುನಾವಣಾ ಪ್ರಚಾರಕ್ಕೆ ಸಂಬಂಧಿಸಿದಂತೆ ವಯನಾಡಿನ ಪಡಿಂಜರೆತಾರಾದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ಶಿವಕುಮಾರ್, ಪ್ರಿಯಂಕಾ ಅವರು ಎರಡು ದಿನಗಳ ಹಿಂದೆ ತಮ್ಮನ್ನು ಕರೆದಿದ್ದರು. ರಾಷ್ಟ್ರೀಯ ಹೆದ್ದಾರಿ 766ನಲ್ಲಿ

—— ಸಂಸದ ಯದುವೀರ್ ಖಂಡನೆ ——



ರಾತ್ರಿ ಸಂಚಾರ ನಿಷೇಧ ಹೇರಿರುವ ಬಗ್ಗೆ ಚರ್ಚೆ ಮಾಡಲು ಕರ್ನಾಟಕಕ್ಕೆ ಬರುವುದಾಗಿ ಹೇಳಿದ್ದರು. ರಾತ್ರಿ ಪ್ರಯಾಣದ ನಿರ್ಬಂಧವನ್ನು ತೆಗೆದುಹಾಕಲು ಸರ್ಕಾರ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದು ಶಿವಕುಮಾರ್ ತಿಳಿಸಿದ್ದಾರೆ. ಈ ನಿಷೇಧದಿಂದಾಗಿ ಕರ್ನಾಟಕದಲ್ಲಿ ಓದುತ್ತಿರುವ ಕೇರಳದ ಸಾವಿರಾರು ಪ್ರಯಾಣಿಕರು ಮತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ಹೇಳಿದ್ದಾರೆ.

ಬಂಡೀಪುರದಲ್ಲಿ ಹಾದುಹೋಗುವ ಎರಡು ರಾಷ್ಟ್ರೀಯ ಹೆದ್ದಾರಿಗಳಿಗೆ ರಾತ್ರಿ ಸಂಚಾರ ನಿರ್ಬಂಧವಿದೆ. ಸಾರಿಗೆ ಬಸ್ ಹಾಗೂ ಆಂಬುಲೆನ್ಸ್ ಸೇರಿ ಇತರೆ ತುರ್ತು ವಾಹನಗಳಿಗೆ ಇದರಿಂದ ವಿನಾಯಿತಿ ಇದೆ. ಈ ನಿರ್ಧಾರ ಫಲಪ್ರದವಾಗಿದ್ದು, ದೊಡ್ಡ ಪ್ರಾಣಿಗಳು ವಾಹನಕ್ಕೆ ಡಿಕ್ಕಿ ಹೊಡೆದು ಮೃತಪಟ್ಟ ಪ್ರಕರಣ ಭಾರೀ ಪ್ರಮಾಣದಲ್ಲಿ ಕಡಿಮೆಯಾಗಿದೆ.

ಬೇಜವಾಬ್ದಾರಿ ಹೇಳಿಕೆ: ಈಗ ಕೇರಳ ಸರ್ಕಾರ ಹಾಗೂ ಗಾಂಧಿ ಕುಟುಂಬದ ಲಾಬಿಯಿಂದಾಗಿ ಈ ನಿಷೇಧವನ್ನು ಹಿಂಪಡೆಯುವ ಬಗ್ಗೆ ಕೇರಳದಲ್ಲಿ ಡಿಕೆ ಶಿವಕುಮಾರ್ ಮಾತನಾಡಿದ್ದಾರೆ. ಡಿಕೆಶಿ ಹೇಳಿಕೆಯನ್ನು ಖಂಡಿಸಿರುವ ಯದುವೀರ್, ಇಂತಹ ಬೇಜವಾಬ್ದಾರಿ ಹೇಳಿಕೆ ನೀಡಬೇಡಿ ಎಂದಿದ್ದಾರೆ. ವಯನಾಡ್ ಉಪಚುನಾವಣೆಯಲ್ಲಿ ರಾಜಕೀಯ ಲಾಭಕ್ಕಾಗಿ ನಮ್ಮ ರಾಜ್ಯದ ನೈಸರ್ಗಿಕ ಸಂಪತ್ತಾದ ಬಂಡಿಪುರ ಅಭಯಾರಣ್ಯದ ಮಧ್ಯೆ ಹಾದು ಹೋಗುವ ಎನ್‌ಎಚ್ 766 ರ ರಾತ್ರಿ ಪ್ರಯಾಣ ನಿಷೇಧವನ್ನು ತೆಗೆದುಹಾಕುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಇತ್ತೀಚೆಗೆ ಕೇರಳದಲ್ಲಿ ನೀಡಿರುವ ಹೇಳಿಕೆಯು ಬೇಜವಾಬ್ದಾರಿ ಮತ್ತು ಖಂಡನೀಯವಾಗಿದೆ ಎಂದು ಎಕ್ಸ್‌ನಲ್ಲಿ ಬರೆದುಕೊಂಡಿದ್ದಾರೆ.

ಬಂಡೀಪುರದ ನೈಸರ್ಗಿಕ ಸೌಂದರ್ಯ ಮತ್ತು ಪರಿಸರ ವೈವಿಧ್ಯತೆಯು ಅದರೊಳಗೆ ಅಭಿವೃದ್ಧಿ ಹೊಂದುತ್ತಿರುವ ವಿವಿಧ ಪ್ರಭೇದಗಳ ವನ್ಯಜೀವಿಗಳಿಗೆ ಸೇರಿದ ಸಂಪತ್ತು. ಈ ಅಭಯಾರಣ್ಯದ ಮೂಲಕ ರಾತ್ರಿ ಪ್ರಯಾಣಕ್ಕೆ ಅವಕಾಶ ನೀಡುವುದರಿಂದ ವನ್ಯಜೀವಿಗಳಿಗೆ ಅಪಾಯವಿದೆ ಮತ್ತು ಮಾನವ–ವನ್ಯಜೀವಿ ಸಂಘರ್ಷಕ್ಕೆ ಇದು ಎಡೆ ಮಾಡಿಕೊಡುತ್ತದೆ. ಬೇರೆ ರಾಜ್ಯದಲ್ಲಿನ ಚುನಾವಣಾ ಲಾಭಕ್ಕಾಗಿ ಕರ್ನಾಟಕದ ವನ್ಯಜೀವಿಗಳಿಗೆ ಧಕ್ಕೆ ತರುವುದು ಸಮಂಜಸವಲ್ಲ. ನಮ್ಮ ಸರ್ಕಾರವು ಈ ಪರಿಸರ ವಲಯಗಳ ರಕ್ಷಣೆಯ ನಿಟ್ಟಿನಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ ರಕ್ಷಿಸಬೇಕಾಗಿದೆ ಎಂದು ಯದುವೀರ್ ಒಡೆಯರ್ ಟ್ವೀಟ್ ಮಾಡಿದ್ದಾರೆ.

ಮೇಟಗಳ್ಳಿಯ ಶ್ರೀ ಮಹಾಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಕಳವು



ಕಳ್ಳತನ ನಡೆದಿರುವ ಮೇಟಗಳ್ಳಿಯ ಶ್ರೀ ಮಹಾಲಿಂಗೇಶ್ವರ ಸ್ವಾಮಿ ದೇವಾಲಯ.

ಮೈಸೂರು, ನ.11(ಎಸ್‌ಬಿಡಿ)– ಮುಜರಾಯಿ ದೇವಸ್ಥಾನವೊಂದರ ಬೀಗ ಒಡೆದು, ದೇವರ ಕೊಳಗ ಇನ್ನಿತರ ಪೂಜಾ ಸಾಮಗ್ರಿಗಳನ್ನು ಕದ್ದೊಯ್ದಿರುವ ಘಟನೆ ಮೈಸೂರಿನ ಮೇಟಗಳ್ಳಿಯಲ್ಲಿ ನಡೆದಿದೆ.

ಮೇಟಗಳ್ಳಿಯಲ್ಲಿರುವ ಶ್ರೀ ಮಹಾಲಿಂಗೇಶ್ವರ ಸ್ವಾಮಿ ದೇವಸ್ಥಾನಕ್ಕೆ ನುಗ್ಗಿರುವ ಖದೀಮರು, ದೇವರಿಗೆ ಧರಿಸಿದ್ದ ಪಂಚಲೋಹದ ಕೊಳಗ, 2 ಕಂಚಿನ ತೂಗುದೀಪ, ಕಂಚಿನ ಚೊಂಬು, ಹಿತ್ತಾಳೆ ಚೊಂಬು, ತಾಮ್ರದ ಮಂಗಳಾರತಿ ತಟ್ಟೆಗಳು ಹಾಗೂ ಕೈಘಂಟೆ ಸೇರಿದಂತೆ ಸುಮಾರು 20,600 ರೂ. ಮೌಲ್ಯದ ಪದಾರ್ಥಗಳನ್ನು ದೋಚಿದ್ದಾರೆ.

ಅರ್ಚಕ ಮೋಹನ್ ಪ್ರಸಾದ್ ನ.6ರಂದು ಸಂಜೆ ಪೂಜೆ ಮುಗಿಸಿ, ದೇವಸ್ಥಾನದ ಬೀಗ ಹಾಕಿಕೊಂಡು ಮನೆಗೆ ಹೋಗಿದ್ದರು. ಮರುದಿನ ಬೆಳಗ್ಗೆ 9ಕ್ಕೆ ಎಂದಿನಂತೆ ದೇವಸ್ಥಾನಕ್ಕೆ ಬಂದಾಗ ಮುಂಬಾಗಿಲಿನ ಬೀಗ ಒಡೆದಿತ್ತು. ಗಾಬರಿಯಿಂದ ಒಳಹೋಗಿ ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಈ ಬಗ್ಗೆ ಅರ್ಚಕರು ಗ್ರಾಮ ಆಡಳಿತಾಧಿಕಾರಿಗೆ ಮಾಹಿತಿ ನೀಡಿದ್ದರು. ಬಳಿಕ ತಹಸೀಲ್ದಾರ್ ಮಹೇಶ್ ಕುಮಾರ್ ಸೂಚನೆ ಮೇರೆಗೆ ಆರ್‌ಐ ಹೇಮಂತ್ ಕುಮಾರ್ ಹಾಗೂ ಗ್ರಾಮ ಆಡಳಿತಾಧಿಕಾರಿ ಮಹೇಶ್ ದೇವಸ್ಥಾನಕ್ಕೆ ಭೇಟಿ ನೀಡಿ, ಮಾಹಿತಿ ಪಡೆದ ನಂತರ ಇಂದು ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾಂಜಾ ವ್ಯಸನಿಗಳ ಮೇಲೆ ಅನುಮಾನ

ಗಾಂಜಾ ವ್ಯಸನಿಗಳ ಕೈಚಳಕ?: ಮೇಟಗಳ್ಳಿ ರೈಲ್ವೆ ಹಳಿ ಪಕ್ಕದಲ್ಲಿ ರಿಂಗ್‌ರಸ್ತೆ ಸಂಪರ್ಕಿಸುವ ರಸ್ತೆಯಲ್ಲಿರುವ ಚೋಳರ ಕಾಲದ ಪುರಾತನ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಆವರಣ ಹಾಗೂ ಸಮೀಪದಲ್ಲಿ ರುವ ಸ್ಮಶಾನ ಗಾಂಜಾ ವ್ಯಸನಿಗಳ ಅಡ್ಡಾ ಆಗಿದೆ. ರಸ್ತೆ ಅಭಿವೃದ್ಧಿಯಾಗಿದ್ದರೂ ದೇವಸ್ಥಾನವಿರುವ ಪ್ರದೇಶ ವ್ಯಸನಿಗಳಿಗೆ ಪ್ರಶಸ್ತ ಜಾಗವಾಗಿದೆ. ಸಂಜೆಯಾದರೆ ಇಲ್ಲಿ ಗುಂಪು ಸೇರುತ್ತಾರೆ. ಅವರಲ್ಲೇ ಯಾರೋ ದೇವಸ್ಥಾನದ ಬೀಗ ಮುರಿದು ಕಳ್ಳತನ ಮಾಡಿರಬಹುದು ಎಂದು ಸ್ಥಳೀಯರು ಶಂಕಿಸಿದ್ದಾರೆ. ಪೊಲೀಸರು ಸ್ಥಳ ಪರಿಶೀಲನೆ ನಡೆಸಿದ್ದು, ಖದೀಮರ ಪತ್ತೆಗೆ ಕ್ರಮ ವಹಿಸಿದ್ದಾರೆ.

ಪಿಟೀಲು ವಾದಕ ಡಾ.ಮೈಸೂರು ಮಂಜುನಾಥ್ ಮನೆಗೆ ಕೇಂದ್ರ ಸಚಿವ ಸುರೇಶ್ ಗೋಪಿ ಭೇಟಿ

ಶಾಸ್ತ್ರೀಯ ಸಂಗೀತ ಕುರಿತಂತೆ ವಿಚಾರ ವಿನಿಮಯ



ಪಿಟೀಲು ಮಾಂತ್ರಿಕ ಡಾ.ಮೈಸೂರು ಮಂಜುನಾಥ್ ನಿವಾಸಕ್ಕೆ ಕೇಂದ್ರ ಸಚಿವ ಸುರೇಶ್ ಗೋಪಿ ಭಾನುವಾರ ಭೇಟಿ ನೀಡಿದ್ದರು.

ಮೈಸೂರು, ನ.11(ಎಸ್‌ಬಿಡಿ)– 'ಸಂಸ್ಕಾರ ಭಾರತಿ' ರಾಷ್ಟ್ರೀಯ ಅಧ್ಯಕ್ಷರೂ ಆದ ಪಿಟೀಲು ಮಾಂತ್ರಿಕ ಡಾ.ಮೈಸೂರು ಮಂಜುನಾಥ್ ಅವರ ನಿವಾಸಕ್ಕೆ ಭಾನುವಾರ ಕೇಂದ್ರ ಪ್ರವಾಸೋದ್ಯಮ ಇಲಾಖೆಯ ರಾಜ್ಯ ಸಚಿವ ಸುರೇಶ್ ಗೋಪಿ ಭೇಟಿ ನೀಡಿ, ಶಾಸ್ತ್ರೀಯ ಸಂಗೀತ ಇನ್ನಿತರ ಕಲೆಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡರು.

ಈ ಬಗ್ಗೆ ಪ್ರತಿಕ್ರಿಯಿಸಿದ ಡಾ.ಮೈಸೂರು ಮಂಜುನಾಥ್, ಕೇಂದ್ರ ಸಚಿವರಾದ ಸುರೇಶ್ ಗೋಪಿ ಅವರು ಅದ್ಭುತ ನಟ ಹಾಗೂ ಕಲಾಪ್ರೇಮಿ. ಸಂಗೀತದ ಬಗ್ಗೆ ಅಪಾರವಾದ ಅಭಿಮಾನ ಹೊಂದಿದ್ದಾರೆ. ವೈಯಕ್ತಿಕವಾಗಿ ನನ್ನ ಬಗ್ಗೆಯೂ ವಿಶೇಷ ಅಭಿಮಾನವಿಟ್ಟಿದ್ದಾರೆ. ಸರಳ ವ್ಯಕ್ತಿತ್ವದ ಅವರು ಭಾನುವಾರ ನಮ್ಮ ಮನೆಗೆ ಬಂದಿದ್ದರು. ಸುಮಾರು 2 ಗಂಟೆಗಳ ಕಾಲ ನಮ್ಮೊಟ್ಟಿಗಿದ್ದು, ಮಧ್ಯಾಹ್ನ ಬೋಜನ ಸ್ವೀಕರಿಸಿ, ಹಲವು ವಿಚಾರಗಳ ಬಗ್ಗೆ ಚರ್ಚಿಸಿದರು ಎಂದು ತಿಳಿಸಿದರು.

ಶಾಸ್ತ್ರೀಯ ಸಂಗೀತ, ಪ್ರಸ್ತುತದ ಸ್ಥಿತಿಗತಿ, ಪ್ರಗತಿಗೆ ಕೈಗೊಳ್ಳಬಹುದಾದ ಕ್ರಮಗಳು, ಈ ನಿಟ್ಟಿನಲ್ಲಿ ಕೇಂದ್ರ ಸರ್ಕಾರದ ಪ್ರೋತ್ಸಾಹದಾಯಕ ಕಾರ್ಯಕ್ರಮಗಳು, ಪ್ರವಾಸೋದ್ಯಮ ಇಲಾಖೆ ಮೂಲಕ ರೂಪಿಸಿರುವ ಹಲವು ಯೋಜನೆಗಳು, ಹೀಗೆ ಸಂಗೀತ– ಕಲೆಗೆ ಸಂಬಂಧಿಸಿದ ಹಲವು ವಿಚಾರಗಳ ಬಗ್ಗೆ ಚರ್ಚಿಸಿದರು. ಜೊತೆಗೆ ನಾನು ವಿಶ್ವದ ಹಲವು ದೇಶಗಳಲ್ಲಿ ಕಾರ್ಯಕ್ರಮ ನೀಡಿರುವುದು ಹಾಗೂ ಅಲ್ಲಿನ ಅನುಭವದ ಬಗ್ಗೆ ಕೇಳಿ ತಿಳಿದುಕೊಂಡರು. ಇದೇ ವೇಳೆ ಸಂಸ್ಕಾರ ಭಾರತಿ ಅಧ್ಯಕ್ಷನಾಗಿ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ನನ್ನನ್ನು ಅಭಿನಂದಿಸಿದರು. ನಾವೂ ಅವರನ್ನು ಅಭಿನಂದಿಸಿದೆವು ಎಂದು ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವ ಭವನದಲ್ಲಿ ಭಾನುವಾರ 'ಮೈಸೂರು ಸಂಗೀತ ಸುಗಂಧ' ಸಂಗೀತೋತ್ಸವದ ಸಮಾರೋಪ ಸಮಾರಂಭದಲ್ಲಿ ಸುರೇಶ್ ಗೋಪಿ ಅವರು, ಕಲಾವಿದರಿಗೆ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ವೇಳೆ, ಪ್ರಸಿದ್ಧ ಕಲಾವಿದರಾದ ಮೈಸೂರು ಮಂಜುನಾಥ್ ಹಾಗೂ ಮೈಸೂರು ನಾಗರಾಜ್ ಸಹೋದರರು ಹಲವು ವರ್ಷಗಳಿಂದ ಪರಿಚಿತರು ಎಂದು ತಿಳಿಸಿದ್ದರು.

ಮುಡಾ ಕ್ರೀಡಾಂಗಣ ಸ್ವಚ್ಛತೆ



ಲಯನ್ಸ್ ಅಂಬಾಸಿಡರ್ ಸಂಸ್ಥೆಯ ವತಿಯಿಂದ ವಿಜಯನಗರದ ಮುಡಾದ ಕ್ರೀಡಾಂಗಣದ ಆವರಣವನ್ನು ಸ್ವಚ್ಛಗೊಳಿಸಲಾಯಿತು. ಚಿತ್ರದಲ್ಲಿ ಸಂಸ್ಥೆಯ ಅಧ್ಯಕ್ಷ ಲಯನ್ ವಿ. ಶ್ರೀಧರ್, ಪಿ. ಮಲ್ಲಿಕಾರ್ಜುನಪ್ಪ, ವಲಯಾಧ್ಯಕ್ಷ ಲಯನ್ ಹೆಚ್.ಸಿ. ಕಾಂತರಾಜು ಮತ್ತಿತರರು ಉಪಸ್ಥಿತರಿದ್ದರು.

ಜಿಲ್ಲಾ ಮಟ್ಟದ ಶಿಕ್ಷಕರ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಗಳ ಆಯೋಜನೆ

ಮೈಸೂರು, ನ.11– 2024–25 ನೇ ಸಾಲಿನಲ್ಲಿ ತಾಲೂಕು ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಿಗೆ ಜಿಲ್ಲಾ ಮಟ್ಟದ ಶಿಕ್ಷಕರ ಸಹಪಠ್ಯ ಚಟುವಟಿಕೆಗಳ ಸ್ಪರ್ಧೆಗಳನ್ನು ನ.12 ರಂದು ಬೆಳಿಗ್ಗೆ 10 ಗಂಟೆಗೆ ಸರಸ್ವತಿಪುರಂನಲ್ಲಿರುವ ಜೆ.ಎಸ್.ಎಸ್. ಬಾಲಕಿಯರ ಪ್ರೌಢಶಾಲೆ ಆಯೋಜಿಸಲಾಗಿದೆ.

ಶಿಕ್ಷಕರು ಭಾವಗೀತೆ, ಆಶುಭಾಷಣ (ಕನ್ನಡ ಮಾಧ್ಯಮದಲ್ಲಿ), ಪ್ರಬಂಧ (ಕನ್ನಡ ಮಾಧ್ಯಮದಲ್ಲಿ), ಸ್ಥಳದಲ್ಲೇ ಪಾಠೋಪಕರಣಗಳ ತಯಾರಿಕೆ ಸ್ಪರ್ಧೆ (TLM), ಸ್ಥಳದಲ್ಲೇ ಚಿತ್ರ ಬರೆಯುವ ಸ್ಪರ್ಧೆ, ರಸಪ್ರಶ್ನೆ (ಸಾಮಾನ್ಯ ಜ್ಞಾನ) ಮತ್ತು ರಸಪ್ರಶ್ನೆ (ವಿಜ್ಞಾನ) ಸ್ಪರ್ಧೆಗಳಲ್ಲಿ ಭಾಗವಹಿಸಬಹುದಾಗಿದ್ದು, ಸದರಿ ವಿಜೇತ ಶಿಕ್ಷಕರು ಅಂದು ಬೆಳಿಗ್ಗೆ 10 ಗಂಟೆಗೆ ನಿಗಧಿತ ಶಾಲೆಯಲ್ಲಿ ಹಾಜರಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒನಕೆ ಓಬವ್ವ ಅವರ ಸಾಧನೆ, ಸಮಯಪ್ರಜ್ಞೆ ಮಹಿಳೆಯರಿಗೆ ಪ್ರೇರಣೆ

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ಅಭಿಮತ

ಮೈಸೂರು,ನ.11(ಎಂಟಿವೈ)– ಕತ್ತಿ, ಗುರಾಣಿ ಹಿಡಿದು ಬಂದ ಹೈದರಾಲಿ ಸೇನೆಯನ್ನು ಕೇವಲ ಒನಕೆ ಹಿಡಿದು ಹೋರಾಡಿ ಚಿತ್ರದುರ್ಗದ ಕೋಟೆಯನ್ನು ರಕ್ಷಣೆ ಮಾಡಿದ ಒನಕೆ ಓಬವ್ವ ಅವರ ಸಾಧನೆ, ಸಮಯ ಪ್ರಜ್ಞೆಯನ್ನು ಪ್ರೇರಣೆಯಾಗಿ ಸ್ವೀಕರಿಸಿ ಮಹಿಳೆಯರು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಲು ಪಣ ತೊಡಬೇಕು ಎಂದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಡಾ. ಪುಷ್ಪ ಅಮರನಾಥ್ ಸಲಹೆ ನೀಡಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಆಯೋಜಿಸಿದ್ದ ವೀರವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಒನಕೆ ಓಬವ್ವರ ಹೆಸರು ಚಿತ್ರದುರ್ಗದ ಇತಿಹಾಸದಲ್ಲಿ ಅಮರವಾಗಿದೆ. ಕರ್ನಾಟಕ ವೀರ ವನಿತೆಯರಾದ ಕಿತ್ತೂರು ಚೆನ್ನಮ್ಮ, ರಾಣಿ ಅಬ್ಬಕ್ಕರ ಸಾಲಿನಲ್ಲಿ ಒನಕೆ ಓಬವ್ವ ಒಬ್ಬರಾಗಿದ್ದಾರೆ. ಕತ್ತಿ ಗಿರಾಣಿಗಳ ಮುಂದೆ ಕೇವಲ ಒನಕೆಯನ್ನು ಹಿಡಿದು ತನ್ನ ಸಾಮ್ರಾಜ್ಯದ ರಕ್ಷಣೆಗೆ ಮುಂದಾದ ಸಾಮಾನ್ಯ ಹೆಣ್ಣು ಮಗಳು ಅಂದು ವೀರ ಸಾಹಸಿಯಾದಳು. ಚಿತ್ರದುರ್ಗದ ಕಲ್ಲಿನ ಕೋಟೆಗೆ ಹೈದರಾಲಿಯ ಸೈನ್ಯ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಆಕೆಯ ಸಮಯ ಪ್ರಜ್ಞೆಯನ್ನು ಸ್ಮರಿಸುವಂತದ್ದು. ಸ್ವಾರ್ಥವಿಲ್ಲದೆ ಪ್ರಾಮಾಣಿಕವಾಗಿ ತನ್ನ ಸಾಮ್ರಾಜ್ಯದ ರಕ್ಷಣೆಗಾಗಿ ನಿಂತ ಅವಳ ವೀರಸಾಹಸ ಮೆಚ್ಚುಗೆಗೆ ಪಾತ್ರವಾಗಿದೆ. ವೀರ ವನಿತೆಯಾದ ಓಬವ್ವ ಇಂದು ಸಾಮಾನ್ಯ ಹೆಣ್ಣುಮಕ್ಕಳಿಗೆ ಪ್ರೇರಣೆಯಾಗಿದ್ದಾರೆ ಎಂದರು.



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರಲ್ಲಿ ಜಿಲ್ಲಾಡಳಿತದ ವತಿಯಿಂದ ಆಯೋಜಿಸಿದ್ದ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷ ಡಾ. ಪುಷ್ಪ ಅಮರನಾಥ್ ಒನಕೆ ಓಬವ್ವ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಪ್ರಸ್ತುತ ಸಂದರ್ಭದಲ್ಲಿ ಮಹಿಳೆಯರು ಎಲ್ಲಾ ಕ್ಷೇತ್ರದಲ್ಲಿಯೂ ಸಾಧನೆ ಮಾಡುತ್ತಿರುವುದು ಶ್ಲಾಘನೀಯ. ಯಾವುದೇ ಸಂದರ್ಭದಲ್ಲೂ ಹೆದರದೇ ಧೈರ್ಯದಿಂದ ಮುಂದೆ ಸಾಗುವ ಮೂಲಕ ಸಾಧನೆ ಮಾಡಬೇಕು. ಒನಕೆ ಓಬವ್ವ ಅವರ ವೀರತನ, ತತ್ವ– ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, ಸಮಾಜದ ಏಳಿಗೆಗೆ ಮಹಿಳೆಯರ ಪಾತ್ರ ಮಹತ್ವವಾಗಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಒನಕೆ ಓಬವ್ವ, ಕಿತ್ತೂರು ರಾಣಿ ಚೆನ್ನಮ್ಮ ನೀಡಿದ ಕೊಡುಗೆ ಅಪಾರ. ಇಂದು ಮಹಿಳೆಯರು ಎಲ್ಲಾ ಕ್ಷೇತ್ರಗಳಲ್ಲಿ ಛಾಪು ಮೂಡಿಸುತ್ತಿರುವುದು ಒಳ್ಳೆ ಬೆಳವಣಿಗೆ. ತಾಯಿಗೆ ಮಿಗಿಲಾದ ವ್ಯಕ್ತಿಯಿಲ್ಲ, ಶಕ್ತಿಯೂ ಇಲ್ಲ. ಹೆಣ್ಣು ಕೇವಲ ಶಾಂತಿ, ಸಹನೆಯ ಸ್ವರೂಪವಲ್ಲ, ಅವರ ಇನ್ನೊಂದು ಮುಖ ಓಬವ್ವ, ಝಾನ್ಸಿರಾಣಿ ಲಕ್ಷ್ಮೀ ಬಾಯಿ, ರಾಣಿ ಚನ್ನಮ್ಮ, ಅಬ್ಬಕ್ಕ ದೇವಿ ಮುಂತಾದ ವೀರಮಹಿಳೆಯರ ಸಾಧನೆಯನ್ನು ಪ್ರೇರಣೆಯಾಗಿಸಿಕೊಳ್ಳುವಂತೆ ತಿಳಿಸಿದರು.

ವಿಶೇಷ ಉಪನ್ಯಾಸ ನೀಡಿದ ಲೇಖಕರಾದ ಬಿ.ಕೆ ಮೀನಾಕ್ಷಿ ಅವರು ಮಾತನಾಡಿ, ಚಿತ್ರದುರ್ಗದ ರೋಚಕ ಚರಿತ್ರೆಯಲ್ಲಿ ಒನಕೆ ಓಬವ್ವನ ಹೆಸರು ಇಂದಿಗೂ ಚಿರಸ್ಥಾಯಿ. ಒನಕೆ ಓಬವ್ವ 18 ನೇ ಶತಮಾನದ ಚಿತ್ರದುರ್ಗದ ಕೋಟೆಯ ಪಾಳೆಗಾರನಾಗಿದ್ದ, ಮದಕರಿ ನಾಯಕನ ಕೋಟೆಯ ಕಾವಲುಗಾರ ಕಹಳೆ ಮುದ್ದಹನುಮಪ್ಪನ ಹೆಂಡತಿ. ಚಿತ್ರದುರ್ಗದ ಕಲ್ಲಿನ ಕೋಟೆಯ ವೀರ ಮಹಿಳೆ ಒನಕೆ ಓಬವ್ವ ಅವರು ಹೈದರಾಲಿ ಸೈನಿಕರ ವಿರುದ್ಧ ಹೋರಾಡಿ ವೀರ ಮರಣವನ್ನಪ್ಪಿದರು. ಮದಕರಿ ನಾಯಕರ ಪ್ರಾಂತ್ಯದಲ್ಲಿ ಹೈದರಾಲಿಯ ಸೈನಿಕರನ್ನು ಒನಕೆ ಓಬವ್ವ ಏಕಾಂಕಿಯಾಗಿ ಎದುರಿಸಿದ್ದು ಚರಿತ್ರೆಯಲ್ಲಿ ಎಂದೂ ಮರೆಯಲಾಗದು ಎಂದರು.

ಇದೇ ವೇಳೆ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಶಾಲಾ ಮಕ್ಕಳಿಗಾಗಿ ಆಯೋಜಿಸಲಾಗಿದ್ದ, ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಮೇಯರ್ ಪುರುಷೋತ್ತಮ್, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಚಂದ್ರಶೇಖರ್, ಮುಖಂಡರಾದ ಸೋಮಯ್ಯ ಮಲೆಯೂರು, ಯಮುನಾ, ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕರಾದ ಪ್ರಸನ್ನ, ವಿವಿಧ ಶಾಲೆಯ ವಿದ್ಯಾರ್ಥಿಗಳು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಬಘೀರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಸಂಗೀತಾ ಸಂತೋಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬಘೀರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ಕ)	4 ಪ್ರದರ್ಶನಗಳು
ಸಂಗಂ	
ನವಗ್ರಹ (ಕ)	4 ಪ್ರದರ್ಶನಗಳು
ಲಿಡೋ	
ಎಲಾ ಕುನ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಗಂ ಅಗೇನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಸಂಗೀತಾ ಸಂತೋಷ (ಕ)	2 ಪ್ರದರ್ಶನಗಳು
ಆದಿ ಪರ್ವ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಲಕ್ಕಿ ಭಾಸ್ಕರ್ (ತೆ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಲಕ್ಕಿ ಭಾಸ್ಕರ್ (ಮ): ರಾ.9.55ಕ್ಕೆ.
ಸ್ಕ್ರೀನ್ 2	ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.10.55ಕ್ಕೆ, ಬ್ಲಡಿ ಬೆಗ್ಗರ್ (ತ): ಮ.1.20ಕ್ಕೆ, ಬ್ರದರ್ (ತ): ಸಂ.4.20ಕ್ಕೆ, ಬಘೀರ (ಕ): ರಾ.7.05ಕ್ಕೆ, ಕ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಅಮರನ್ (ತ): ಬೆ.10.05ಕ್ಕೆ, ಮ.1.15ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಅನ್ನ (ಕ): ಸಂ.4.30ಕ್ಕೆ
ಸ್ಕ್ರೀನ್ 4	ಬಘೀರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.


ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಅಂಬೇಡ್ಕರ್ ಇಸ್ಲಾಂ ಧರ್ಮಕ್ಕೆ ಸೇರಲು ಮುಂದಾಗಿದ್ದರು!

ಕಾಂಗ್ರೆಸ್ ಮುಖಂಡ ಅಜ್ಜಂ ಪೀರ್ ಖಾದ್ರಿ ವಿವಾದಾತ್ಮಕ ಹೇಳಿಕೆ



ಹಾವೇರಿ, ನ.11– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಇಸ್ಲಾಂ ಧರ್ಮಕ್ಕೆ ಸೇರಲು ಸಿದ್ಧತೆ ಮಾಡಿಕೊಂಡಿದ್ದರು. ಆದರೆ ಕೊನೆ ಕ್ಷಣದಲ್ಲಿ ಭೌದ್ಧ ಧರ್ಮ ಸ್ವೀಕರಿಸಿದರೆಂದು ನಾನು ಓದಿದ್ದೆ. ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕರಿಸದೇ ಇದ್ದಿದ್ದರೆ ದಲಿತರು ಮುಸ್ಲಿಂ ಆಗುತ್ತಿದ್ದರು ಎಂದು ಕಾಂಗ್ರೆಸ್ ಮುಖಂಡ ಸಯ್ಯದ್ ಅಜ್ಜಂಪೀರ್ ಖಾದ್ರಿ ಅವರು ವಿವಾದಾತ್ಮಕ ಹೇಳಿಕೆ ನೀಡಿದ್ದಾರೆ.

ಶಿಗ್ಗಾಂವಿಯಲ್ಲಿಂದು ನಡೆದ ಆದಿಜಾಂಬವ ಸಮಾಜದ ಸಮಾವೇಶದಲ್ಲಿ ಮಾತನಾಡಿದ ಖಾದ್ರಿ, ಅಂಬೇಡ್ಕರ್ ಅವರು ಇಸ್ಲಾಂ ಧರ್ಮ ಸ್ವೀಕರಿಸಲು ಎಲ್ಲಾ ಸಿದ್ಧತೆ ಆಗಿತ್ತು. ಆದರೆ ಕೊನೆ ಕ್ಷಣದಲ್ಲಿ ಬೌದ್ಧ ಧರ್ಮ ಸ್ವೀಕರಿಸಿದರು ಎಂದು ನಾನು ಓದಿ ತಿಳಿದುಕೊಂಡಿದ್ದೇನೆ. ಒಂದು ವೇಳೆ ಅಂಬೇಡ್ಕರ್ ಬೌದ್ಧ ಧರ್ಮ ಸ್ವೀಕರಿಸದೇ ಮುಸ್ಲೀಂ ಧರ್ಮ ಸ್ವೀಕರಿಸಿದ್ದರೆ ದಲಿತರು ಮುಸ್ಲಿಂ ಆಗುತ್ತಿದ್ದರು. ಆರ್.ಬಿ.ತಿಮ್ಮಾಪುರ ಹೋಗಿ ರಹೀಮ್ ಖಾನ್ ಆಗುತ್ತಿದ್ದರು. ಡಾ.ಜಿ.ಪರಮೇಶ್ವರ್ ಹೋಗಿ ಪೀರ್ ಸಾಹೇಬ್ ಆಗುತ್ತಿದ್ದರು, ಎಲ್.ಹನುಮಂತಪ್ಪ ಹೋಗಿ ಹಸನ್ ಸಾಬ್ ಆಗುತ್ತಿದ್ದರು ಎಂದು ಹೇಳಿದರು.ಆದರೆ ಈಗಲೂ ಎಲ್ಲೆಲ್ಲಿ ದಲಿತ ಕೇರಿ ಇದೆಯೋ ಅಲ್ಲೆಲ್ಲಾ ಪಕ್ಕದಲ್ಲೇ ಮುಸ್ಲಿಂ ದರ್ಗಾ ಇದೆ. ದಲಿತರಿಗೂ, ಮುಸ್ಲಿಮರಿಗೂ ಇರುವ ಬಾಂಧವ್ಯ ಹಾಗೆ ಇದೆ ಎಂದರು.

2024–25ನೇ ಸಾಲಿನ ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ನ11– ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ, ಬೆಂಗಳೂರು ವತಿಯಿಂದ 2023–24 ನೇ ಸಾಲಿನ ಪುಸ್ತಕ ಪ್ರಶಸ್ತಿಗಾಗಿ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಪ್ರಶಸ್ತಿಗೆ ಬಂಜಾರ ಸಮುದಾಯದ ಲೇಖಕರು ಸ್ವತಃ ತಾವೇ ಬರೆದಿರುವ ಪ್ರಕಾರದಲ್ಲಿ ವರ್ಷದಲ್ಲಿ ಕನಿಷ್ಠ 3 ಶೀರ್ಷಿಕೆಗಳಾದರೂ ಪ್ರಕಟವಾಗಿದ್ದಲ್ಲಿ ಮಾತ್ರ ಬಹುಮಾನಕ್ಕೆ ಪರಿಗಣಿಸಲಾಗುವುದು. ಈ ಕೃತಿಗಳು 2022–23(ಪ್ರಸಕ್ತ ಸಾಲಿಗೆ ಮಾತ್ರ ಸೀಮಿತವಾಗಿ)ರ ಹಿಂದೆ ಮುದ್ರಣಗೊಂಡ ಕೃತಿಗಳು ಹಾಗೂ 2023–24 ರ ಸಾಲಿನಲ್ಲಿ ಪ್ರಕಟವಾಗಿರಬೇಕು.

ಬಂಜಾರ ಸಮುದಾಯದ ಸಂಸ್ಕೃತಿ, ಭಾಷೆ, ಸಾಹಿತ್ಯ, ಕಲೆಗಳು, ಕಲಾವಿದರು, ಸಾಂಸ್ಕೃತಿಕ ವೀರರು/ನಾಯಕರು ಹಾಗೂ ಸಾಧಕರು, ಈ ವಿಷಯಗಳಿಗೆ ಪೂರಕವಾಗಿರಬೇಕು. ಬಂಜಾರ ಸಮುದಾಯದ ಲೇಖಕರು ಸ್ವತಃ ತಾವೇ ಬರೆದಿರುವ ಸೃಜನಶೀಲ, ಜನಪರ ಬರಹಗಳಾದ ಕಥಾ ಸಂಕಲನ, ಕಾದಂಬರಿ, ಕವನ ಸಂಕಲನ, ಜೀವನ ಚರಿತ್ರೆ ಹಾಗೂ ಪ್ರಬಂಧ ಸಂಕಲನ ಕುರಿತ ಪುಸ್ತಕಗಳನ್ನೂ ಸಹ ಪ್ರಶಸ್ತಿಗಾಗಿ ಪರಿಗಣಿಸಲಾಗುತ್ತದೆ.

ಆಸಕ್ತರು ತಾವು ಪ್ರಕಟಿಸಿದ ಕೃತಿಯ 3 ಪ್ರತಿಗಳೊಂದಿಗೆ ಸ್ವ ವಿವರಗಳನ್ನು ಒಳಗೊಂಡ ಅರ್ಜಿಯನ್ನು ನವೆಂಬರ್ 30 ರೊಳಗಾಗಿ ಬೆಂಗಳೂರಿನ ಜೆ.ಸಿ ರಸ್ತೆಯಲ್ಲಿರುವ ಕನ್ನಡ ಭವನದ ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ರಿಜಿಸ್ಟ್ರಾರ್ ಅವರ ಕಚೇರಿಗೆ ಖುದ್ದಾಗಿ ಅಥವಾ ಅಂಚೆ, ಕೋರಿಯರ್ ಮೂಲಕ ಕಳುಹಿಸಿಕೊಡಬಹುದು.

ಹೆಚ್ಚಿನ ಮಾಹಿತಿಗಾಗಿ ದೂ.ಸಂ: 080–29917745 ಅನ್ನು ಸಂಪರ್ಕಿಸಬಹುದು ಎಂದು ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ 02-11-2024ರ ಶನಿವಾರದಂದು ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ 12-11-2024ರ ಮಂಗಳವಾರ ಬೆಳಗ್ಗೆ 10.30 ಗಂಟೆಗೆ ಹೊಂಗಳ್ಳಿ–ಮೈಸೂರು ಪೈಪ್ ಲೈನ್ ರಸ್ತೆ, ಮುನೇಶ್ವರ ಸ್ವಾಮಿ ದೇವಸ್ಥಾನ, ಮಳ್ಳಿಗೆಪುರ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಮೃತರ ಧರ್ಮಪತ್ನಿ ಶ್ರೀಮತಿ ಕೆ.ಎಸ್. ಸ್ವರ್ಣಲತಾ ಮತ್ತು ಮಕ್ಕಳು ಬಿ.ಕೆ.ಮರೀಗೌಡರ ಕುಟುಂಬವರ್ಗದವರು.

ಡಾ|| ಬಿ.ಎಂ.ಮರೀದೇವೇಗೌಡ

PUBLIC NOTICE

Notice is hereby given that my client is intending to purchase the schedule mentioned property from its owners Smt. Ramadevi Prasad, Siddartha Abhimanyu Ramanuja Acharya and Sri Siddartha Mahaveer Acharya, children of Late Siddartha Acharya V. and Smt. Andal S Charry, Residing at Door No:14, 14/1, 14/2, Temple Road, Jayalakshmipuram, Devaraja Mohalla, Mysore.

Any person/s having or claiming any right, title, estate or interest by way of inheritance, mortgage, sale, lease lien, charge, trust, maintenance, easements, transfer, license, possession, gift, encumbrance or in whatsoever manner are hereby required to give notice of the same to the undersigned in the address mentioned below within 10 days from the date of publication thereof, together with the copies of all documents on the basis of which such claims are made, failing which any such right, title, interest or claim, if any will be deemed to have been waived and not binding on my client and my client will proceed to conclude the transaction of purchase without reference to the same, if any.

SCHEDULE: The House Property bearing No. 14, 14/1, 14/2 bearing property No. 39- 2-531-14, measuring East to West 48.15 meters and North to South 30.48 meters (158 x 100) totally measuring 538.83 sq meter consisting of Ground floor measuring 205.315 sq.meters and Ground floor measuring 34.93 sq.meters and First floor measuring 264.4 sq. Meters RCC Building with Red Oxide flooring situated at Temple Road, Jayalakshmipuram, Devaraja Mohalla, Mysore, Bounded on the East by : Temple Road, West by : Site, North by : Site No.13, South by : Site No.15

Sd/- RAVI KIRAN S. B.Sc., LL.B. ADVOCATE, KAR No. 713/2000,
OFFICE: #1143/1E, 1st Floor, Chanakya Circle Geetha Road, Chamarajapuram, MYSURU-570 004, Mobile: 9980776068

Place: Mysore, Date: 11-11-2024

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ಪವಿತ್ರ ಬಿನ್ ಮಹದೇವಯ್ಯ ಇವರ ಇರಾದೆಯ ಮೇರೆಗೆ ಈ ಕೆಳಕಂಡಂತೆ ಸಾರ್ವಜನಿಕ ಪ್ರಕಟಣೆ ಹೊರಡಿಸಲಾಗಿದೆ.

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ಅಂಜಲಿ.ಕೆ ಇವರಿಗೆ ಕೊಪ್ಪಲೂರು ಆಶ್ರಯ ಯೋಜನೆಯಡಿಯಲ್ಲಿ 20X30 ಅಡಿ ಅಳತೆಯುಳ್ಳ ಖಾಲಿ ನಿವೇಶನ ಮಂಜೂರಾತಿಯಾಗಿದ್ದು ನಿವೇಶನ ಸಂಖ್ಯೆ 1016 ಆಗಿರುತ್ತದೆ. ಇವರು ಸದರಿ ಸ್ವತ್ತಿನ ಮೇಲೆ ಸಾಲ ತೆಗೆದುಕೊಳ್ಳಲು ಹಾಗೂ ಮನೆ ಕಟ್ಟಲು ತೀರ್ಮಾನಿಸಿರುತ್ತಾರೆ. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಬ್ಯಾಂಕ್ ಅಥವಾ ಆರ್ಥಿಕ ಸಂಸ್ಥೆಗಳು ಒಳಗೊಂಡಂತೆ ಯಾವುದೇ ರೀತಿಯಾದ ಹಕ್ಕು, ಅಧಿಕಾರ, ತಂಟೆ ತಕರಾರುಗಳು ಇದ್ದಲ್ಲಿ ಪ್ರಕಟಣೆಯಾದ 45 ದಿನಗಳ ಒಳಗೆ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿರುತ್ತದೆ.

ಮೇಲ್ಕಂಡ ಅವಧಿ ಮುಗಿದ ನಂತರ ಬರುವ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ ಎಂಬುದಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ, ಮೈಸೂರು ನಗರ ಪಾಲಿಕೆ ವ್ಯಾಪ್ತಿಗೆ ಒಳಪಟ್ಟಿರುವ ಕೊಪ್ಪಲೂರು ಗ್ರಾಮದ ಆಶ್ರಯ ಯೋಜನೆಯ ಮಂಜೂರಾಗಿರುವ ನಿವೇಶನ ನಂ.1016ರ ವಿಸ್ತೀರ್ಣ **20x30** ಅಡಿಗಳುಳ್ಳ ನಿವೇಶನಕ್ಕೆ ಚಕ್ಕುಬಂಧಿ:
ಪೂರ್ವಕ್ಕೆ:1015ರ ಖಾಲಿ ನಿವೇಶನ
ಪಶ್ಚಿಮಕ್ಕೆ: 1017ರ ಖಾಲಿ ನಿವೇಶನ, ಉತ್ತರಕ್ಕೆ : ಹೆಚ್.ಡಿ.ಕೋಟೆ ಹಾಗೂ ನಂಜನಗೂಡು ರಸ್ತೆ,
ದಕ್ಷಿಣಕ್ಕೆ: ರಸ್ತೆ

ಸಹಿ/– ಎಂ.ಪಿ.ತಮ್ಮಯ್ಯ.ಬಿ.ಎ, ಎಲ್.ಎಲ್.ಬಿ
ವಕೀಲರು ಮತ್ತು ಕಾನೂನು ಸಲಹೆಗಾರರು
ವಿಳಾಸ:– ಕಛೇರಿ ಸಂ.519, ಶ್ರೀನಿವಾಸ ಕಾಂಪ್ಲೆಕ್ಸ್, ತ್ಯಾಗರಾಜ ರಸ್ತೆ, ಅಗ್ರಹಾರ, ಕೆ.ಆರ್.ಮೊಹಲ್ಲಾ, ಮೈಸೂರು 15. ಮೊ: 9845304457

ದಿನಾಂಕ: 11/11/2024

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ),

CA-12, 2ನೇ ಹಂತ, ವಿಜಯನಗರ, ಮೈಸೂರು–570017,
ದೂರವಾಣಿ ಸಂಖ್ಯೆ: 0821-2514823, ಇಮೇಲ್: vijayanagarasclub@gmail.com

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಅಲ್ಪಾವಧಿ)

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ) ಇವರು ಮ್ಯಾನ್ಯುಯಲ್ ಮುಖಾಂತರ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಹಾಗೂ ಹೆಸರಾಂತ ಸ್ಥಳೀಯ ಕಟ್ಟಡ ನಿರ್ಮಾಣಗಾರರು ಇವರಲ್ಲಿ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್ ಆಹ್ವಾನಿಸಲಾಗಿದೆ. ವಿವರ ಕೆಳಕಂಡಂತಿದೆ.

ಕ್ರ.ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟಮೊತ್ತ	ಇ.ಎಂ.ಡಿ	ಕೆಲಸ ಪೂರೈಸಲು ನಿಗದಿ ಪಡಿಸಿದ ಅವಧಿ	ಟೆಂಡರ್ ಫಾರಂ ಮೊತ್ತ
1.	ಕ್ಲಬ್ ಕಟ್ಟಡದ 3ನೇ ಮಹಡಿಯಲ್ಲಿನ ರೂಮುಗಳ ನವೀಕರಣ ಕಾಮಗಾರಿ	12 ಲಕ್ಷಗಳು	12 ಸಾವಿರ ರೂಪಾಯಿಗಳು	2 ತಿಂಗಳು	1000/–

1. ಟೆಂಡರ್ ಫಾರಂಗಳನ್ನು ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ)ನ ಕಛೇರಿ CA No.12, 2ನೇ ಹಂತ, ವಿಜಯನಗರ, ಮೈಸೂರು ಇಲ್ಲಿ ದಿನಾಂಕ: 16–11–2024ರೊಳಗಾಗಿ ಕಛೇರಿಯ ವೇಳೆಯಲ್ಲಿ ಪಡೆಯಲು ತಿಳಿಸಿದೆ. ದೂರವಾಣಿ ಸಂಖ್ಯೆ 9972829472
2) ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ದಿನಾಂಕ 19/11/2024ರೊಳಗೆ ಬೆಳಿಗ್ಗೆ 11.00 ರಿಂದ 2.00ರವರೆಗೆ ಮತ್ತು ಸಂಜೆ 6.00 ರಿಂದ 9.00ರವರೆಗೆ ಕ್ಲಬ್‌ನ ಕಚೇರಿಯಲ್ಲಿ ಸಲ್ಲಿಸುವುದು.

ವಿಜಯನಗರ ಸ್ಪೋರ್ಟ್ಸ್ ಕ್ಲಬ್ (ರಿ), ಪರವಾಗಿ

ಹೆಚ್.ಎಂ.ರಾಮಚಂದ್ರ
ಸಹಿ/– ಅಧ್ಯಕ್ಷರು

ಎನ್.ಎಲ್.ಶೇಖರ್
ಸಹಿ/– ಕಾರ್ಯದರ್ಶಿ

ವಿ.ಸೂ: ಗುತ್ತಿಗೆದಾರರ ಆಯ್ಕೆ ಕುರಿತಂತೆ ಕಾರ್ಯಕಾರಿ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ನಗರಸಭಾ ಕಾರ್ಯಾಲಯ, ಹಾಸನ, ಬಿ.ಎಂ. ರಸ್ತೆ, ಸಂತೇಪೇಟೆ ವೃತ್ತ, ಹಾಸನ.

Email:commn_hassan@yahoo.com ದೂರವಾಣಿ: 08172–268276, 263033 web: http://www.hassancity.gov.in ಸಹಾಯವಾಣಿ: 233702 ಫ್ಯಾಕ್ಸ್: 234792

ಸಂ:ಪೌಆ/ಹಾನಸ/ಇ.ವಿ/ಜೆ.ಇ–2/ಟೆಂಡರ್ ಶಾಖೆ/2024–25 ದಿನಾಂಕ07–11–2024

ಅಲ್ಪಾವಧಿ ಟೆಂಡರ್ ಪ್ರಕಟಣೆ : ಕೆ.ಪಿ.ಪಿ. ಪೋರ್ಟಲ್ ಮೂಲಕ :

2023–24ನೇ ಸಾಲಿನ ಎಸ್.ಎಫ್.ಸಿ. ಮುಕ್ತ ನಿಧಿ ಯೋಜನೆಯ ಅನುದಾನದಡಿಯಲ್ಲಿ ಈ ಕೆಳಕಂಡ ವಿವರದ ಕಾಮಗಾರಿಗಳನ್ನು ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆಯ ಗುತ್ತಿಗೆದಾರರಿಂದ ಷರತ್ತುಗಳಿಗೊಳಪಟ್ಟು ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

ಕ್ರ. ಸಂ	ಕಾಮಗಾರಿ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)	ಮೀಸಲಾತಿ
1	DMA/2024-25/OW/WORK_INDENT31919	49.00	90,920.00	ಸಾಮಾನ್ಯ
2	DMA/2024-25/RD/WORK_INDENT31920	41.00	69,500.00	ಸಾಮಾನ್ಯ
3	DMA/2024-25/RD/WORK_INDENT31921	49.24	83,460.00	ಸಾಮಾನ್ಯ
4	DMA/2024-25/RD/WORK_INDENT31922	48.50	82,203.00	ಸಾಮಾನ್ಯ

1.ಟೆಂಡರ್ ಫಾರಂ ಬೆಲೆ– ಕೆ.ಪಿ.ಪಿ. ಪೋರ್ಟಲ್‌ನಂತೆ ಕಾಲಾವಧಿ– 03 ತಿಂಗಳು (ಮಳೆಗಾಲ ಹೊರತು ಪಡಿಸಿ) 1.ಇ–ಪ್ರೊಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 15–11–2024 ರ ಸಂಜೆ 17.00 ಗಂಟೆಯವರೆಗೆ. 2.ಟೆಂಡರ್ ತೆರೆಯುವ ದಿನಾಂಕ: 16–11–2024ರ ಬೆಳಗ್ಗೆ 17.30 ಗಂಟೆಗೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ಕೆಲಸದ ವೇಳೆಯಲ್ಲಿ ಮತ್ತು https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ. ಕಾರಣಾಂತರಗಳಿಂದ ಯಾವುದೇ ಬದಲಾವಣೆಗಳಾದಲ್ಲಿ ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಗುತ್ತಿಗೆದಾರರು ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ.

ವಾಸಾಸಂಇ/ಹಿಸನಿ/ಹಾಸನ/623/ಕೆಎಸ್ಎಂಸಿಎ/2024–25

ಸಹಿ/–ಪೌರಾಯುಕ್ತರು ನಗರಸಭೆ, ಹಾಸನ